Mr. SPEAKER.—I have always requested the Leader of the Opposition that he should get in to touch with the Leader of the House and talk over these matters.

MYSORE LAND REVENUE (AMENDMENT) BILL, 1965.

† Sri M. V. KRISHNAPPA (Minister for Revenue).—I beg to move :

"That the Mysore Land Revenue (Amendment) Bill, 1965, be taken into consideration".

Mr. SPEAKER.—Motion moved :

"That the Mysore Land Revenue (Amendment) Bill, 1965, be taken into consideration.

†ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಾಮಿ, ಮೈಸೂರು ಲ್ಯಾಂಡ್ ರೆವೆನ್ಯೂ ಆಕ್ಟಿನಲ್ಲಿ ಕಂದಾಯ ನಿಷ್ಕರ್ಷೆ ಮಾಡುವಾಗ್ಗೆ ಒಂದು ಪ್ರಿನ್ಸಿಪಲ್ ಅದರಲ್ಲಿ ನಿಷ್ಕರ್ಷೆಯಾಗಿದೆ. ಆ ಪ್ರಿನ್ಸಿಪಲ್ ಪ್ರಕಾರ ಆರೂಕಾಲು ಪರ್ಸೆಂಟ್ ಖುಷ್ಕಿ ಜಮೀನು ತರೀಜಮೀನು ಬಾಗಾಯಿತು ಜಮೀನು ಇವುಗಳಿಗೆ ಹಾಕಬೇಕೆಂದು ಅದರಲ್ಲಿದೆ. ಇದರ ಪ್ರಕಾರ ಸರ್ವೆ ಸೆಟ್ಲ್‌ಮೆಂಟ್ ಕೆಲಸ ಪೂರೈಸಿ ರಿವಿಜನ್ ಸೆಟ್ಲ್‌ಮೆಂಟ್ ರಿಪೋರ್ಟು ಸಭೆಯ ಮುಂದೆ ಇದೆ. ಈ ರಿಪೋರ್ಟ ವಿಷಯಕ್ಕೆ ಐದಾರು ದಿವಸ ಮಾನ್ಯ ಸಭೆ ಕೂಲಂಕಷವಾಗಿ ಚರ್ಚೆ ನಡೆಸಿದೆ. ಈ ಮಧ್ಯೆ ಆರೂಕಾಲು ಪರ್ಸೆಂಟ್ ಪ್ರಕಾರ ಲೆಕ್ಕ ಹಾಕಿದರೆ ರೈತನಿಗೆ ಬಹಳ ಜಾಸ್ತಿಯಾಗುತ್ತದೆ ಸರ್ವೆ ಸೆಟ್ಲ್‌ಮೆಂಟಿನಲ್ಲಿ ಇರುವ ಕಂದಾಯ ಸರಕಾರ ಯೋಚನೆ ಮಾಡಿ ಆರೂ ಕಾಲು ಪರ್ಸೆಂಟು ಎಲ್ಲದಕ್ಕೂ ಹಾಕುವುದಕ್ಕಿಂತ ಆ ಬೆಳೆಗಳ ಕಷ್ಟದುಃಖ ಗಮನಕ್ಕೆ ತೆಗೆದುಕೊಂಡು ಅದರ ಪ್ರಕಾರ ಕಂದಾಯ ಹಾಕಬೇಕು ಎಂದು ಹೇಳಿ ಈ ರೆವೆನ್ಯೂ ಆಕ್ಟ್‌ನಲ್ಲಿ ಸೂಕ್ತ ಬದಲಾವಣೆ ಮಾಡುವುದಕ್ಕೋಸರ ಈ ತಿದ್ದುಪಡಿ ತಂದಿದ್ದೇವೆ. ಇದರ ಪ್ರಕಾರ ಈಗ ಇರುವ ಆರೂಕಾಲು ಪರ್ಸೆಂಟ್ ಹೊರಟು ಹೋಗುತ್ತದೆ.

[MR. DEPUTY SPEAKER in the Chair.]

2-30 P.M.

ಎಲ್ಲ ಖುಷ್ಕಿ ಜಮಾನಿಗೂ ಶೇಕಡ ಆರೂಕಾಲು ಎಂದು ಇದ್ದುದನ್ನು ಇನ್ನು ಮುಂದೆ ಶೇಕಡ 4ಕ್ಕೆ ಇಳಿಸಲಾಗುವುದು. ಮೈಸೂರು ಸಂಸ್ಥಾನದಲ್ಲಿ 2 ಕೋಟಿ 80 ಲಕ್ಷ ಎಕರೆ ಖುಷ್ಕಿ ಜಮಾನಿದೆ. ಇದರಲ್ಲಿ ಸಾಮಾನ್ಯವಾದ ಖುಷ್ಕಿ ಜಮಾನು 2 ಕೋಟಿ 55 ಲಕ್ಷ ಎಕರೆಗಳಿದೆ. ಖುಷ್ಕಿ ಜಮಾನನ್ನು ಇಟ್ಟುಕೊಂಡಿರತಕ್ಕ ರೈತರಿಗೆ ಹೆಚ್ಚಿನ ಕಂದಾಯದ ಹೊರೆ ಆಗಬಾರದೆಂದು ಈ ಕಂದಾಯದ ರೇಟನ್ನು ಆರೂಕಾಲು ಪರ್ಸೆಂಟಿನಿಂದ 4 ಪರ್ಸೆಂಟಿಗೆ ಇಳಿಸಲಾಗಿದೆ. ಈ ಕಂದಾಯವನ್ನು ಆವರೇಜ್ ಗ್ರಾಸ್ ಇನ್‌ಕಂ ಮೇಲೆ ಹಾಕುವುದಾಗಿರುತ್ತದೆ. ಇನ್ನು ಮುಂದಕ್ಕೆ ತರೀ ಜಮಾನಿಗೂ ಹೀಗೆ ಖುಷ್ಕಿ ಕಂದಾಯವನ್ನೇ ಆಧಾರವಾಗಿಟ್ಟುಕೊಂಡು ಖುಷ್ಕಿ ಕಂದಾಯ ಮತ್ತು ಅದಕ್ಕೆ ವಾಟರ್ ರೇಟನ್ನು ಮಾತ್ರ ಹಾಕಲಾಗುವುದು. ಅದೇ ರೀತಿ ಇನ್ನು ಮುಂದಕ್ಕೆ ಈ ರೆನ್‌ಫೆಡ್ ವೆಟ್‌ಲ್ಯಾಂಡ್ ಮತ್ತು ರೇನ್‌ಫೆಡ್ ಗಾರ್ಡನ್ ಲ್ಯಾಂಡುಗಳಿಗೂ ಹೀಗೆ ಕಂದಾಯವನ್ನು ನಿಗದಿ ಮಾಡಲಾಗುವುದು. ಇಂಥ ಜಮಾನು ರಾಜ್ಯದ ಧಾರ್ವಾಡ, ಖಾನಾಪುರ, ಬೆಳಗಾಂ, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು ಇತ್ಯಾದಿ ಕಡೆಗಳಲ್ಲಿ ಜಾಸ್ತಿಯಾಗಿರುತ್ತದೆ. ಅಲ್ಲಿರತಕ್ಕ ಭೂಮಿಯಲ್ಲಿ ರೇನ್‌ಫೆಡ್ ತರೀ ಭೂಮಿಯೇ ಜಾಸ್ತಿ. ಅಲ್ಲಿ ಸರ್ಕಾರದವರೇನೂ ಕೆರೆ ಕಟ್ಟೆಗಳನ್ನು ಮಾಡಿಸಿ ಆ ಭೂಮಿಗಳಿಗೆ ನೀರನ್ನೊದಗಿಸುತ್ತಿಲ್ಲ. ಅಲ್ಲಿ ದೇವರೇ ಮಳೆಯನ್ನು ಸುರಿಸಿ ಅಲ್ಲಿ ಬೆಳೆಯಾಗುತ್ತದೆ. ಇಂಥ ಜಮಾನನ್ನೆಲ್ಲಾ ಇನ್ನು ಮುಂದಕ್ಕೆ ರೇನ್‌ಫೆಡ್ ತರಿ ಮತ್ತು ರೇನ್‌ಫೆಡ್ ಗಾರ್ಡನ್ ಲ್ಯಾಂಡುಗಳೆಂದು ನಿಗದಿ ಮಾಡಿ ಅವುಗಳಿಗೂ ಈ ಖುಷ್ಕಿ ಕಂದಾಯವನ್ನೇ ಅಂದರೆ ಶೇಕಡ 4ನ್ನೇ ಹಾಕಬೇಕೆಂದು ಹೇಳಿದೆ. ಇಂಥ ಜಮಾನು ನಮ್ಮಲ್ಲಿ ಅಂದರೆ ರೇನ್‌ಫೆಡ್

ವೆಟ್ ಜಮೀನು ಎರಡೂವರೆ ಕೋಟಿ ಎಕರೆಗಳಾಗಬಹುದು, ಇನ್ನು ರೇನ್‌ಫೆಡ್ ಗಾರ್ಡನ್, ಗಾರ್ಡನ್ ಲ್ಯಾಂಡ್ 10 ಲಕ್ಷ ಎಕರೆಗಳಾಗಬಹುದು. ಇದೆಲ್ಲವೂ ಖುಷ್ಕಿ ಜಮೀನಿಗೇ ಸೇರುತ್ತದೆ. ಈ ಭೂಮಿಗಳಿಗೂ ಮುಂದಕ್ಕೆ 4 ಪರ್ಸೆಂಟನ್ನೇ ಹಾಕಲಾಗುತ್ತದೆ. ಇದನ್ನು ಬಿಟ್ಟರೆ ಇನ್ನುಳಿದದ್ದು ಬಾಗಾಯಿತು ಜಮೀನು. ಆದರೆ ಈ ಬಾಗಾಯಿತು ಜಮೀನಿನಲ್ಲಿ ಮುಖ್ಯವಾದ ಒಂದು ವಿಚಾರವೆಂದರೆ ಆ ಕಾಫೀತೋಟಗಳು ಇದರಲ್ಲಿ ಸೇರುವುದಿಲ್ಲ. ಅದನ್ನೇ ಒಂದು ಪ್ರತ್ಯೇಕ ಕ್ಯಾಟಗರಿಯನ್ನಾಗಿ ತೆಗೆದುಕೊಂಡು ಅದಕ್ಕೆ 6 ಪರ್ಸೆಂಟನ್ನು ನಿಗದಿ ಮಾಡಿದರೆ ತೊಂದರೆಯಾಗುತ್ತದೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ಸುಮಾರು 2 ಲಕ್ಷ 30—40 ಸಾವಿರ ಎಕರೆಗಳಷ್ಟು ಕಾಫೀತೋಟದ ಜಮೀನಿದೆ. 10—12 ಸಾವಿರ ಎಕರೆ ಮೆಣಸನ್ನು ಬೆಳೆಯತಕ್ಕ ಭೂಮಿ ಇದೆ. ಈ ದಿವಸ ವಸೂಲಾಗತಕ್ಕ ಇನ್‌ಕಂಟ್ಯಾಕ್ಸಿನಲ್ಲಿ ಶೇಕಡ 90 ರಷ್ಟು ಭಾಗ ಈ ಕಾಫೀ ತೋಟಗಳವರಿಂದ ಬರುತ್ತಿದೆ. ಇಡೀ ಹಿಂದೂಸ್ಥಾನದಲ್ಲಿ ಪಡೆಯುತ್ತಿರುವ ಫಾರಿನ್ ಎಕ್ಸ್‌ಛೇಂಜಿನಲ್ಲಿ ಈ ಕಾಫಿ ಬೆಳೆಯಿಂದ ಅಂದರೆ ಮೈಸೂರಿನ ಕಾಫೀ ಬೆಳೆಯಿಂದ ಶೇಕಡ 80 ರಷ್ಟು ಎಕ್ಸ್‌ಛೇಂಜ್ ದೊರೆಯುತ್ತಿದೆ. ಅಂಥ ಒಂದು ಶ್ರೇಷ್ಠಸ್ಥಾನವನ್ನು ಈ ಕಾಫೀತೋಟ ಮೈಸೂರಿಗೆ ದೊರಕಿಸಿ ಕೊಟ್ಟಿದೆ. ಆದುದರಿಂದ ಇಂಥ ಒಂದು ಪರರಾಷ್ಟ್ರಗಳಿಂದ ಆದಾಯ ತರತಕ್ಕ ಬಾಬಿನ ಮೇಲೆ ಹೆಚ್ಚಿನ ಟ್ಯಾಕ್ಸನ್ನು ಹಾಕಬಾರದೆಂದು ಇದಕ್ಕೆ ಕಂದಾಯವನ್ನು ಬಹಳ ಕಡಮೆಯಾಗಿ ಹಾಕಲಾಗಿದೆ. ಮದ್ರಾಸ್ ಮತ್ತು ಕೇರಳದವರು ಈಗಾಗಲೇ ಈ ಕಾಫೀ ತೋಟಗಳು ಬಹುಮಟ್ಟಿಗೆ ಕೇವಲ ಇಳಿಜಾರು ಜಾಗದಲ್ಲಿ ಮಾತ್ರ ಬೆಳೆಯುತ್ತಿರುವುದರಿಂದ ಇವುಗಳಿಗೆ 1 ಪರ್ಸೆಂಟ್ ಕಂದಾಯ ಹಾಕಿದ್ದಾರೆ. ಆದ್ದರಿಂದ ನಾವೂ ಸಹಾ ಇಲ್ಲಿ ಇದರ ಕಂದಾಯವನ್ನು ಆರೂಕಾಲು ಪರ್ಸೆಂಟಿನಿಂದ 1 ಪರ್ಸೆಂಟಿಗೆ ಇಳಿಸಿದರೂ ಈಗ ಹಾಲಿ ಇದರಿಂದ ಏನು ಬರುತ್ತಿದೆಯೋ ಅದರ 6 ರಷ್ಟು ಹೆಚ್ಚಿಗೆ ಬರುತ್ತದೆ. ನಾವು ಈ ಹಿಂದೆ ಹೇಳಿದ್ದ ಆರೂಕಾಲು ಪರ್ಸೆಂಟ್ ಕಂದಾಯವನ್ನು 4 ಪರ್ಸೆಂಟಿಗಿಳಿಸಿದರೆ ಅನೇಕ ಭಾಗದಲ್ಲಿ ಹಾಲಿ ಕೊಡತಕ್ಕ ಕಂದಾಯಕ್ಕಿಂತ 20,30,40, ನ.ಪೈ. ಗಳಷ್ಟು ಕಂದಾಯ ಕಡಮೆಯಾಗುತ್ತದೆ. ಆದರೆ ಎಲ್ಲಿಯೋ ಕೇವಲ 1—2 ಜೋನುಗಳಲ್ಲಿ ಈಗ ಕೊಡುತ್ತಿರುವ ಕಂದಾಯಕ್ಕಿಂತ ಅಂದರೆ ಒಂದು ರೂಪಾಯಿ ಇರತಕ್ಕ ಕಡೆ ಒಂದೂವರೆ ರೂಪಾಯಿ ಕೊಡಬೇಕಾಗಿ ಬರಬಹುದು...

ಕೆಲವು ಮಾನ್ಯ ಸದಸ್ಯರು.—ತಾವು ಹೀಗೆಲ್ಲಾ ಜನರನ್ನು ಮಿಸ್‌ಲೀಡ್ ಮಾಡಬಾರದು.

ಶ್ರೀ ಎಂ. ವಿ. ಕೃಷ್ಣಪ್ಪ.—ಹೀಗೆ ನಾವು ಆ ಆರೂಕಾಲು ಪರ್ಸೆಂಟಿದ್ದುದನ್ನು ಈಗ 4ಪರ್ಸೆಂಟಿಗಿಳಿಸುವುದರಿಂದ ಅನೇಕರಿಗೆ ಈಗ ಕೊಡತಕ್ಕ ಕಂದಾಯಕ್ಕಿಂತ ಬಹಳ ಕಡಮೆ ಕಂದಾಯವಾಗುತ್ತದೆ. ಇದರಲ್ಲಿ ಯಾರನ್ನು ಮಿಸ್‌ಲೀಡ್ ಮಾಡತಕ್ಕ ಪ್ರಮೇಯವಿಲ್ಲ. ಅನಿವಾರ್ಯವಾಗಿ ಕೆಲವರು ಒಂದು ರೂಪಾಯಿ ಕೊಡತಕ್ಕ ಕಡೆ ಒಂದೂಕಾಲೂ ಅಥವಾ ಒಂದುವರೆ ರೂಪಾಯಿ ಕೊಡಬೇಕಾಗುವುದು. ಆದರೆ ಇಲ್ಲಿಯವರೆಗೂ ಕೊಡುತ್ತಿದ್ದುದಕ್ಕಿಂತ ಭಾಗದ ಜನರು ಕಂದಾಯದಲ್ಲಿ ಬಹುಕಡಮೆ ಕೊಡುತ್ತಾರೆ. ಅಂಥ ನಿದರ್ಶನಗಳು ಬಹು ಜಾಸ್ತಿ ಇರುತ್ತವೆ. ಆದುದರಿಂದ ಇದನ್ನು ತಾವು ಕಂದಾಯವನ್ನು ಹೆಚ್ಚಿಸತಕ್ಕ ಮಸೂದೆಯೆಂದು ಕರೆಯುವುದು ಸಾಧುವಾದ್ದಲ್ಲ. ಇದನ್ನು ತಾವು ಇನ್ನು ಮುಂದೆ ಕಂದಾಯವನ್ನು ಕಡಮೆ ಮಾಡತಕ್ಕ ಮಸೂದೆ ಎಂದು ನಾಮಾಂಕಿತ ಇಡಬೇಕು ಎಂದು ಹೇಳುತ್ತೇನೆ. ಮುಂದೆ ಈ ಬಿಲ್ಲನ್ನು ಸಭೆಯ ಮುಂದೆ ತಂದಾಗ ನಾನು ಪ್ರತಿಯೊಂದು ಜೋನಿನ ಪ್ರತಿಯೊಂದು ದರ್ಜೆಯ ಭೂಮಿಯ ವಿಚಾರವನ್ನೂ ವಿವರವಾಗಿ ತಿಳಿಸುತ್ತೇನೆ. ಹಾಲಿ ಕೊಡತಕ್ಕ ಖುಷ್ಕಿ ಕಂದಾಯವೆಷ್ಟು, ಭಾಗಾಯಿತು ಕಂದಾಯವೆಷ್ಟು, ಪ್ಲಾಂಟೇಷನ್‌ಗಳ ಬಗ್ಗೆ ಕೊಡುತ್ತಿರುವ ಕಂದಾಯವೆಷ್ಟು ಮುಂದೂ ಈ ರಿವಿಜನ್ ಸೆಟಲ್‌ಮೆಂಟ್ ಪ್ರಕಾರ ಹೊಸದಾಗಿ ಕೊಡಬೇಕಾದ ಕಂದಾಯವೆಷ್ಟು ಎಂಬುದನ್ನು ವಿವರವಾಗಿ ಎಲ್ಲವನ್ನೂ ತಿಳಿಸುತ್ತೇನೆ. ಅಷ್ಟೇ ಅಲ್ಲ ಆ ಬಗ್ಗೆ ಒಂದು ಅಚ್ಚಾದ ಪುಸ್ತಕವನ್ನೇ ತಮ್ಮೆಲ್ಲರಿಗೂ ಒದಗಿಸಲಾಗುವುದು. ಮುಂದೆ ಈ ರೆಸಲ್ಯೂಷನ್ ಬರುತ್ತದೆ, ಆಗ ವಿವರಗಳನ್ನು ತಿಳಿಸುವೆನು. ಈಗ ಹಾಕಬೇಕೆಂದಿದ್ದ ಆರೂಕಾಲು ಪರ್ಸೆಂಟನ್ನು ತಪ್ಪಿಸಿದ್ದರಿಂದ ರಾಜ್ಯದ ಅನೇಕ ಭಾಗಗಳಲ್ಲಿರತಕ್ಕ ರೈತರಿಗೆ, ಆದರಲ್ಲೂ ಮುಖ್ಯವಾಗಿ ಮಲೆನಾಡಿನಲ್ಲಿರತಕ್ಕ ರೈತರಿಗೆ ಇದರಿಂದ ಬಹಳ ಅನುಕೂಲವಾಗುತ್ತದೆ. ಮಲೆನಾಡಿನಲ್ಲಿರತಕ್ಕ ಜನರು ಅಲ್ಲಿ ಬೆಳೆಯನ್ನು ತೆಗೆಯಬೇಕಾಗಿದ್ದರೆ ಅವರಿಗೆ ಬಹಳ ಕಷ್ಟವಿದೆ. ಅಲ್ಲಿ ಭತ್ತದ ಬೆಳೆಯನ್ನು ತೆಗೆಯಬೇಕಾಗಿದ್ದರೂ ಅಲ್ಲಿ ಅವರು ಮೃಗಗಳ ಕಾಟವನ್ನು ತಪ್ಪಿಸಲು ಮಂಚಿಗೆಗಳನ್ನು ಹಾಕಿಕೊಂಡು ರಾತ್ರಿಯೆಲ್ಲಾ ಕಾವಲು ಕಾಯಬೇಕಾಗಿದೆ. ಆದ್ದರಿಂದ ಮಲೆನಾಡಿನ ಜನರಿಗೆ ಈ ವಿಚಾರದಲ್ಲಿ ಒಂದು ಹೆಚ್ಚಿನ ರಿಲೀಫ್ ಸಿಗಬೇಕೆಂದು ಕೆಲವು ಭೂಮಿಗೆ 4 ಪರ್ಸೆಂಟನ್ನೂ ಇನ್ನು ಕೆಲವಕ್ಕೆ ಒಂದು ಪರ್ಸೆಂಟನ್ನೂ ಹಾಕಬೇಕೆಂದಿದ್ದೇವೆ.

ಇದರಲ್ಲಿರತಕ್ಕ ಇನ್ನೊಂದು ವಿಚಾರವೇನೆಂದರೆ: ಇದನ್ನು ಹಿಂದೆ ರೆಜಲ್ಯೂಷನ್ ಪಾಸಾದ ಮಾರನೇ ವರ್ಷದಿಂದ ಜಾರಿಗೆ ತರಬೇಕೆಂದಿತ್ತು. ಆದರೆ ಅದನ್ನೂ ಕೂಡ ಈಗ ಬದಲಾವಣೆ

(ಶ್ರೀ ಎಂ. ವಿ. ಕೃಷ್ಣಪ್ಪ)

ಮಾಡಿದ್ದೇವೆ. ಹಾಗೆ ಇದನ್ನು ನಿಧಾನ ಮಾಡುವುದು ಸರಿಯಲ್ಲ, ಈ ರೆಸಲ್ಯೂಷನ್ ಪಾಸಾದ ವರ್ಷವೇ ಜಾರಿಗೆ ತರಬೇಕೆಂದು ತಿದ್ದುಪಡಿ ಮಾಡಿದ್ದೇವೆ. ಆದರೆ ಈ ವರ್ಷ ಮಾತ್ರ ಇದು ಜಾರಿಗೆ ಬರುವುದಿಲ್ಲ. ಇದು 1965—66 ರಿಂದ ಜಾರಿಗೆ ಬರುತ್ತದೆ.

ರೆವಿನ್ಯೂ ಇಯರ್ ಜುಲೈ ಇಂದ ಜೂನ್‌ವರೆಗೆ, ನಾಳೆ ಜುಲೈನಿಂದ ಶುರುವಾಗುತ್ತದೆ, ಆದರೆ ವಸೂಲಿ 66ರಲ್ಲೇ ಜನವರಿಯಿಂದ ಆಗುತ್ತದೆ. ಮತ್ತು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಹಿಂದಿನ ಆಕ್ಟ್‌ನಲ್ಲಿ ಕೆಲವು ನ್ಯೂನತೆಗಳು ಇದ್ದವು ಅವನ್ನು ಎಂದರೆ ಪ್ರಿಂಟಿಂಗ್ ತಪ್ಪುಗಳು, ವ್ಯಾಕರಣದ ತಪ್ಪುಗಳು ಮತ್ತು ಅದಕ್ಕೆ ತತ್ಸಂಬಂಧವಾದ ತಪ್ಪುಗಳು ಯಾವು ಯಾವುವು ಇದ್ದವೋ ಅಂತಹ ಚಿಕ್ಕ ತಿದ್ದುಪಡಿಗಳನ್ನು ಇದರಲ್ಲಿ ತಂದಿದ್ದೇವೆ, ಇದನ್ನು ಮಾನ್ಯ ಸಭೆಯವರು ಒಪ್ಪಿಕೊಂಡು ಈ ಕಂದಾಯವನ್ನು ಕಡಿಮೆ ಮಾಡುವ ಬಿಲ್ಲಿಗೆ ತಮ್ಮ ಪೂರ್ಣ ಸಹಕಾರವನ್ನು ಕೊಡುತ್ತಾರೆ ಎಂದು ನಂಬಿದ್ದೇನೆ.

ಶ್ರೀ ಜಿ. ವಿ. ಗೌಡ.—ಬಾವಿ ನೀರಿನ ಬಾಗಾಯ್ತುಗೆ ಹೇಗೆ ಆಗುತ್ತದೆ?

† ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಂತ ಖರ್ಚಿನಿಂದ ಹಾಕಿಸಿಕೊಂಡು ಇರತಕ್ಕ ಸ್ಥಳದಲ್ಲಿ ಖುಷ್ಕಿ ಜಮೀನು ಇದ್ದರೆ ಅದಕ್ಕೆ ಹೆಚ್ಚು ಹಾಕುವುದು ದರ್ಮ ಅಲ್ಲ, ಆ ರೀತಿ ಹಾಕಿಯೂ ಕೂಡ ಇಲ್ಲ. 30 ವರ್ಷ ಏನೂ ಹೆಚ್ಚು ಕಂದಾಯ ಕೊಡುವುದಿಲ್ಲ. ಅವನ ಹುಟ್ಟುವಳಿಮೇಲೆ ಕೊಡುತ್ತಾ ಹೋಗುತ್ತಾನೆ, ಅದು ಖುಷ್ಕಿ ಕಂದಾಯವೂ ಅಲ್ಲ, ಪ್ಲಾಂಟೇಷನ್ ಕಂದಾಯವೂ ಅಲ್ಲ, ತರೀ ಕಂದಾಯವೂ ಅಲ್ಲ, ಬಾಗಾಯ್ತು ಕಂದಾಯ, ಅದರಲ್ಲೂಕೂಡ ಪಟಸ್ತ ಬಾಗಾಯ್ತು, ಮೋಟಸ್ತ ಬಾಗಾಯ್ತು ಅಂತ ಇದೆ. ಏತ, ಕಪಿಲೆ ಇವುಗಳ ಸಹಾಯದಿಂದ ಮಾಡುವುದಕ್ಕೆ ಮೋಟಸ್ತ ಬಾಗಾಯ್ತು ಎಂದು ಅನ್ನುತ್ತಾರೆ ಇದಕ್ಕೆ 30 ವರ್ಷ ಏನೂ ಹಾಕುವುದಿಲ್ಲ 30 ವರ್ಷ ಆದಮೇಲೆ ಸರ್ವೆ ಸೆಟಲ್‌ಮೆಂಟ್ ಆದಾಗ ಸ್ವಲ್ಪ ಹೆಚ್ಚು ಕಂದಾಯ ಹಾಕುತ್ತಾರೆ ಅಷ್ಟೆ. ಪಟಸ್ತ ಬಾಗಾಯ್ತು ಎಂದರೆ ಹರಿಯುವ ನೀರಿನಿಂದ ವ್ಯವಸಾಯ ಮಾಡತಕ್ಕದ್ದಕ್ಕೆ ಪಟಸ್ತ ಬಾಗಾಯ್ತು ಎಂದು ಅನ್ನುತ್ತಾರೆ, ಮೋಟಸ್ತ ಬಾಗಾಯ್ತು ಎಂದರೆ ಲಿಫ್ಟ್ ಇರಿಗೇಷನ್ ಅದಕ್ಕೆ ಯಾವಾಗಲೂ ಕಂದಾಯ ಕಡಿಮೆ ಇರುತ್ತದೆ.

ಶ್ರೀ ಎಸ್. ಶಿವಪ್ಪ.—ಇದು ಕಂದಾಯ ಕಡಿಮೆ ಮಾಡುವ ಮಸೂದೆ ಎಂದು ಮಾನ್ಯ ರೆವಿನ್ಯೂ ಮಿನಿಸ್ಟರು ಹೇಳಿದರು, ದಯವಿಟ್ಟು ಅವರು ಕೋಲಾರ ಜಿಲ್ಲೆಯ ಉದಾಹರಣೆಯನ್ನು ತೆಗೆದು ಕೊಂಡು ಕೋಲಾರ ಜಿಲ್ಲೆಯಲ್ಲಿ ಈಗ ಎಷ್ಟು ಕಂದಾಯ ಇದೆ, ಈ ಬಿಲ್ ಇಂಟ್ರೊಡ್ಯೂಸ್ ಮಾಡಿದ್ದಾರಲ್ಲಾ ಇದರಿಂದ ಎಷ್ಟು ಕಡಿಮೆಯಾಗುತ್ತದೆ ಎಂಬುದನ್ನು ಒಂದು ಉದಾಹರಣೆಯಾಗಿ ತಿಳಿಸುತ್ತಾರೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಬಂಗಾರಪೇಟೆ ಈ ಪ್ರದೇಶದಲ್ಲಿ ಒಂದು ರೂಪಾಯಿ ಕೊಡುತ್ತಾ ಇರುವವರು 20 ಪೈಸೆ ಮಾತ್ರ ಜಾಸ್ತಿ ಕೊಡುತ್ತಾರೆ. ಇಂಡಿವಿಜ್ಯುಯಲ್ ಆಗಿ ಇದನ್ನು ವರ್ಕ್‌ಔಟ್ ಮಾಡಿದರೆ ಕಡಿಮೆಯಾಗುತ್ತದೆ. ಬಾಗೇಪಲ್ಲಿ, ಗುಡಿಬಂಡೆ, ಚಿಂತಾಮಣಿ, ಶ್ರೀನಿವಾಸಪುರ, ಮುಳಬಾಗಲು ಇಲ್ಲಿ ಒಂದು ರೂಪಾಯಿ ಕೊಡುವವನು ಒಂದೂವರೆ ರೂಪಾಯಿ ಕೊಡಬೇಕಾಗುತ್ತದೆ. ಹಿಂದೆ ಸರ್ಚಾರ್ಜ್ ಕೊಡುತ್ತಾ ಇದ್ದುದಕ್ಕಿಂತಲೂ ಕಡಿಮೆಯಾಗುತ್ತದೆ. ಅದೇ ರೀತಿ ಅನೇಕ ಜಿಲ್ಲೆಗಳಲ್ಲಿ ಕಡಿಮೆಯಾಗುತ್ತದೆ. ಆ ಜಿಲ್ಲೆ ಈ ಜಿಲ್ಲೆ ಅಂತ ಹೇಳಿ ತಾವು ಹೊಡೆದಾಡುವುದಿಲ್ಲ, ಮೊನ್ನೆ ಉಪವಾಸ ಮಾಡಿದಾಗ ಇಡೀ ಸಂಸ್ಥಾನಕ್ಕೆ ಕಂದಾಯ ಕಡಿಮೆಯಾಗಬೇಕು ಎಂದು ಹೇಳಿ ಮಾಡಿದರೇ ಹೊರತು ಒಂದೊಂದು ಜಿಲ್ಲೆಗೆ ಅಂತ ಹೇಳಿ ಮಾಡಲಿಲ್ಲವಲ್ಲ?

† Sri K. LAKKAPPA.—Sir, I rise to a point of order. The Hon'ble Minister has no right to introduce the Mysore Land Reforms (Amendment) Bill, 1965, since it has not been published under the rules of procedure, section 64 and it has not been published in the Gazette. It has been mentioned that it has been published on 18th April 1965. It happens to be a holiday being a Sunday. Therefore, no sanctity can be attached to this Bill. Therefore, this Bill may be

withdrawn by the Hon'ble Minister and it may be published under the Rules of Procedure, clause 64. It should be duly notified in three consecutive copies of the gazette and then only it will be proper and legal.

Mr. DEPUTY SPEAKER.—The Bill has been introduced. The Minister has made the speech. It has been published in the gazette. There is no point of order.

† ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ರಾಜ್ಯದ ಕಂದಾಯ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಿರತಕ್ಕ ರೆವಿನ್ಯೂ ಆಕ್ಟ್ ತಿದ್ದುಪಡಿ ಮಸೂದೆಯನ್ನು ತೀವ್ರವಾಗಿ ನಾನು ವಿರೋಧಿಸುತ್ತಾ ಇದ್ದೇನೆ. ಇವತ್ತು ನಮ್ಮ ರೆವಿನ್ಯೂ ಮಂತ್ರಿಗಳು ಎಷ್ಟು ಚಾಕಚಕ್ಯತೆಯಿಂದ ಈ ಬಿಲ್ಲನ್ನು ಮಾಡಿದ್ದಾರೆ ಎಂಬುದನ್ನು ಈ ಸಭೆಯ ಮುಂದೆ ಮಂಡಿಸತಕ್ಕ ಕಾಲದಲ್ಲಿ ಈಗತಾನೆ ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದರು. ಈ ಮಸೂದೆಯಿಂದ ಕಂದಾಯವನ್ನು ಕಡಿಮೆ ಮಾಡುತ್ತಾ ಇದ್ದೇವೆ ಎಂಬ ಅರ್ಥ ಬರತಕ್ಕ ರೀತಿಯಲ್ಲಿ ಈ ಮಸೂದೆಯನ್ನು ಈ ಸಭೆಯಲ್ಲಿ ಮಂಡನೆ ಮಾಡಿದ್ದಾರೆ. ಅವರು ಹೇಳಿದ ರೀತಿಯಲ್ಲಿ ಇವೊತ್ತು ನಮ್ಮ ದೇಶದಲ್ಲಿ ಏನು ಕಂದಾಯ ಇದೆ ಅದು 50-60ರಷ್ಟೇ ಅಥವಾ ಎಷ್ಟು ಜಾಸ್ತಿಯಾಗುತ್ತದೆ ಎಂಬುದನ್ನು ಹೇಳಲಿಲ್ಲ. ಮೊದಲನಿಂದಲೂ ಕೂಡ ಹೇಳುತ್ತಾ ಇದ್ದೇನೆ, ಈ ರೀತಿಯಾಗಿ ಭೇದಭಾವ ಮಾಡತಕ್ಕ ಮಸೂದೆಯನ್ನು ಈ ಸಭೆಯ ಮುಂದೆ ತರಬಾರದಾಗಿತ್ತು. ಮಾನ್ಯ ಕಂದಾಯ ಸಚಿವರು ಹಳೇ ಕಾಲದ ಪಾಳೇಗಾರರ ನೀತಿಯಮೇಲೆ ಮಾಡಿದ್ದ ಕಂದಾಯದ ನೀತಿಯನ್ನು ರದ್ದು ಮಾಡಿ ಈ ದೇಶದಲ್ಲಿ ಒಂದು ಹೊಸ ರೀತಿಯ ಪದ್ಧತಿಯನ್ನು ತರುತ್ತಾರೆ ಎಂದು ನಾನು ಭಾವನೆ ಮಾಡಿಕೊಂಡಿದ್ದೆ. ಮೊದಲೇ ನಾನು ಹೇಳಿದ್ದೆ. ನಮ್ಮ ದೇಶದಲ್ಲಿ ಈ ಕಂದಾಯ ಪದ್ಧತಿ ಏನಿದೆ ಇದು ಬಹಳ ಹಳೆಯ ಕಾಲದ ಪದ್ಧತಿ. ಇದು ಕಂದಾಚಾರದ ಹಳೇ ಕಾಲದಲ್ಲಿ ಯಾವ ತೆರಿಗೆಯೂ ಇಲ್ಲದೇ ಇರತಕ್ಕ ಕಾಲದಲ್ಲಿ ಭೂಮಿಯ ಮೇಲೆ ಬರತಕ್ಕ ಕಂದಾಯ ಒಂದನ್ನೇ ನೆಚ್ಚಿ ಸರ್ಕಾರವನ್ನು ನಡೆಸುತ್ತಾ ಇದ್ದ ಕಾಲದಲ್ಲಿ ಈ ಪದ್ಧತಿಯನ್ನು ಅಂದು ಜಾರಿಗೆ ತಂದಿದ್ದರು. ಇವತ್ತಿನ ದಿವಸ ರೈತ ನಾನಾ ರೂಪದಲ್ಲಿ ತೆರಿಗೆ ಕೊಡುತ್ತಾ ಇದ್ದಾನೆ ಅವನಮೇಲೆ ಕಂದಾಯವನ್ನು ಬೇರೆ ಬೇರೆ ರೂಪದಲ್ಲಿ ಈ ತಿದ್ದುಪಡಿ ಮುಖಾಂತರ ಕಂದಾಯವನ್ನು ಹೇರುತ್ತಾ ಇರತಕ್ಕ ಪದ್ಧತಿ ಏನಿದೆ ಇದು ಖಂಡಿತವಾಗಿಯೂ ಕೂಡ ಶಾಸ್ತ್ರೀಯವಾದದ್ದಲ್ಲ. ತೆರಿಗೆಯ ಹೊರೆಯನ್ನು ಹೊತ್ತು ಬೆನ್ನು ಮೂಳೆಯನ್ನು ಮುರಿದುಕೊಂಡಿರತಕ್ಕ ರೈತನಮೇಲೆ ಪುನಃ ಈ ಹೊರೆಯನ್ನು ಹಾಕತಕ್ಕ ನೀತಿ ಖಂಡಿತವಾಗಿಯೂ ಕೂಡ ರೈತನಿಗೆ ಕುಠಾರಪ್ರಾಯವಾಗಿದೆ ಇಂತಹ ಕುಠಾರ ಪ್ರಾಯವಾಗಿರತಕ್ಕ ಮಸೂದೆಯನ್ನು ಸರಕಾರದವರು ತರಬಾರದಾಗಿತ್ತು ಎಂದು ಇವತ್ತೂ ಕೂಡ ನಾನು ಹೇಳುತ್ತಾ ಇದ್ದೇನೆ. ರೈತನಿಗೆ ಇವತ್ತು ಆಗುತ್ತಾ ಇರತಕ್ಕ ಅನ್ಯಾಯದ ಪರಂಪರೆ ಇದು. ಈ ಘೋರವಾದ ಅನ್ಯಾಯವನ್ನು ರೈತನ ಮೇಲೆ ಹೇರುತ್ತಾ ಇದ್ದೀರಿ. ಯಾವ ಭೂಮಿಯಿಂದ ಅನ್ನವನ್ನು ಉತ್ಪಾದನೆ ಮಾಡುತ್ತಾನೋ ಆ ರೈತನಮೇಲೆ ಅವನು 100 ರೂಪಾಯಿನ ಬೆಳೆ ಬೆಳೆದರೆ 4 ರೂಪಾಯಿ ಸುಂಕವನ್ನು ಹಾಕುತ್ತೇವೆ ಎಂದು ಹೇಳುತ್ತೀರಿ. ಇದು ಯಾವ ತೆರೆಗೆಯ ಪದ್ಧತಿ ಎಂದು ಕೇಳುತ್ತೇನೆ! ಬೇರೆ ಯಾವ ಕ್ಷೇತ್ರದಲ್ಲಾಗಲಿ, ಕೈಗಾರಿಕೆಯ ಕ್ಷೇತ್ರದಲ್ಲಿ, ವಾಣಿಜ್ಯ ಕ್ಷೇತ್ರದಲ್ಲಿ ಎಲ್ಲೇ ಆಗಲಿ ನೂರು ರೂಪಾಯಿ ವ್ಯಾಪಾರ ಮಾಡಿದರೆ ನಾಲ್ಕು ರೂಪಾಯಿ ಸುಂಕವನ್ನು ಹಾಕುತ್ತಾ ಇದ್ದೀರಾ ಎಂದು ಕೇಳುತ್ತೇನೆ. ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಮಾಡಿ, ದೊಡ್ಡ ದೊಡ್ಡ ಕಾರ್ಖಾನೆಯಕಾರನಾಗಿ ಎಷ್ಟೇ ಹಣ ಬೇಕಾದರೂ ಸಂಪಾದನೆ ಮಾಡಿಕೊಳ್ಳಬಹುದು. ಅವನಿಗೆ ಒಂದು ಲಿಮಿಟ್ ಕೊಡುತ್ತೀರಿ, 4-5 ಸಾವಿರ ರೂಪಾಯಿಗಳ ಒಂದು ಮಿತಿಯನ್ನು ಇಟ್ಟು ಅದರಮೇಲೆ ಸುಂಕವನ್ನು ಕೊಡಿ ಎಂದು ಕೇಳುತ್ತಾ ಇದ್ದೀರಿ. ಅದೇ ಭೂಮಿಯನ್ನು ಅವಲಂಬನೆ ಮಾಡಿರತಕ್ಕವನಿಗೆ ಮಾತ್ರ ಆ ಮಿತಿ ಇಲ್ಲ ಅವನ ನಿವ್ವಳ ಆದಾಯದಮೇಲೆ ನೂರು ರೂಪಾಯಿಗೆ ನಾಲ್ಕು ರೂಪಾಯಿ ಸುಂಕವನ್ನು ಅವನು ಕೊಡಬೇಕೆನ್ನುವುದು ಯಾವ ನೀತಿ ಎಂದು ಸರ್ಕಾರವನ್ನು ಕೇಳುತ್ತೇನೆ.

ಈ ದಿವಸ ನಮ್ಮ ಸರಕಾರದವರು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕಿದ್ದಾರೆ. ರೈತ ಉತ್ಪತ್ತಿ ಜಾಸ್ತಿ ಮಾಡಿದರೆ ಅವನ ಮೇಲೆ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕುತ್ತೀರಿ. ಅದು ಸಾಲದೆಂದು ಈಗ ಕಂದಾಯ ಬೇರೆ ಜಾಸ್ತಿ ಮಾಡಿ ಖಜಾನೆಗೆ ಹಣ ಬರಲು ಮಾರ್ಗ ಮಾಡಿಕೊಂಡಿದ್ದೀರಿ. ಹಳೆಯ ಕಾಲದ ಈ ಮಸೂದೆಯನ್ನು ಖಂಡಿತ ತರಬಾರದಾಗಿತ್ತು. ಇದನ್ನು ಕೈಬಿಡಬೇಕೆಂದು ಪದೇ ಪದೇ ಹೇಳುತ್ತಿದ್ದೇವೆ. ಕಂದಾಯವನ್ನು ರದ್ದುಮಾಡಬೇಕೆಂದು ವಿರೋಧ ಪಕ್ಷ ಒತ್ತಾಯ ಮಾಡುತ್ತಲೇ ಇದೆ. ಈ ಕಂದಾಯವಿಲ್ಲದೆ ಸರಕಾರ ನಡೆಸುವುದಕ್ಕೆ ಸಾಧ್ಯವಿಲ್ಲವೇ ಎಂದು ಪ್ರಶ್ನೆ ಮಾಡಬೇಕಾಗಿದೆ. ಹಣವಿಲ್ಲದೆ ಸರಕಾರ ನಡೆಸುವುದು ಹೇಗೆ ಎಂದು ಕೇಳುತ್ತಾರೆ.

(ಶ್ರೀ ಎಸ್. ಶಿವಪ್ಪ)

ಆದರೆ ಮೊನ್ನೆ ತಾನೆ 120 ಕೋಟಿ ರೂಪಾಯಿಗಳ ಬಡ್ಜೆಟ್ಟನ್ನು ಅಂಗೀಕಾರ ಮಾಡಿದ್ದೇವೆ. ಅದರಲ್ಲಿ ಕಂದಾಯದಿಂದ ಬರುವುದು ಸುಮಾರು 4 ಕೋಟಿ ಮಾತ್ರ. ಆ 4 ಕೋಟಿಯನ್ನು ವಸೂಲು ಮಾಡಲು ಸಿಬ್ಬಂದಿಗೇ ಒಂದು-ಒಂದೂವರೆ ಕೋಟಿ ರೂಪಾಯಿ ಬೇಕು. ಹಾಗಿರುವಾಗ ಏಕೆ ಇಷ್ಟು ಶ್ರಮಪಟ್ಟು ರೈತರಿಗೆ ಈ ಹೊರೆ ಹೇರಬೇಕು ಎಂದು ಕೇಳುತ್ತೇನೆ. ಈಗ ಆಹಾರದ ಕೊರತೆ ಇರುವುದು ಎಲ್ಲರಿಗೂ ಗೊತ್ತಿದೆ. ನಮ್ಮ ದೇಶಕ್ಕೆ ಬೇಕಾದ ಆಹಾರವನ್ನು ಹೊರ ದೇಶಗಳಿಂದ ತರಿಸುತ್ತಿದ್ದೇವೆ; ಅಮೇರಿಕಾದಿಂದ ನೂರಾರು ಕೋಟಿ ರೂಪಾಯಿಗಳ ಆಹಾರವನ್ನು ಕೊಳ್ಳುತ್ತಿದ್ದೇವೆ, ಒಂದು ದಿವಸಕ್ಕೆ ಸುಮಾರು 15 ಸಾವಿರ ಟನ್ ಗೋಧಿ ನಮ್ಮ ದೇಶಕ್ಕೆ ಅಮೇರಿಕಾದಿಂದ ಬರುತ್ತಿದೆ ; ಹೀಗೆ ವರ್ಷಕ್ಕೆ ಸುಮಾರು 2–3 ಕೋಟಿ ರೂಪಾಯಿಗಳ ಆಹಾರವನ್ನು ಕೊಳ್ಳುವಾಗ ಹೆಚ್ಚು ಆಹಾರ ಬೆಳೆಯಬೇಕೆಂಬ ಕೂಗು ಎಲ್ಲಾ ಕಡೆಯೂ ಇರುವಾಗ ಯಾರು ಹೆಚ್ಚು ಬೆಳೆಯುವವರು ಎಂದು ಪ್ರಶ್ನಿಸಬೇಕಾಗಿದೆ. ಆಹಾರ ಬೆಳೆಯುವ ರೈತನಿಗೆ ಈ ದಿವಸ ಸರಿಯಾದ ಸಹಾಯ ದೊರೆಯಬೇಕು. ನಮ್ಮ ದೇಶದಲ್ಲಿ ಇಬ್ಬರು ಯೋಧರಿದ್ದಾರೆ; ದೇಶದಲ್ಲಿ ಗಂಡಾಂತರ ಪರಿಸ್ಥಿತಿ ಇರುವಾಗ ಗಡಿ ಕಾಯುವ ಸೈನಿಕ ಒಬ್ಬ ಯೋಧ, ಅವನಿಗೆ ಎಲ್ಲ ವಿಧದಲ್ಲೂ ಸಹಾಯ ಮಾಡುತ್ತಿದ್ದೇವೆ, ಅವನ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ, ಯುದ್ಧ ಮುಗಿದ ಮೇಲೆ ಸೈನಿಕ ಕೆಲಸದಿಂದ ನಿವೃತ್ತನಾದ ಮೇಲೆ ಆತನಿಗೆ ಜಮೀನು, ಕೈಗಾರಿಕೆಗೆ ಸಾಲ ಮುಂತಾದ್ದನ್ನು ಕೊಡುತ್ತಿದ್ದೇವೆ. ಆತ ಕೋವಿ ಹಿಡಿದು ದೇಶವನ್ನು ಕಾಯುತ್ತಾನೆ. ಎರಡನೆಯ ಯೋಧ ಹೊಲಗದ್ದೆಗಳಲ್ಲಿ ಅನ್ನ ಉತ್ಪತ್ತಿ ಮಾಡಿ ದೇಶಕ್ಕೆ ಕೊಡುವ ರೈತ. ನೇಗಿಲೇ ಅವನ ಆಯುಧ. ಅವನಿಗೆ ಈ ದಿವಸ ಏನು ಉತ್ತೇಜನ ಕೊಟ್ಟಿದ್ದೀರಿ ಎಂದು ಪ್ರಶ್ನೆ ಮಾಡುತ್ತೇನೆ. ತಾವು ಯಾವಾಗ ರೈತನಿಗೆ ಹೆಚ್ಚು ಆಹಾರ ಉತ್ಪತ್ತಿ ಮಾಡು ಎಂದು ಹೇಳುತ್ತೀರೋ ಆಗ ಜನರಿಗೆ ಶಕ್ತಿ ಕೊಡುವ ಆಹಾರವನ್ನು ಬೆಳೆಯುವ ರೈತನಿಗೆ ಕಂದಾಯವನ್ನು ಮನ್ನಾ ಮಾಡುವುದಕ್ಕೆ ಬದಲಾಗಿ ಜಾಸ್ತಿ ಮಾಡುತ್ತಿದ್ದೀರಿ. ಪುನಃ ನಾನು ರೆವೆನ್ಯೂ ಸಚಿವರಿಗೆ ಹೇಳುವುದು : ಧೈರ್ಯ ಮಾಡಿ ಇಡೀ ದೇಶದಲ್ಲಿ ಕಂದಾಯವನ್ನು ರದ್ದು ಮಾಡಿ ಭೂಮಿಯ ಉತ್ಪತ್ತಿ ಹೆಚ್ಚಿಸಲು ಅವಕಾಶಮಾಡಿ ಎಂದು. ಬೇರೆ ದೇಶಗಳಲ್ಲಿ ಕಂದಾಯ ಇದೆ, ಜಾಸ್ತಿ ಇದೆ ಎಂದು ನಾವೂ ಹಾಗೆ ಮಾಡಬೇಕೆಂದು ವಾದ ಮಾಡುವುದು ಬೇಡ. ಹೊಸ ದಾರಿ ನಾವು ಕಂಡುಹಿಡಿಯಬೇಕು. ಕಂದಾಯ ಹಾಕುವುದು ಹಳೇ ಕಾಲದ ನೀತಿ, ಭೂಮಿಯನ್ನೇ ಅವಲಂಬಿಸಿರುವ ರೈತನಿಗೆ ಕಂದಾಯ ಬೇಡ. ಈ ದಿವಸ ಕಾರ್ಖಾನೆಗಳಲ್ಲಿರುವವರು ಎಷ್ಟು ಬೇಕಾದರೂ ಸಂಪಾದನೆ ಮಾಡಬಹುದು, ಅವರಿಗೆ ಕಟ್ಟುನಿಟ್ಟಿಲ್ಲ, ಸುಲಭವಾಗಿ ಅವರು ಸಂಪಾದನೆ ಮಾಡಬಹುದು. ಭೂಮಿಯಿಂದ ಉತ್ಪತ್ತಿ ಮಾಡುವುದು ಕಷ್ಟಕರ ಎಂಬುದನ್ನು ಅರಿತಿದ್ದೀರಾ ? ಅಂಥ ಕಷ್ಟ ಪಡುವವನಿಗೆ ಗಂಡಾಂತರ ಪರಿಸ್ಥಿತಿಯಿರುವಾಗ, ಹೆಚ್ಚು ಅನ್ನ ಬೇಕಾಗಿರುವಾಗ ರೈತನಿಗೆ ಪ್ರೋತ್ಸಾಹ ಕೊಡುವುದು ಸರಕಾರದ ಆದ್ಯ ಕರ್ತವ್ಯ. ಆ ದೃಷ್ಟಿಯಿಂದ ಸರಕಾರ ದೊಡ್ಡ ಮನಸ್ಸು ಮಾಡಿ ಈ ಮಸೂದೆಯನ್ನು ವಾಪಸು ತೆಗೆದು ಕೊಳ್ಳಬೇಕು ರೈತರಿಗೆ ಅನುಕೂಲವಾಗುವ ಮಸೂದೆಗಳನ್ನು ಸಭೆಯಮುಂದೆ ತಂದು ರೈತರಿಗೆ ಉತ್ತೇಜನ ನೀಡುವ ನೀತಿಯನ್ನು ಮುಂದುವರಿಸಬೇಕು. ಹಾಗೆ ಮಾಡಿದರೆ ರೈತರಿಗೆ ಒಳ್ಳೆಯ ಉಪಕಾರ ಮಾಡಿದಂತಾಗುತ್ತದೆ. ಈ ಮಸೂದೆಯಲ್ಲಿ ಒಬ್ಬರಿಗೊಂದು ನೀತಿ ಇನ್ನೊಬ್ಬರಿಗೆ ಇನ್ನೊಂದು ನೀತಿ ಇದೆ ; ಶೇಕಡ ಆರೂಕಾಲು ಇದ್ದುದ್ದನ್ನು ನಾಲ್ಕಕ್ಕೆ ಇಳಿಸಿದ್ದೀರಿ. ಕಾಫಿ, ಏಲಕ್ಕಿ ಇತ್ಯಾದಿಗೆ, ಪ್ಲಾಂಟೇಷನ್ನಿಗೆ ಶೇಕಡ ಒಂದು ಎಂದು ನಮೂದಿಸಿದೆ. ಹೀಗೆ ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಎಂಬಂತೆ ಭಿನ್ನವಾದ ನೀತಿಯನ್ನು ಅನುಸರಿಸಿರುವಂತೆ ಕಾಣುತ್ತದೆ. ಏಕೆ ಈ ಭೇಧ ? ಪ್ಲಾಂಟೇಷನ್ನಿಗೆ 10—15 ವರ್ಷ ಕಷ್ಟ ಪಡಬೇಕು, ಅದೇರೀತಿಯ ಕಷ್ಟ ಬೇರೆ ಬೆಳೆಗಳ ಸಂಬಂಧದಲ್ಲೂ ಇದೆ, ತೆಂಗಿನ ಬೆಳೆಗೆ 10 ವರ್ಷ ಕಷ್ಟ ಪಡಬೇಕು. ಹಾಗಿರುವಾಗ ತೆಂಗು ಬೆಳೆಯುವವರಿಗೇಕೆ ರಿಯಾಯಿತಿ ಇಲ್ಲ ? ಮಾವಿನ ಗಿಡ ಹಾಕಿ ಫಲಕ್ಕೆ ಬರಬೇಕಾದರೆ 10—15 ವರ್ಷ ಬೇಕು. ಇದೇ ರೀತಿಯ ಅನೇಕ ಬೆಳೆಗಳಿವೆ. ಹೀಗಿರುವಾಗ ನೀವು ಒಂದು ರೀತಿ ವಿಂಗಡಣೆ ಮಾಡಿ ಒಂದು ರೀತಿಯಲ್ಲೇಕೆ ಕನ್‌ಫ್ಯೂಷನ್ ಕ್ರಿಯೇಟ್ ಮಾಡಿದ್ದೀರಿ ? ಕೆಲವೊಂದು ಭಾಗದ ಜನರಿಗೆ ಉತ್ತೇಜನ ಕೊಟ್ಟು ಮತ್ತೆ ಕೆಲವು ಭಾಗದವರಿಗೆ ಕೊಡದಿರುವುದು ಸರಿಯಲ್ಲ, ಎಲ್ಲರಿಗೂ ಕೂಡ ಒಂದೇ ಸಮನಾದ ಅನುಕೂಲವಾಗಬೇಕು.

ಶ್ರೀ ಎಂ. ವಿ. ಕೃಷ್ಣಪ್ಪ.—ಸರ್‌ಛಾರ್ಜ್ ಇದ್ದಾಗ ಬಹಳ ಜಾಸ್ತಿಯಾಗುತ್ತಿತ್ತು, ಈಗ ಕಡಮೆಯಾಗುತ್ತದೆ.

ಶ್ರೀ ಎಸ್. ಶಿವಪ್ಪ.—ತಾತ್ಕಾಲಿಕವಾಗಿ ದೇಶಕ್ಕೆ ಹಣ ಬೇಕು, ಆದುದರಿಂದ ಕೇವಲ ಒಂದು ವರ್ಷ ಮಾತ್ರ ಸರ್‌ಛಾರ್ಜ್ ಹಾಕುತ್ತೇವೆ ಎಂದು ಹೇಳಿದಾಗ ರೈತರು ಬಹಳ ಸಂತೋಷದಿಂದ

ಕೊಡಲು ಒಪ್ಪಿದರು, ಮುಂದಿನ ವರ್ಷ ವಜಾ ಮಾಡಬಹುದೆಂದು ನಂಬಿದ್ದರು. ಆದರೆ ಈಗ ಪುನಃ ಬೇರೆ ರೀತಿಯಲ್ಲಿ ಹೆಚ್ಚಿನ ಕಂದಾಯದ ಹೊರೆ ಬಂದಿರುವುದನ್ನು ನೋಡಿ ರೈತರು ಭ್ರಾಂತರಾಗಿದ್ದಾರೆ. ಮಲೆನಾಡಿನ ರೈತರಿಗೆ ಒಳ್ಳೆಯದನ್ನು ಮಾಡುವುದಕ್ಕಾಗಿ ಕಾಫಿಗೆ ಒಂದು ಪರ್ಸೆಂಟ್ ಹಾಕಿದ್ದೀರಿ. ಅಡಿಕೆ ತೋಟದವರು ಮಲೆನಾಡಿನವರೇ ಅಲ್ಲವೇ? ಅವರಿಗೆ ಮತ್ತು ಇಂಥ ಇತರ ಬೆಳೆಗಾರರಿಗೇಕೆ ಆ ಸೌಲಭ್ಯ ನೀಡಿಲ್ಲ? ಈ ದಿವಸ ಭೂಮಿಯಿಂದ ಆದಾಯ ಕಡಮೆ ಇರುವಾಗ ಬಹಳ ಜಾಸ್ತಿ ಕೊಡಬೇಕಾಗುತ್ತದೆ. ಈ ಪದ್ಧತಿ ಬಿಡಿ. ಈಗ ಆದಾಯ ಅಳತೆ ಮಾಡುವವರು ಯಾರು? ಸರ್ವೆ ಸೆಟ್ಲ್‌ಮೆಂಟ್ ವರದಿಯನ್ನು 19 ಜನ ಅಧಿಕಾರಿಗಳು 19 ರೀತಿಯಲ್ಲಿ ತಯಾರಿಸಿದ್ದಾರೆ, ರಾಗಿ ಬೆಳೆಯುವ ಒಂದೇ ರೀತಿಯ ಜಮೀನಿನ ವಿಚಾರದಲ್ಲಿ ಒಂದು ಕಡೆ ಒಂದು ರೀತಿಯಲ್ಲಿ ಮತ್ತೊಂದು ಭಾಗದಲ್ಲಿ ಮತ್ತೊಂದು ರೀತಿಯಲ್ಲಿ ವರದಿಮಾಡಿದ್ದಾರೆ. ಒಬ್ಬ ಆಫೀಸರು ಒಂದು ಕಡೆ ಒಂದು ರೀತಿ ಬರೆದರೆ ಮತ್ತೊಬ್ಬ ಆಫೀಸರು ಮತ್ತೊಂದು ಕಡೆ ಮತ್ತೊಂದು ರೀತಿಯಲ್ಲಿ ಬರೆದಿದ್ದಾರೆ. ಆದುದರಿಂದ ತಮ್ಮಲ್ಲಿ ಶಾಸ್ತ್ರೀಯ ವಿಧಾನವಿಲ್ಲ, ಶೇಕಡ ನಾಲ್ಕರಷ್ಟು ವಿಧಿಸುತ್ತೇವೆಂದು ಹೇಳುವುದರಲ್ಲೂ ಕೂಡ ಶಾಸ್ತ್ರೀಯವಾದ ವಿಧಾನವಿಲ್ಲ.

Mr. DEPUTY SPEAKER.—The House will now rise and meet after half-an-hour.

———

The House adjourned for recess at Three of the Clock and re-assembled at Thirty Minutes past Three of the Clock.

———

[MR. DEPUTY SPEAKER in the Chair.]

ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಕಂದಾಯದ ಈ ಮಸೂದೆಯನ್ನು ವಿರೋಧ ಮಾಡುತ್ತ ನಾನು ತಮ್ಮ ಮುಖೇನ ಕಂದಾಯ ಸಚಿವರಿಗೆ ಈ ಮಸೂದೆಯನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕು ಎಂದು ಹೇಳುತ್ತಿದ್ದೇ. ತೆರಿಗೆಯ ಭಾರದಿಂದ ತನ್ನ ಜೀವನವನ್ನು ಸರಿಯಾಗಿ ನಡೆಸಲು ಮುಂದೆ ಏನು ಮಾಡಬೇಕು ಎಂದು ರೈತ ಚಿಂತಾಕ್ರಾಂತನಾಗಿದ್ದಾನೆ. ಅವನಿಗೆ ಬೇಕಾದ ಎಲ್ಲ ವಸ್ತುಗಳೂ ಕೂಡ ದುಬಾರಿಯಾಗುತ್ತಿವೆ. ಅವುಗಳ ಬೆಲೆಗಳು ವಿಷವೇರಿದ ಹಾಗೆ ಗಗನಕ್ಕೆ ಏರುತ್ತಿವೆ. ಇವತ್ತು ಭೂಮಿಯನ್ನು ಅವಲಂಬಿಸಿರತಕ್ಕ ರೈತ ತನ್ನ ಜೀವನವನ್ನು ನಡೆಸುವುದೇ ಕಷ್ಟವಾಗಿದೆ. ಭೋಗ ಜೀವನವಲ್ಲ, ಸಾಮಾನ್ಯವಾದ ಅಂತಸ್ತಿನ ಪ್ರಮಾಣದ ಜೀವನವನ್ನು ಕೂಡ ಮಾಡತಕ್ಕ ಪರಿಸ್ಥಿತಿಯಲ್ಲಿಲ್ಲವೆನ್ನುವುದನ್ನು ನಾವೆಲ್ಲರೂ ನೋಡಿದ್ದೇವೆ. ಅದೃಷ್ಟವಶಾತ್ ನಮ್ಮ ದೇಶದ ರೈತ ವರ್ಗದಲ್ಲಿ ಸಂಘಟನೆ ಇಲ್ಲ. ಎಚ್ಚೆತ್ತ ರೈತ ಜನಾಂಗ ನಮ್ಮ ದೇಶದಲ್ಲಿಲ್ಲ. ಎಚ್ಚೆತ್ತ ಜನಾಂಗವಿದ್ದರೆ, ಸಂಘಟಿತರಾಗಿದ್ದರೆ ಅದರ ವಿಚಾರ ಬೇರೆ ರೀತಿ ಇರುತ್ತಿತ್ತು. ಇವತ್ತಿನ ದಿವಸ ಪಡಬಾರದ ಕಷ್ಟವನ್ನು ಪಡುತ್ತಿದ್ದರೂ ಕೂಡ ತನಗೆ ತಾನೇ ಸಂಕಷ್ಟವನ್ನು ನುಂಗಿಕೊಳ್ಳುತ್ತಾನೆಯೇ ಹೊರತು ಹೊರಗೆ ತೋರಿಸಿ ತನ್ನ ಕಷ್ಟಕ್ಕೆ ಪರಿಹಾರವನ್ನು ಹುಡುಕತಕ್ಕ ಮಾರ್ಗವನ್ನು ಕಾಣದೆ ಕಗ್ಗತ್ತಲೆಯಲ್ಲಿ ಹೋಗುತ್ತಿದ್ದಾನೆ. ಅವನ ಜೀವನವನ್ನು ನೋಡಿದರೆ ಅದು ಜೀವನವೇ ಎನ್ನುವಂಥ ಸ್ಥಿತಿಯಲ್ಲಿದ್ದಾನೆ. ಎಂಥ ಜೀವನವನ್ನು ಮಾಡಿಕೊಂಡಿರುತ್ತಾನೆ! ಅವನ ಮಕ್ಕಳಿಗೆ ವಿದ್ಯೆಯನ್ನು ಕೊಡತಕ್ಕ ಶಕ್ತಿ ಅವನಿಗಿಲ್ಲ. ಇಂಥ ರೈತ ತಾನು ಕಷ್ಟ ಪಟ್ಟು ಬೆಳೆದಂಥ ಬೆಳೆಗೆ ನಾವು ಸಂತೋಷ ಪಡದೆ ಅವನಿಗೂ ಕಂದಾಯವನ್ನು ಕೊಡು ಎಂದು ಹೇಳತಕ್ಕ ಕಾಲ ಬಂದಿದೆ. ನಾನು ಮೊದಲೇ ಹೇಳಿದ ಹಾಗೆ ಅವನು ಅಧಿಕ ಲಾಭವನ್ನು ಸಂಪಾದನೆ ಮಾಡಿದರೆ ಅವನು ತೆರಿಗೆಯನ್ನು ಕೊಡಬೇಕು. ಆದರೆ ಇವತ್ತು ಲಾಭವಿಲ್ಲದೆ ಇರತಕ್ಕ ರೈತನನ್ನೂ ಕೂಡ ಕಂದಾಯವನ್ನು ಕೊಡು ಎಂದರೆ ಇದು ಯಾವ ನೀತಿ? ಸುಖೀ ರಾಜ್ಯ ಸ್ಥಾಪನೆ ಮಾಡುತ್ತೇವೆ, ಸಮಾಜವಾದ ಸರ್ಕಾರವನ್ನು ಸ್ಥಾಪನೆ ಮಾಡುತ್ತೇವೆ ಎಂದು ಹೇಳುವುದು ಬರೀ ಘೋಷಣೆಗಳಾಗಿವೆ. ನಿಜವಾಗಿ ಬಡ ರೈತನಿಗೆ ಏನೂ ಅನುಕೂಲವಾಗಲಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ರೈತನು ತಾನು ಜೀವನವನ್ನು ನಡೆಸಲು ಆಗದಂಥ ದುರ್ಭರಸ್ಥಿತಿಯಲ್ಲಿದ್ದಾನೆ. ಈಗಿನ ಕಂದಾಯವನ್ನು ಕೊಡತಕ್ಕ ಶಕ್ತಿ ರೈತನಿಗಿಲ್ಲ. ಈ ಕಂದಾಯದ ಮಸೂದೆಯಿಂದ ಆಗತಕ್ಕ ಭಾರವನ್ನು ರೈತನ ಮೇಲೆ ಹೇರುವುದಾದರೆ ಅನೇಕ ಬಡ ರೈತರು ತಮ್ಮ ಜಮೀನನ್ನು ಮಾರಾಟ ಮಾಡಬೇಕಾಗುತ್ತದೆ. ತಮ್ಮ ಮಕ್ಕಳನ್ನು ಓದುವುದಕ್ಕೆ ಕಳಿಸುವುದನ್ನು ಬಿಟ್ಟು ಜೀತಕ್ಕೆ ಇಡತಕ್ಕ

(ಶ್ರೀ ಎಸ್. ಶಿವಪ್ಪ)

ಪರಿಸ್ಥಿತಿ ಬರಬಹುದು. ಕಂದಾಯವನ್ನು ಕೊಡುವುದಕ್ಕೂ ಜೀತ ಇಡಬೇಕಾಗುತ್ತದೆ. ಇವತ್ತಿನ ದಿವಸ ಬಹುಶಃ ಒಂದು ರೂಪಾಯಿ ಇರತಕ್ಕ ಕಂದಾಯ ಒಂದೂವರೆ ಅಥವಾ ಎರಡು ರೂಪಾಯಿ ಆದರೂ ಕೂಡ ಕಂದಾಯದ ಮೇಲಿನ ಸೆಸ್‌ಗಳನ್ನು ಹಾಕಿದರೆ ಬಹುಶಃ ನೂರಕ್ಕೆ 300 ರಷ್ಟು 400 ರಷ್ಟು ಆಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ನೋಡಿದರೆ ರೈತ ಭೂಮಿಯನ್ನು ಅವಲಂಬನೆ ಮಾಡಿರುವವರು ವ್ಯವಸಾಯವನ್ನು ಬಿಡಲಿ ಎನ್ನುವ ತೀರ್ಮಾನಕ್ಕೆ ಸರ್ಕಾರ ಬಂದಿದೆಯೇ ಅಥವಾ ರೈತರ ಬಗ್ಗೆ ಏನು ಅಭಿಪ್ರಾಯ ಇದೆ ಎನ್ನುವುದನ್ನು ನಾನು ತಿಳಿಯಬಯಸುತ್ತೇನೆ. ಕಂದಾಯ ಸಚಿವರು ರೈತರ ಮಕ್ಕಳು. ಅವರು ಮನಸ್ಸಿನಲ್ಲಿ ಮನಸ್ಸಿದ್ದು ಈ ಮಸೂದೆಯನ್ನು ತಂದಿದ್ದಾರೋ ಅಥವಾ ಸರ್ಕಾರದ ಬಲಾತ್ಕಾರದಿಂದ ತಂದಿದ್ದಾರೆಯೋ ಗೊತ್ತಿಲ್ಲ. ಇದು ಕಂದಾಯವನ್ನು ಕಡಮೆ ಮಾಡತಕ್ಕ ಮಸೂದೆ ಎಂದು ಹೇಳುತ್ತಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಬರುವುದಕ್ಕೆ ಮೊದಲೇ ಬಂದಿತ್ತು. ನಾನು ಬಂದು ಅದನ್ನು ಕಡಮೆ ಮಾಡಿದೆ.

ಶ್ರೀ ಎಸ್. ಶಿವಪ್ಪ.—ಕಂದಾಯವನ್ನು ಕಡಮೆ ಮಾಡುವ ಮಸೂದೆ ಎಂದು ಹೇಳುತ್ತಾರೆ. ಆದರೆ ಈ ಮಸೂದೆಯಿಂದ ಕಂದಾಯ ಕಡಮೆ ಆಗುವುದಕ್ಕೆ ಬದಲಾಗಿ ಜಾಸ್ತಿಯಾಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಕಂದಾಯವನ್ನು ಕಡಮೆ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಈ ದೇಶದಲ್ಲಿ ಕಂದಾಯ ಜಾಸ್ತಿ ಆಗಿರುವುದರಿಂದ ದಯವಿಟ್ಟು ರಾಜೀನಾಮೆ ಕೊಟ್ಟು ಈ ಕಡೆ ಬನ್ನಿ ರೈತರು ನಿಮ್ಮನ್ನು ಹೊಗಳುತ್ತಾರೆ ಎಂದು ಕಂದಾಯ ಮಂತ್ರಿಗಳಿಗೆ ಹೇಳುತ್ತೇನೆ. ರೈತರಿಗೆ ತೊಂದರೆ ಮಾಡತಕ್ಕ ಈ ಮಸೂದೆಯನ್ನು ಶಾಸನ ಸಭೆಯಿಂದ ವಾಪಸು ತೆಗೆದುಕೊಳ್ಳಲು ಉದಾರ ಮನಸ್ಸು ಮಾಡಿ ಈಗಿನ ಕಂದಾಯ ಪದ್ಧತಿಯನ್ನು ಬದಲಾಯಿಸತಕ್ಕ ವಿಚಾರವನ್ನು ಮಾಡಿ ಕೀರ್ತಿಯನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಇಲ್ಲದೆ ಹೋದರೆ, ಈಗಿರತಕ್ಕ ರೀತಿಯಲ್ಲಿ ಈ ಮಸೂದೆಯಿಂದ ನಮ್ಮ ದೇಶದ ರೈತರಿಗೆ ದೊಡ್ಡ ಕಷ್ಟವನ್ನು ತಂದೊಡ್ಡಿ ರೈತ ಜೀವನವನ್ನು ಮಾಡುವುದಕ್ಕೂ ಅವಕಾಶವಿಲ್ಲದಂತೆ ಮಾಡಿದ ಹಾಗೆ ಆಗುತ್ತದೆ. ಯಾವ ದೇಶದಲ್ಲಿ ರೈತನನ್ನು ಅನ್ನದಾತ ಎಂದು ಹೊಗಳುತ್ತೇವೆಯೋ, ಯಾವ ರೈತನ ಉದ್ಧಾರ ಮಾಡುತ್ತೇವೆಂದು ಹೇಳುತ್ತೇವೆಯೋ, ಅವನ ಕಲ್ಯಾಣ ಮಾಡತಕ್ಕ ಕಾರ್ಯದಲ್ಲಿ ನಿರತರಾಗುತ್ತೇವೆ ಎಂದು ಸಾರಿ ಸಾರಿ ಹೇಳುತ್ತೇವೆಯೋ ಅಂಥ ರೈತರ ಕಲ್ಯಾಣ ಮಾಡುವುದರಲ್ಲಿ ಆ ರೈತನನ್ನು ಕೊಲೆ ಮಾಡತಕ್ಕ ಪದ್ಧತಿ ಖಂಡಿತವಾಗಿ ದೇಶಕ್ಕೆ ಅಪಾಯಕಾರಿಯಾದ ನೀತಿ. ಇಂಥ ಅಪಾಯಕರವಾದ ಕಾನೂನುಗಳನ್ನು ಈ ಶಾಸನ ಸಭೆಯ ಕಡತದಿಂದ ಹೊರಗೆ ಹಾಕಬೇಕು, ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳಬೇಕು ಎಂದು ನಾನು ಕಂದಾಯ ಮಂತ್ರಿಗಳಿಗೆ ಸೂಚನೆ ಕೊಟ್ಟು ಈ ಮಸೂದೆಯನ್ನು ವಿರೋಧಿಸುತ್ತೇನೆ, ಸ್ವಾಮಿ.

† ಶ್ರೀ ಗಾಂಡಿ ವೀರಪ್ಪ (ಹರಿಹರ).—ಮಾನ್ಯ ಸಭಾಧ್ಯಕ್ಷರೇ, ಈ ತಿದ್ದುಪಡಿ ಮಸೂದೆಯನ್ನು ತಂದಿರತಕ್ಕ ಹಿನ್ನೆಲೆ ನಮಗೆಲ್ಲ ಗೊತ್ತಾಗಿದೆ. ಮಾನ್ಯ ಕಂದಾಯ ಸಚಿವರು ಅದಕ್ಕೆ ವಿವರಣೆಯನ್ನು ಕೊಟ್ಟಿದ್ದಾರೆ. ಈವರೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾಡಿದ ಭಾಷಣವನ್ನು ನಾನು ಕುತೂಹಲದಿಂದ ಕೇಳಿದ್ದೇನೆ. ಅವರು ಒಂದೇ ಒಂದು ವಿಚಾರವನ್ನು ಬಹಳ ಒತ್ತಾಯ ಮಾಡಿ ಸಲಹೆ ಮಾಡಿದ್ದು ಏನೆಂದರೆ, 'ಯಾರು ಹೆಚ್ಚು ಬೆಳೆಯುತ್ತಾರೆಯೋ ಅಂಥವರ ಮೇಲೆ ವ್ಯವಸಾಯ ತೆರಿಗೆಯನ್ನು ಹಾಕಬೇಕು, ಕಂದಾಯ ಪದ್ಧತಿಯನ್ನು ನಾನು ವಿರೋಧ ಮಾಡುತ್ತೇನೆ, ಅದನ್ನು ನಿರ್ಮೂಲ ಮಾಡಬೇಕು, ಕಂದಾಯ ತೆಗೆದುಕೊಳ್ಳುವುದು ಒಳ್ಳೆಯದಲ್ಲ' ಎಂದು ಮೂಲ ತತ್ವದ ಮೇಲೆ ಹೇಳುತ್ತಿದ್ದರು. ಬಹುಶಃ ನಾವು ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಬಹಳ ಬಡವರಾಗಿರುವವರು, ಬಹಳ ಕಡಮೆ ಜಮೀನನ್ನು ಯಾರು ಹೊಂದಿರುತ್ತಾರೆಯೋ ಅವರಿಗೆ ಜಮೀನಿನಿಂದ ಸಾಕಷ್ಟು ಬೆಳೆ ಬರದೆ ಅವರ ಹೊಟ್ಟೆ ತುಂಬಿಕೊಳ್ಳುವುದೇ ಕಷ್ಟವಾಗಿರುವಾಗ ಕಂದಾಯವನ್ನು ಕೊಡುವುದಕ್ಕೆ ಹೇಗೆ ಸಾಧ್ಯ? ಅವರಿಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಅಂಥ ಸಣ್ಣ ಸಣ್ಣ ಹಿಡುವಳಿದಾರರು ಯಾರಾದರೂ ಇದ್ದರೆ ಅವರಿಗೆ ವಿನಾಯಿತಿಯನ್ನು ಕೊಡಬೇಕು ಎಂದು ಹೇಳಿದ್ದರೆ, ಆ ಬಗ್ಗೆ ಈ ಮಸೂದೆಯಲ್ಲಿ ಏನೂ ಮಾಡದೆ ಇದ್ದರೂ ಸಮಯಾನುಸಾರವಾಗಿ ಮಾಡುವ ತತ್ವವನ್ನು ಮಾತ್ರ ಒಪ್ಪಿಕೊಳ್ಳಬಹುದು ಎಂದು ನಾನು ವೈಯುಕ್ತಿಕವಾಗಿ ಹೇಳುತ್ತೇನೆ. ಅದಷ್ಟು ಜಾಗ್ರತೆಯಾಗಿ ಈ ಸಣ್ಣ ಹಿಡುವಳಿದಾರರಿಗೆ ಪರಿಹಾರವನ್ನು ಕೊಡಬೇಕು ಎನ್ನುವುದನ್ನು ತಾತ್ವಿಕವಾಗಿ ಒಪ್ಪಿಕೊಳ್ಳಬಹುದು. ವರಮಾನ ತೆರಿಗೆ ಮತ್ತು ಮಾರಾಟ ತೆರಿಗೆ ಇವನ್ನು ವಿಧಿಸುವಾಗ ಸಣ್ಣ ಸಣ್ಣ ವರ್ತಕರಿಗೆ ವಿನಾಯಿತಿಯನ್ನು ಕೊಡುವಂತೆ ವ್ಯವಸಾಯ ಮಾಡುವವರಿಗೂ

ವಿನಾಯಿತಿಯನ್ನು ಕೊಡಬೇಕು ಎನ್ನುವ ಸಲಹೆ ಸಾಧುವಾಗಿದೆ. ಇದಕ್ಕೆ ಐದು ಎಕರೆ ಖುಷ್ಕಿ ಜಮೀನಿಗಿಂತ ಕೆಳಪಟ್ಟು ಇರುವವರು ಕಂದಾಯವನ್ನು ಕೊಡಬೇಕಾಗಿಲ್ಲ ಎಂಬ ವಿನಾಯಿತಿಯನ್ನು ಕೊಡಬೇಕು ಎನ್ನುವ ತತ್ವವನ್ನು ವೈಯುಕ್ತಿಕವಾಗಿ ನಾನು ಒಪ್ಪಿಕೊಳ್ಳುತ್ತೇನೆ.

ಅಂತಹ ಪರಿಸ್ಥಿತಿ ಬರಬೇಕಾದುದು ಅಗತ್ಯ. ಒಂದು ಸಮಾಜದ ರಚನೆಯಲ್ಲಿ ಈ ಜಮೀನ್ದಾರರಲ್ಲಿ ಸಣ್ಣ ಸಣ್ಣ ಹಿಡುವಳಿದಾರರಿಗೆ ರಿಯಾಯಿತಿ ಕೊಡುವ ತತ್ವವನ್ನು ನಾನು ಒಪ್ಪುತ್ತೇನೆ. ಆ ರೀತಿ ಮಾಡಿದ್ದರೆ ನಾವು ಒಪ್ಪುತ್ತಿದ್ದೆವು. ಆದರೆ ಕಂದಾಯವೇ ಇರಕೂಡದು ಎಂದು ಹೇಳುವುದಕ್ಕಾಗುವುದಿಲ್ಲ. ಮೊದಲನಿಂದಲೂ ಸರ್ಕಾರಕ್ಕೆ ಬೇರೆ ಯಾವ ತೆರಿಗೆಗಳೂ ಇಲ್ಲದೇ ಇದ್ದ ಕಾಲದಲ್ಲಿ ಮುಖ್ಯವಾದ ವರಮಾನ, ಮೊದಲನೆಯ ಆದಾಯವೆಂದರೆ, ಲ್ಯಾಂಡ್ ರೆವಿನ್ಯೂ ಮಾತ್ರ ಆಗಿತ್ತು. ಹಿಂದೆ ವರಮಾನ ತೆರಿಗೆಯೆಂದು ಇರಲಿಲ್ಲ. ಹಿಂದೆ ಲ್ಯಾಡ್ ರೆವಿನ್ಯೂ ಎಂದು ಏನು ಇತ್ತೋ ಅದನ್ನು ಮೂಲಭೂತವಾಗಿ ಈಗ ತೆಗೆದು ಹಾಕಬೇಕೆಂದು ಹೇಳಿದರೆ ಆಗುವುದಿಲ್ಲ. ಅದನ್ನು ಕೊಡುವ ಶಕ್ತಿ ಇರುವವರು ಕೊಡುತ್ತಾರೆ. ಆ ರೀತಿ ತೆಗೆದುಕೊಳ್ಳುವುದರಲ್ಲಿ ಏನೂ ತಪ್ಪಿಲ್ಲ. ಇದೇ ರೀತಿಯ ತತ್ವವನ್ನು ಎಲ್ಲಾ ಕಾಲದಲ್ಲೂ ಅಂಗೀಕಾರ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಕಮ್ಯೂನಿಸ್ಟ್ ಕಂಟ್ರೀಸ್ ವಿಷಯವಾಗಿ ಸ್ವಲ್ಪ ಯೋಚನೆ ಮಾಡಿ ನೋಡಿ. ಅಲ್ಲಿ ಖಾಸಗಿ ಆಸ್ತಿಯೆಂದು ಇರುವುದಿಲ್ಲ. ಎಲ್ಲಾ ಸರ್ಕಾರೀ ಆಸ್ತಿಯಾಗಿರುವುದರಿಂದ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀ ಗಾಂಜಿ ವೀರಪ್ಪ.—ಇಲ್ಲಿ ಕಮ್ಯೂನಿಸ್ಟ್ ತತ್ವ ಬೇಡ. ಭೂಕಂದಾಯ ವಜಾ ಮಾಡುವ ವ್ಯವಸ್ಥೆ ಎಲ್ಲೂ ಕಾಣುವುದಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಆ ಪದ್ಧತಿ ಅಮೆರಿಕಾ ದೇಶದಲ್ಲಿದೆ. ದಯವಿಟ್ಟು ನೋಡಿ.

ಶ್ರೀ ಗಾಂಜಿ ವೀರಪ್ಪ.—ಶ್ರೀಮಾನ್ ಶಿವಪ್ಪನವರು ಮತ್ತು ಅವರ ಪಕ್ಷದವರು ಸರ್ಕಾರ ನಡೆಸುವಾಗಲೂ ಅವರ ಕೈಲಿ ಇದು ಸಾಧ್ಯವಾಗುವುದಿಲ್ಲ. ಏನೋ ವಿರೋಧ ಮಾಡೋಣವೆಂದು ಮಾತನಾಡುತ್ತಾರೆ ಅಷ್ಟೆ.

ಶ್ರೀ ಎಸ್. ಶಿವಪ್ಪ.—ನಾವು ಮಾಡುತ್ತೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಅಮೇರಿಕಾ ದೇಶದಲ್ಲಿ ಈ ವಿಷಯದ ಬಗ್ಗೆ ಯಾವ ರೀತಿ ಇದೆಯೆಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಂಡು ಮಾತನಾಡಲಿ.

ಶ್ರೀ ಗಾಂಜಿ ವೀರಪ್ಪ.—ಅವರ ವಾದವನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಅದು ಎಷ್ಟು ಮಾತ್ರವೂ ಶಾಸ್ತ್ರೀಯವಾದ ವಾದವಲ್ಲ. ಸಾಮಾನ್ಯವಾಗಿ ಒಬ್ಬನಿಗೆ 100 ಎಕರೆ ಖಾಸಗೀ ಜಮೀನು ಇದ್ದರೆ ಏತಕ್ಕಾಗಿ ಕಂದಾಯ ಕೊಡಬಾರದು ! ದೇಶದಲ್ಲಿ ಯಾರೂ ಕಂದಾಯ ರಿಯಾಯತಿ ಕೊಡಿ ಎಂದು ಕೇಳುವುದಿಲ್ಲ. ಅವರು ಇಂತಹ ಪ್ರೊಪಗ್ಯಾಂಡ ಮಾಡಿ ಭಾಷಣ ಮಾಡುವುದಾದರೆ ನಾನೂ ಸಹ ತಾತ್ವಿಕವಾಗಿ ಭಾಷಣ ಮಾಡಬಹುದು. ಆದರೆ ಅದು ನಿಷ್ಪ್ರಯೋಜಕ. ಮೊದಲನಿಂದ ಈ ವಿಚಾರದಲ್ಲಿ ಏನೊಂದು ನಿರ್ಣಯವಿತ್ತು ಅದಕ್ಕೆ ಈಗ ನಾವು ತಿದ್ದುಪಡಿಯನ್ನು ಮಂಡಿಸಿದ್ದರಲ್ಲಿ ಏನು ಕಾಣುತ್ತದೆಂದರೆ, ಅದನ್ನು ನಾನು ಸ್ವಲ್ಪಮಟ್ಟಿಗೆ ವಿಮರ್ಶೆ ಮಾಡಿ ಹೇಳುತ್ತೇನೆ. ದೇಶದಲ್ಲಿ ಅನೇಕರು ಭೂಕಂದಾಯವನ್ನು ಬಹಳ ಹೆಚ್ಚು ಮಾಡಬಾರದು ಎಂದು ಹೇಳುತ್ತಿದ್ದಂಥ ಒಂದು ಕೂಗು ಇತ್ತು. ಅದಕ್ಕಾಗಿ ಈ ಸಭೆಯ ಅಭಿಪ್ರಾಯವನ್ನು ಪಡೆಯಬೇಕೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಇದರ ಹಿನ್ನೆಲೆ ಯೋಚನೆ ಮಾಡಿದರೆ, 30 ವರ್ಷಗಳಿಗೊಮ್ಮೆ ರಿಸೆಟಲ್‌ಮೆಂಟ್ ಏನು ಆಗಬೇಕಾಗಿತ್ತೋ ಅದು ಅನೇಕ ಕಡೆಗಳಲ್ಲಿ ಆಗಲಿಲ್ಲ. 60 ವರ್ಷಗಳ ಹಿಂದೆ ಜಮೀನಿನ ಸ್ವರೂಪ ಏನಿತ್ತೋ ಅದೇ ಈಗಲೂ ಇದೆಯೆ ? ಭೂಮಾಲೀಕರು ಇನ್ನೂ ಜಮೀನನ್ನು ಸುಧಾರಣೆ ಮಾಡಿ ನಿಷ್ಪ್ರಯೋಜಕವಾಗಿರತಕ್ಕ ಜಮೀನುಗಳನ್ನು ಚೆನ್ನಾಗಿ ಸಾಗುವಳಿ ಮಾಡುವ ಹಾಗೆ ಮಾಡಲು, ಆ ಜಮೀನುಗಳಲ್ಲಿ ಆಹಾರ ಧಾನ್ಯಗಳನ್ನು ಚೆನ್ನಾಗಿ ಬೆಳೆಯುವುದಕ್ಕಾಗಿ ಒಂದು ಯೋಜನೆಯನ್ನು ಮಾಡಿ ಆ ಪ್ರಕಾರ ಸರ್ಕಾರ ಪ್ರಯತ್ನ ಮಾಡುತ್ತಿರುವುದರಿಂದ ಅದರ ಸ್ವರೂಪ ಈಗ ಬದಲಾವಣೆಯಾಗಿದೆ ಸರ್ಕಾರದವರು ಯಾವಾಗಲೂ ಬೇಕಾದಷ್ಟು ಅನುಕೂಲಗಳನ್ನು ರೈತರಿಗೆ ಒದಗಿಸುತ್ತಾರೆ. ಯಾವ್ಯಾವ ರೀತಿಯಲ್ಲಿ ರೈತರಿಗೆ ಇತ್ತೀಚೆಗೆ ಸರ್ಕಾರದವರು ಸಹಾಯ ಮಾಡುತ್ತಿದ್ದಾರೆಂಬುದು ಮಾನ್ಯ ಸದಸ್ಯರೆಲ್ಲರಿಗೂ ಈಗಾಗಲೇ ಗೊತ್ತಾಗಿದೆ. ಜಮೀನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಸರ್ಕಾರದವರು ಬೇಕಾದಷ್ಟು ಸೌಲಭ್ಯಗಳನ್ನು ರೈತರಿಗೆ ಕೊಡುತ್ತಿದ್ದಾರೆ. ಏನೂ ಕೊಡುತ್ತಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆದಕಾರಣ ಸರ್ಕಾರದ ಸೌಲಭ್ಯಗಳಿಂದ ಹೆಚ್ಚು ಬೆಳೆಯನ್ನು ಮಾಡಿರುವವರು ಆಹಾರಧಾನ್ಯಗಳನ್ನು ಚೆನ್ನಾಗಿ ಬೆಳೆದು ಲಾಭ ಸಂಪಾದನೆ ಮಾಡಿ ಕಂದಾಯವನ್ನು ಒಂದಕ್ಕೆರಡರಷ್ಟು ಮಾಡಬೇಕೆಂದು ಹೇಳಿದಾಗ ಅದಕ್ಕೆ ವಿರೋಧ ಮಾಡಿದರೆ ಬಹುಶಃ ಚೆನ್ನಾಗಿಲ್ಲ. ನನಗೂ ಹಲವರು ಗೊತ್ತಿದ್ದಾರೆ. ಒಂದು ತತ್ವವನ್ನು ಹೇಳುತ್ತಾರೆ.

(ಶ್ರೀ ಗಾಂಜಿ ವೀರಪ್ಪ)

ಒಂದಕ್ಕೆ 4-5-10ರಷ್ಟು ಕಂದಾಯವನ್ನು ಖುಷ್ಕಿ ಜಮೀನುಗಳಿಗೆ ಹಾಕಬೇಕೆಂದು ಅಧಿಕಾರಿಗಳು ಈಗಾಗಲೇ ಒಂದು ವರದಿಯನ್ನು ತಯಾರು ಮಾಡಿದ್ದಾರೆ. ಅದು ಶಾಸ್ತ್ರೀಯವಾಗಿ ಸರಿ ಎಂದು ಹೇಳುತ್ತೇನೆ. ಅವರ ವರದಿಯಲ್ಲಿ ತಪ್ಪನ್ನು ಕಂಡು ಹಿಡಿಯುವುದಕ್ಕಾಗುವುದಿಲ್ಲ. ಸಕಾರಣಗಳನ್ನು ಕೊಟ್ಟಿದ್ದಾರೆ. ಸಾಯಿಲ್ ಕನ್ಸರ್‌ವೇಷನ್ ಮಾರ್ಕೆಟಿಂಗ್, ಕ್ರಾಪ್ ಕಂಡೀಷನ್ಸ್-ಇವೆಲ್ಲದರ ಗ್ರಾಸ್ ಇನ್‌ಕಂ ನೋಡಿಕೊಂಡು ಶಾಸ್ತ್ರೀಯವಾದ ವರದಿಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಆ ವರದಿ ಗಳನ್ನು ತಯಾರುಮಾಡತಕ್ಕ ಅಧಿಕಾರಿಗಳನ್ನು ಆಕ್ಷೇಪಣೆ ಮಾಡುವ ಹಾಗಿಲ್ಲ. ನಾವು ಶಾಸ್ತ್ರೀಯ ವಾಗಿ ನೋಡುವುದಾದರೆ ಅವರು ತಾತ್ವಿಕವಾಗಿ ಏನು ವರದಿಯನ್ನು ಕೊಟ್ಟಿದ್ದಾರೋ ಅದನ್ನು ಒಪ್ಪಬೇಕಾಗುತ್ತದೆ. ಅದನ್ನು ನಿರ್ಭಯವಾಗಿ ಮಾಡಿರುವುದರಿಂದ ಅದರಲ್ಲಿ ಏನೂ ತೊಂದರೆ ಇಲ್ಲ. ಈಗಿನ ಪರಿಸ್ಥಿತಿಯನ್ನು ಯೋಚನೆ ಮಾಡಬೇಕು. 2 ರೂಪಾಯಿ ಕಂದಾಯ ಕೊಡುತ್ತಿದ್ದವರು 50 ರೂಪಾಯಿಗಳನ್ನು ಕೊಡಬೇಕು, ಕಾಫಿಪ್ಲಾಂಟರುಗಳು 76ರಷ್ಟು ಅಂದರೆ, 76 ರೂಪಾಯಿ ಗಳನ್ನು ಕೊಡಬೇಕೆಂದು ಮಾಡಿದಾಗ ಸೈಕೋಲಾಜಿಕಲ್ ಫೀಲಿಂಗ್ಸ್ ಬರುತ್ತದೆ. ಮಾಡಿರುವುದು ಶಾಸ್ತ್ರೀಯವಾಗಿ ಸರಿಯಾಗಿದ್ದರೂ ಕೂಡ ಮನುಷ್ಯನಿಗೆ ಮನಸ್ಸಿನಲ್ಲಿ ಒಂದು ವಿಚಾರ ಬರುತ್ತದೆ. ಅದನ್ನು ಯೋಚನೆ ಮಾಡಿಯೇ ಸಾರ್ವಜನಿಕರ ಅಭಿಪ್ರಾಯಕ್ಕೆ ಸರ್ಕಾರದವರು ಮನ್ನಣೆ ಕೊಡು ತ್ತಾರೆ. ಈ ಸಭೆಯ ಅಭಿಪ್ರಾಯಕ್ಕೂ ಮನ್ನಣೆ ಕೊಡುತ್ತಾರೆ. ಅದಕ್ಕಾಗಿಯೇ ಸರ್ಕಾರದವರು ಈ ತಿದ್ದುಪಡಿಯನ್ನು ಮಾಡಿದ್ದಾರೆ. ಈ ತಿದ್ದುಪಡಿ ಪ್ರಕಾರ ಒಂದಕ್ಕೆ ಎರಡರಷ್ಟು ಕಂದಾಯ ವಾಗುತ್ತದೆ. 8-10 ಕಡೆಗಳ ವರದಿಗಳನ್ನು ನೋಡಿದರೆ ಅಲ್ಲೆಲ್ಲಾ ಇನ್ನೂ ಜಾಸ್ತಿ ಇದೆ. ಬಾಕಿ ಕಡೆಗಳಲ್ಲಿರುವುದಕ್ಕಿಂತ ಬಿದರೆ ಕಡೆಯಲ್ಲಿ ಬಹಳ ಕಮ್ಮಿ ಕಂದಾಯವಾಗುತ್ತದೆ. ಮೊದಲಿನಿಂದಲೂ ಹೈದರಾಬಾದ್ ಕರ್ಣಾಟಕದಲ್ಲಿ ಕೆಲವು ಭಾಗಗಳಿದ್ದುವು. ಅಲ್ಲಿ ಒಂದು ಆಧಾರದ ಮೇಲೆ ಕಂದಾಯ ವನ್ನು ನಿಗದಿ ಮಾಡಿದ್ದರು. ಬೊಂಬಾಯಿ ಕರ್ಣಾಟಕದಲ್ಲಿ ಆಗಿನ ಸರ್ಕಾರ ಯಾವುದೋ ಒಂದು ಆಧಾರದ ಮೇಲೆ ಕಂದಾಯವನ್ನು ನಿಗದಿ ಮಾಡಿದ್ದರು. ಯಾವ್ಯಾವ ಭಾಗದಲ್ಲಿ ಯಾವ್ಯಾವ ಆಧಾ ರದ ಮೇಲೆ ಕಂದಾಯವನ್ನು ನಿಗದಿ ಮಾಡಿದ್ದರೋ ಆಯಾ ರೀತಿಯಲ್ಲಿ ಲ್ಯಾಂಡ್ ರೆವಿನ್ಯೂ ರಿಸೆಟಲ್ ಮೆಂಟ್ ಆಗಿದೆ. ಹೀಗೆ ಕೆಲವು ರಾಜ್ಯಗಳಲ್ಲಿ ಕೆಲ ಕೆಲವು ರೀತಿಯಾಗಿ ಮಾಡಿದ್ದಾರೆ.

ಶ್ರೀ ಬಿ. ಭಾಸ್ಕರಶೆಟ್ಟಿ (ಕೌಪ್).—ಸೌತ್ ಕೆನರಾದಲ್ಲಿ ಯಾವಾಗ ರಿಸೆಟಲ್‌ಮೆಂಟ್ ಆಗಿದೆ ಯೆಂಬುದು ಸರ್ಕಾರಕ್ಕೆ ಗೊತ್ತೇ ?

ಶ್ರೀ ಗಾಂಜಿ ವೀರಪ್ಪ.—ಅದನ್ನೂ ಮುಂದೆ ಹೇಳುತ್ತೇನೆ. ಬೊಂಬಾಯಿ ಮತ್ತು ಮೈಸೂರಿ ನಲ್ಲಿ ಕೆಲವು ಆಧಾರಗಳ ಮೇಲೆ ಕಂದಾಯ ನಿಗದಿ ಮಾಡಿದರು. ಒಂದೊಂದು ಕಡೆ ಒಂದೊಂದು ರೀತಿಯ ಆಧಾರದ ಮೇಲೆ ಮಾಡಿರುವುದಾಗಿದೆ ಮೊದಲೇ ಬಹಳ ಜಾಸ್ತಿಯಾಗಿತ್ತು ಎಂದು ಹೇಳಿದರೆ ಅದು ಸತ್ಯಕ್ಕೆ ಬಹಳ ದೂರವಾದುದು. ಆ ರೀತಿಯೇನೂ ಆಗಲಿಲ್ಲ. ಕೆಲವು ಕಡೆ ಆ ರೀತಿ ಮಾಡಿರಬಹುದು. ರಿಸೆಟಲ್‌ಮೆಂಟ್ 30 ವರ್ಷಗಳಿಗೊಮ್ಮೆ ಮಾಡುವುದು ಈಗ ಅದೇ ಒಂದು ಆಧಾರದ ಮೇಲೆ ತಯಾರು ಮಾಡಿರುವಾಗ, ಅದು ಬೇಡ, ಜಾಸ್ತಿ ಎಂದು ತಿದ್ದುಪಡಿ ತಂದಾಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಸ್ವಾಗತ ಮಾಡುವಂತೆ ನಡೆದಿಲ್ಲ. ಆದರೆ ಅವರ ಒಂದು ಉಪವಾಸಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ಇವನ್ನೆಲ್ಲಾ ಮೊದಲೇ ತಿಳಿದುಕೊಂಡು ಉಪವಾಸ ಮಾಡಿದ್ದಾರಷ್ಟೆ. ಆದರೆ ಈಗ ಇದು ನಮ್ಮಿಂದಾಯಿತು, ನಮ್ಮ ಉಪವಾಸದಿಂದ ಇಂತಹ ತಿದ್ದುಪಡಿ ಯಾಯಿತೆಂದು ಅವರು ಸಮಾಧಾನವಾಗಿರಬಹುದು. ಮಂತ್ರಿಗಳು ಹೇಳಿದ ಹಾಗೆ ಆ ವರದಿಗಳನ್ನು ಈ ಸಭೆಯ ಮುಂದೆ ಮಂಡಿಸಿದಾಗ ಇವರಂತೆಯೇ ಸರ್ಕಾರದವರು ಮೊದಲೇ ತೀರ್ಮಾನ ಮಾಡಿದ್ದರು. ಈಗ ಈ ಸಭೆಯ ಅಭಿಪ್ರಾಯವನ್ನು ತಿಳಿದು ತಿದ್ದುಪಡಿ ಮಾಡಬೇಕೆಂದು ತಂದರೇ ವಿನಹ ಮಾನ್ಯ ಸ್ನೇಹಿತರು ಈ ಬಗ್ಗೆ ಪ್ರಚಾರ, ಚಳುವಳಿ, ಉಪವಾಸ ಮಾಡಲಿ ಎಂದೇನೂ ತರಲಿಲ್ಲ. ಸರ್ಕಾರ ದವರು ಆ ರೀತಿ ಏನೂ ತಿಳಿದುಕೊಂಡಿಲ್ಲ. ಅದಕ್ಕಾಗಿ ಸರ್ಕಾರ ಯಾರಿಗೂ ಹೆದರಬೇಕಾಗಿಲ್ಲ.

ಶ್ರೀ ಎಸ್. ಶಿವಪ್ಪ.—ಜನಗಳಿಗಾದರೂ ಹೆದರಿ ಮಾಡಿ.

ಶ್ರೀ ಗಾಂಜಿ ವೀರಪ್ಪ.—ಈಗ ದೇಶದಲ್ಲಿರತಕ್ಕ ಪರಿಸ್ಥಿತಿಯನ್ನು ನೋಡಿ. ರೈತರಿಗೆ ಇದರಿಂದ ಒಳ್ಳೆಯದಾಗಲಿ ಎಂಬ ದೃಷ್ಟಿಯಿಂದ ಸರ್ಕಾರದವರು ಒಂದು ತತ್ವದ ಮೇಲೆ ಈ ತಿದ್ದುಪಡಿ ಯನ್ನು ತಂದಿದ್ದಾರೆಯೇ ವಿನಹ ಮತ್ತೇನೂ ಇಲ್ಲ ಇದಕ್ಕಾಗಿ ಕ್ರೆಡಿಟ್ ಯಾರೂ ತೆಗೆದುಕೊಳ್ಳ ಬೇಕಾಗಿಲ್ಲ. ಆದ್ದರಿಂದ ಆಡಳಿತಪಕ್ಷ ಅಂತಹ ಒಂದು ತೀರ್ಮಾನಕ್ಕೆ ಬಂದು ಈಗ ಮತ್ತೊಂದು ತಿದ್ದುಪಡಿಯನ್ನು ತಂದಿದ್ದಾರೆ. ನಮಗೆ ಬಹುಮತವೇನೋ ಇದ್ದೇ ಇದೆ. ಮುಖ್ಯವಾಗಿ ರೈತರಿಗೆ ಇದರಿಂದ ಜಾಸ್ತಿ ತೆರಿಗೆ ಹೊರೆ ಆಗಬಾರದೆಂದು ಮಾಡಿದ್ದಾರೆ. ಇದರಲ್ಲಿ ಯಾರ್ಯಾರಿಗೆ ಬಹಳ ಜಾಸ್ತಿಯಾಗಿ ಹೊರೆ ಆಗುತ್ತದೆಯೋ ಎಂಬ ಅಭಿಪ್ರಾಯ ಬಂತು. ಕಾಫಿ ಮತ್ತು ಅಡಿಕೆ ಪ್ಲಾಂಟರು

ಗಳಿಗೆ ಮತ್ತು ಖುಷ್ಕಿ ಜಮೀನು ಪಡೆದಿರುವವರಿಗೆ ಸ್ವಲ್ಪ ಮಟ್ಟಿಗೆ ಶ್ರೀಮಾನ್ ಬಸಪ್ಪನವರು ಮಲ್ಬರಿ ಪ್ಲಾಂಟೇಷನ್ನವರಿಗೆ ಪ್ರೊಟೆಕ್ಷನ್ ಬೇಕೆಂದು ಹೇಳಿದರು. ಸರ್ಕಾರದವರು ಆ ವಿಚಾರ ಮಾಡಬೇಕು. ಇದನ್ನು ಗಾರ್ಡನ್‌ಆಗಿ ಟ್ರೀಟ್ ಮಾಡಿದರೆ ಏನು ತೊಂದರೆ ಬರುತ್ತದೆಂಬುದನ್ನು ನೋಡಬೇಕು. ಅದು ನ್ಯಾಯವೇ ಎಂದು ಹೇಳುತ್ತಾರೆ. ರಕ್ಷಣೆ ಎಲ್ಲೆಲ್ಲಿ ಆಗತ್ಯವಿದೆಯೋ, ಎಲ್ಲೆಲ್ಲಿ ಹಾರ್ಡ್‌ಷಿಪ್ ಇದೆಯೋ ಅದನ್ನು ರಿಮೂವ್ ಮಾಡಲು ಈ ರೀತಿ ಮಾಡಿದ್ದಾರೆ. ಕೆಲವು ಕಡೆಗಳಲ್ಲಿ ಶೇಕಡ 4-5 ರಷ್ಟು ಅನ್ಯಾಯವಾಗುತ್ತದೆ. ಆದರೆ ಎಲ್ಲಕೂ ಒಂದೇರೀತಿ ಮಾಡುದಕ್ಕಾಗುವುದಿಲ್ಲ. ಕಾನೂನು ರೀತ್ಯಾ ಕೆಲವು ಕಷ್ಟಗಳಿವೆ.

ಕಾನೂನಿನ ಚೌಕಟ್ಟಿನಲ್ಲಿ ಏನು ಮಾರ್ಪಾಡನ್ನು ಮಾಡಬೇಕೋ ಅದನ್ನು ಮಾಡಿ ಹೊರೆಯನ್ನು ಕಡಿಮೆ ಮಾಡಿ ಅದನ್ನು ಯಾವರೀತಿ ಮಾಡಬೇಕೆಂಬುದನ್ನು ಯೋಚನೆಮಾಡಿ ಸರ್ಕಾರದವರು ಮಾಡಿದ್ದಾರೆ. ಆದ್ದರಿಂದ ಇದನ್ನು ಈ ಮಾನ್ಯ ಸಭೆಯವರು ಒಪ್ಪಿಕೊಳ್ಳುವುದರಲ್ಲಿ ಯಾರಿಗೂ ತೊಂದರೆಯಾಗುವುದಿಲ್ಲ. ಇದನ್ನೆಲ್ಲಾ ಲೆಕ್ಕಹಾಕಿ ನೋಡಿದ್ದರಲ್ಲಿ ಬಹುಶಃ ಖುಷ್ಕೀ ಕಂದಾಯ ದಿಂದ 80 ಲಕ್ಷ ರೂಪಾಯಿಗಳು ಜಾಸ್ತಿ ಬರುತ್ತದೆ ಎಂದು ಗೊತ್ತಾಯಿತು. ಇಡೀ ಸ್ಟೇಟಿಗೆ 80 ಲಕ್ಷ ರೂಪಾಯಿಗಳ ಖುಷ್ಕೀ ಕಂದಾಯ ಜಾಸ್ತಿಯಾಗುತ್ತದೆ ಎಂದು ಹೇಳಿದರೆ ಅದೇನೂ ಅಷ್ಟು ಹೆಚ್ಚೆಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ವಿರೋಧಪಕ್ಷದವರು ಇದನ್ನು ವಿರೋಧಮಾಡಿ ಇದರಿಂದ ಯಾರಿಗಾದರೂ ತೊಂದರೆಯಾಗುತ್ತದೆ ಎಂದು ಹೇಳುವ ವಾದ ನಮಗೆ ಸರಿಯಾಗಿ ಕಾಣುವುದಿಲ್ಲ. ಈಗ ಈ ಮಸೂದೆಯಲ್ಲಿ ಏನು ಅಡಕವಾಗಿದೆಯೋ ಅದರಂತೆ ಇದನ್ನು ಒಪ್ಪಿಕೊಂಡು ಮುಂದೆ ಇದನ್ನು ಕಾರ್ಯಗತ ಮಾಡುವಾಗ ಏನಾದರೂ ತೊಂದರೆಗಳು ಬಂದರೆ ಅವುಗಳನ್ನು ಪರಿಹಾರ ಮಾಡುವುದಕ್ಕೆ ಅಧಿಕಾರ ಇದೆ. ಮತ್ತು ಮುಂದೆ ಈ ಮಸೂದೆಗೆ ಸರ್ಕಾರದವರು ತಿದ್ದುಪಡಿಯನ್ನು ಮಾಡುವ ಪ್ರಸಂಗ ಬಂದಾಗ ಯಾವ ತೊಂದರೆಗಳು ಇದ್ದರೂ ಕೂಡ ಅವುಗಳನ್ನು ಪರಿಹರಿಸಿಕೊಳ್ಳಬಹುದು. ಸರ್ಕಾರದವರು ಈ ಮಸೂದೆಯನ್ನು ಬಹಳ ಸಹಾನುಭೂತಿಯಿಂದ ತಯಾರು ಮಾಡಿ ಇದನ್ನು ಈ ಸಭೆಯಮುಂದೆ ತಂದಿದ್ದಾರೆ. ಆದ್ದರಿಂದ ಈ ಮಾನ್ಯ ಸಭೆಯವರು ಇದನ್ನು ಒಪ್ಪಿಕೊಳ್ಳಬೇಕು. ಸಣ್ಣ ಸಣ್ಣ ರೈತರಿಗೆ ಪ್ರೋತ್ಸಾಹವನ್ನು ಕೊಡುವುದಕ್ಕೋಸ್ಕರವಾಗಿ 5 ಎಕರೆಗಿಂತ ಕಡಿಮೆ ಇರತಕ್ಕ ಖುಷ್ಕಿ ಹಿಡುವಳಿಗಳಿಗೆ ಕಂದಾಯವನ್ನು ವಿನಾಯಿತಿ ಕೊಡಬೇಕೆಂದು ಮಾಡಿದರೆ ಒಳ್ಳೆಯದು. ಆದ್ದರಿಂದ ಈ ಬಗ್ಗೆ ಸರ್ಕಾರದವರು ಆದಷ್ಟು ಬೇಗ ಯೋಚನೆ ಮಾಡಿ ಸೂಕ್ತ ಕಾಲದಲ್ಲಿ ಆ ಒಂದು ವಿಷಯವನ್ನು ಈ ಸಭೆಯಮುಂದೆ ತರುತ್ತಾರೆಂದು ನಂಬಿ ಈ ಮಸೂದೆಗೆ ನನ್ನ ಒಪ್ಪಿಗೆಯನ್ನು ಕೊಟ್ಟು ನಾನು ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—Before I call upon the next speaker I may inform that it has been agreed that we must finish this Bill by 5 O' clock. It is decided in the Business Advisory Committee and from tomorrow onwards we are taking up the Revenue Resettlement Report.

† ಶ್ರೀ ಸಿದ್ದಯ್ಯ ಕಾಶೀಮಠ್ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ಕಳೆದ 7—8 ವರ್ಷಗಳಿಂದ ಈ ರಾಜ್ಯದಲ್ಲಿ ಅತಿವೃಷ್ಟಿ ಅನಾವೃಷ್ಟಿ ಮತ್ತು ನೆರೆಹಾವಳಿಗಳಿಂದ ರೈತರು ಬಹಳವಾಗಿ ನೊಂದಿದ್ದಾರೆ. ಈ ಸಮಯದಲ್ಲಿ ರೈತರು ಹೆಚ್ಚು ಆಹಾರಧಾನ್ಯವನ್ನು ಬೆಳೆಯುವುದಕ್ಕೆ ಸರ್ಕಾರದವರು ಸಹಾಯ ಮಾಡಬೇಕು. ಅಂಥಾದ್ದರಲ್ಲಿ ರೈತ ಉತ್ಸಾಹದಿಂದ ಹೆಚ್ಚು ಬೆಳೆಯನ್ನು ಬೆಳೆದು ಅದಕ್ಕೆ ಒಂದು ಹೆಚ್ಚಿನದಾದ ಬೆಲೆ ಸಿಕ್ಕುತ್ತಾ ಇರುವುದರಿಂದ ಅವನಿಗೆ ಹೆಚ್ಚಿನದಾದ ಕಂದಾಯವನ್ನು ಏರಿಸಬೇಕೆಂದು ಈಗ ಸರ್ಕಾರದವರು ಏನೊಂದು ಮಸೂದೆಯನ್ನು ಈ ಸಭೆಯಮುಂದೆ ತಂದಿದ್ದಾರೆಯೋ ಆದನ್ನು ನಾನು ಬಹಳ ವಿಷಾದದಿಂದ ವಿರೋಧ ಮಾಡಬೇಕಾಗಿದೆ. ನಾನಾದರೂ ಸರ್ಕಾರದವರನ್ನು ಕಳಕಳಿಯಿಂದ ಕೇಳುತ್ತೇನೆ, ಈ ಕಂದಾಯ ಏರಿಕೆಯ ಬಗ್ಗೆ ರಾಜ್ಯಾದ್ಯಂತ ಸಾರ್ವಜನಿಕರ ಅಭಿಪ್ರಾಯವನ್ನು ಪಡೆದು ಕೊಂಡು ಅದನ್ನು ಈ ಸಭೆಯಮುಂದೆ ಇಟ್ಟಿದ್ದಾರೆಯೇ ಎಂದು. ಈ ಬಗ್ಗೆ ಯಾರಾದರೂ ಸರ್ಕಾರದವರಿಗೆ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಉತ್ತರವನ್ನು ಕೊಡತಕ್ಕ ಪರಿಸ್ಥಿತಿಯಲ್ಲಿ ಸರ್ಕಾರದವರಿಗೆ ಇದ್ದಾರೆಯೇ ? ರಾಜ್ಯದ ಮೂಲೆ ಮೂಲೆಗಳಿಂದ ಈ ಕಂದಾಯ ಏರಿಕೆಯ ಬಗ್ಗೆ ಜನಗಳು ಸಾಕಷ್ಟು ವಿರೋಧವನ್ನು ಮಾಡಿರುವುದು ಸರ್ಕಾರಕ್ಕೆ ತಿಳಿದ ವಿಚಾರವೇ ಆಗಿದೆ. ನಿನ್ನೆಯ ದಿವಸ ಹಿಂದೆ ಕಂದಾಯ ಮಂತ್ರಿಗಳಾಗಿದ್ದ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಮಾತನಾಡುತ್ತಾ ಕಾಂಗ್ರೆಸ್ ಹೈಕಮ್ಯಾಂಡ್‌ನಿಂದ ಮತ್ತು ಪ್ಲಾನಿಂಗ್ ಕಮಿಷನ್ನಿನವರಿಂದ ಒತ್ತಾಯ ಬಂದದ್ದರಿಂದ ಈ ಲ್ಯಾಂಡ್ ರಿಫಾರಮ್ಸ್ ಮಸೂದೆಯನ್ನು ಈ ಸಭೆಯ ಮುಂದೆ ಇಡ ಬೇಕಾಯಿತು, ರೈತರ ಕಷ್ಟಸುಖಗಳೇನೆಂಬುದು ನನಗೂ ಗೊತ್ತಿತ್ತು ಎಂದು ಹೇಳಿದರು.

Sri KADIDAL MANJAPPA.—I did not say so. I said that as desired by the Congress Party and as suggested by the Planning Commission and as recommended by the Jatti committee the Bill was drafted and introduced.

ಶ್ರೀ ಅಂದಾನಯ್ಯ (ಕುಣಿಗಲ್).—ಸ್ವಾಮಿ, ನಾನೊಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಈ ಸಭೆಯ ಮಾನ್ಯ ಸದಸ್ಯರೊಬ್ಬರು ಆಫಿಷಿಯಲ್ ಗ್ಯಾಲರಿಯಲ್ಲಿ ಕುಳಿತುಕೊಂಡಿದ್ದಾರೆ. ಅವರು ಆರೀತಿ ಕುಳಿತುಕೊಳ್ಳುವುದಕ್ಕೆ ಅವಕಾಶವಿದೆಯೇ ?

Mr. DEPUTY SPEAKER.—No member of this House should be in any gallery. (The Hon'ble member Sri Kolkebail returned to his seat from the Officials' gallery).

ಶ್ರೀ ಸಿದ್ದಯ್ಯ ಕಾಶೀಮಠ್.—ನಾನಾದರೂ ಹೇಳಿದ್ದು ಅದೇ ವಿಷಯ. ಇವೊತ್ತಿನ ದಿವಸ ಸಾಮಾನ್ಯ ರೈತನಿಗೆ ಬಹು ಕಷ್ಟ ಪರಿಸ್ಥಿತಿ ಉಂಟಾಗಿದೆ. ಈ ವಿಷಯವನ್ನು ಅನೇಕ ಮಾನ್ಯ ಸದಸ್ಯರು ಈಗಾಗಲೇ ಈ ಸಭೆಯಲ್ಲಿ ನಿವೇದನೆ ಮಾಡಿಕೊಂಡಿದ್ದಾರೆ. ಈಗ ಈ ಮಸೂದೆಯಲ್ಲಿ ಹೇಳಿರುವ ಹಾಗೆ ಕಂದಾಯದ ಸ್ಟ್ಯಾಂಡರ್ಡ್ ರೇಟನ್ನು ಗೊತ್ತು ಮಾಡುವುದರಲ್ಲಿ ಮೊದಲು $6\frac{1}{4}$ ಪರ್ಸೆಂಟ್ ಕಂದಾಯವನ್ನು ಜಾಸ್ತಿ ಮಾಡಬೇಕೆಂದು ನಿಗದಿ ಮಾಡಿದ್ದರು ; ಈಗ ಅದನ್ನು 4 ಪರ್ಸೆಂಟ್ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ಆದರೂ ಸಹ ರೈತ ಹೆಚ್ಚಿನ ಕಂದಾಯ ವನ್ನು ಕೊಡಬೇಕಾಗುತ್ತದೆ. ಈಗಾಗಲೇ ರೈತ ಅನೇಕ ವಿಧವಾದ ತೆರಿಗೆಗಳನ್ನು ಕೊಡುತ್ತಿದ್ದಾನೆ. ಅದಕ್ಕೋಸ್ಕರವಾಗಿ ನಾನಾದರೂ ಕೂಡ ಹೇಳುವುದೇನೆಂದರೆ, ಸಾಮಾನ್ಯವಾದ ಸಣ್ಣ ಸಣ್ಣ ಹಿಡುವಳಿದಾರರಿಗೆ ಕಂದಾಯದ ರಿಯಾಯಿತಿಯನ್ನು ತೋರಿಸಿ ಈಗ ಯಾರು ಯಾರು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಕೊಡುತ್ತಿದ್ದಾರೆಯೋ ಅವರಿಗೆ ಇನ್ನೂ ಹೆಚ್ಚಿನ ತೆರಿಗೆಯನ್ನು ವಿಧಿಸಬಹುದು ಎಂದು ನಾನು ಹೇಳುತ್ತೇನೆ. ಇನ್‌ಕಂಟ್ಯಾಕ್ಸ್ ಮತ್ತು ಸೇಲ್ಸ್ ಟ್ಯಾಕ್ಸ್ ಕೊಡುವವರಿಗೆ ಸರ್ಕಾರದವರು ಕೆಲವೊಂದು ರಿಯಾಯಿತಿಯನ್ನು ತೋರಿಸಿದ್ದಾರೆ. ಹೀಗಿರುವಾಗ ದೇಶದ ಬೆನ್ನುಮೂಳೆಯಾಗಿರಕ್ಕ ರೈತನಿಗೆ ರಿಯಾಯಿತಿ ತೋರಿಸಿದರೆ ಅದರಿಂದ ತಪ್ಪೇನೂ ಆಗುವುದಿಲ್ಲ.

ಆಮೇಲೆ ಮಾನ್ಯ ರೆವಿನ್ಯೂ ಮಂತ್ರಿಗಳು ಮಾತನಾಡುತ್ತಾ, ಕಾಫೀ ಪ್ಲಾಂಟೇರ್ಷಗಳಿಗೆ ಒಂದು ಪರ್ಸೆಂಟ್ ಕಂದಾಯವನ್ನು ಜಾಸ್ತಿ ಮಾಡಿದರೂ ಕೂಡ ಅದು ಅವರಿಗೆ 600 ಪರ್ಸೆಂಟ್ ಕಂದಾಯ ಜಾಸ್ತಿ ಆಗುತ್ತದೆ ಎಂದು ಹೇಳಿದರು. ರೈತರು ಬೆಳೆಯುತಕ್ಕ ಮಾಲಿಗೆ ಒಂದು ವರ್ಷ ಹೆಚ್ಚಿನ ಬೆಲೆ ಸಿಗುತ್ತದೆ ಒಂದು ವರ್ಷ ಹೆಚ್ಚಿನ ಬೆಲೆ ಸಿಕ್ಕುವುದಿಲ್ಲ, ಆದರೆ ಕಾಫೀ ಮುಂತಾದ ಪ್ಲಾಂಟೇರ್ಷ ಬೆಳೆಗಳಿಗೆ ಯಾವಾಗಲೂ ಹೆಚ್ಚಿನ ಬೆಲೆ ಇದ್ದೇ ಇರುತ್ತದೆ. ಆದ್ದರಿಂದ ಪ್ಲಾಂಟೇರ್ಷ ಗಳಿಗೆ ಹೆಚ್ಚಿನ ಕಂದಾಯವನ್ನು ಹಾಕಿದರೂ ಕೂಡ ಅವರಿಗೇನೂ ತೊಂದರೆಯಾಗುವುದಿಲ್ಲ.

ಇನ್ನು ಕಡೆಯದಾಗಿ, ರಾಜ್ಯದ ಒಂದು ಭಾಗದಲ್ಲಿ ಒಂದು ರೀತಿಯ ಕಂದಾಯವನ್ನು ಹಾಕುವುದು ಇನ್ನೊಂದು ಭಾಗದಲ್ಲಿ ಇನ್ನೊಂದು ರೀತಿಯ ಕಂದಾಯವನ್ನು ಹಾಕುವುದು ಸರಿಯಲ್ಲ. ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಸಹ ಅದು ಡ್ರೈಲ್ಯಾಂಡ್ ಆಗಿರಲಿ, ವೆಟ್‌ಲ್ಯಾಂಡ್ ಆಗಿರಲಿ ಅಥವಾ ಗಾರ್ಡನ್ ಲ್ಯಾಂಡ್ ಆಗಿರಲಿ ಪ್ರತಿಯೊಂದಕ್ಕೂ ಪ್ರತಿಯೊಂದು ಕಡೆಯೂ ಸಹ ಏಕ ರೂಪವಾದ ಕಂದಾಯವನ್ನು ವಿಧಿಸಬೇಕೆಂದು ಹೇಳಿ ಈಗ ಈ ಸಭೆಯ ಮುಂದೆ ತಂದಿರತಕ್ಕ ತಿದ್ದುಪಡಿ ಮಸೂದೆಯನ್ನು ನಾನು ವಿರೋಧಿಸುತ್ತೇನೆ.

†ಶ್ರೀ ಆರ್. ಎಲ್. ಲಕ್ಷ್ಮೀಪತಿ (ಗೌರೀಬಿದನೂರು).—ಮಾನ್ಯ ಸಭಾಪತಿಗಳೇ, ಈ ಹಿಂದೆ ಲ್ಯಾಂಡ್ ರೆವಿನ್ಯೂ ಸೆಟ್ಲ್‌ಮೆಂಟ್ ವರದಿಗಳಿಗೆ ಸಂಬಂಧಪಟ್ಟಂತೆ ಒಂದು ನಿರ್ಣಯವನ್ನು ಸರ್ಕಾರ ದವರು ಈ ಸಭೆಯ ಮುಂದಿಟ್ಟು ಅದರ ಬಗ್ಗೆ ಚರ್ಚೆಮಾಡಿ ಆಮೇಲೆ ಅದನ್ನು ಹಿಂದಕ್ಕೆ ತೆಗೆದು ಕೊಂಡಿದ್ದರು. ಆದ್ದರಿಂದ ನಾನಾದರೂ ತಿಳಿದುಕೊಂಡಿದ್ದೆ, ಸರ್ಕಾರದವರಿಗೆ, ಕಾಂಗ್ರೆಸ್ ಪಕ್ಷದವರಿಗೆ ಈಗಲಾದರೂ ಜ್ಞಾನೋದಯವಾಯಿತು, ಅವರು ರೈತರ ಸ್ಥಿತಿಗತಿಗಳನ್ನು ಅರಿತು ಕೊಂಡಿದ್ದಾರೆ, ಅವರಿಗೆ ತಿಳುವಳಿಕೆ ಬಂದಿದೆ ಎಂದು. ಆದರೆ ಮತ್ತೆ ಈಗ ಈ ಸಭೆಯ ಮುಂದೆ ಮೈಸೂರು ರಾಜ್ಯದ ಭೂಕಂದಾಯಕ್ಕೆ ಸಂಬಂಧಿಸಿದ ತಿದ್ದುಪಡಿ ವಿಧೇಯಕವನ್ನು ತಂದಿರು ವುದನ್ನು ನೋಡಿದರೆ ಹೋಯಿತಪ್ಪಾ ದೆವ್ವಾ ಎಂದರೆ ಇಲ್ಲ ಪುನಃ ಬಂದೇ ಗವಾಕ್ಷಿಯಲ್ಲಿ ಎಂದು ಹೇಳುವ ಹಾಗೆ ಪುನಃ ಈ ಸಭೆಯ ಮುಂದೆ ಈ ಭೂಕಂದಾಯಕ್ಕೆ ಸಂಬಂಧಿಸಿದ ತಿದ್ದುಪಡಿ ವಿಧೇಯಕವನ್ನು ಸರ್ಕಾರದವರು ತಂದಿದ್ದಾರೆ. ನಾನು ಬಹಳ ವಿಷಾದದಿಂದ ಈ ವಿಧೇಯಕ ವನ್ನು ವಿರೋಧಿಸಬೇಕಾಗಿದೆ. ಅಕ್ಕಿ ಮತ್ತು ರಾಗಿಯ ಬೆಲೆ ಜಾಸ್ತಿಯಾಗಿದೆ, ಮತ್ತು ಹಾಗೆಯೇ

ಇನ್ನೂ ಅನೇಕ ಅಹಾರ ಧಾನ್ಯಗಳ ಬೆಲೆಗಳು ಜಾಸ್ತಿಯಾಗಿವೆ, ಅದಕ್ಕೋಸ್ಕರ ನಾವು ಕಂದಾಯವನ್ನು ಏರಿಸಿದ್ದೇವೆ, ಈ ಕಂದಾಯವನ್ನು ಕೊಡುವುದರಲ್ಲಿ ಏನೂ ತಪ್ಪಿಲ್ಲ, ಈಗ ಏರಿಸಿರತಕ್ಕ ಕಂದಾಯವನ್ನು ಕೊಡುವುದಕ್ಕೆ ಪ್ರತಿಯೊಬ್ಬರಿಗೂ ಶಕ್ತಿ ಬಂದಿದೆ ಎಂದು ಹೇಳಿದ್ದಾರೆ. ಆದರೆ ನಾನು ಹೇಳುತ್ತೇನೆ, ರೈತನ ಜೀವನಮಟ್ಟ ಹೇಗಿದೆ, ಅವನ ಅರ್ಥಿಕ ಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಸರ್ಕಾರದವರು ಯೋಚನೆ ಮಾಡಿಲ್ಲ ಎಂದು ನನಗನಿಸುತ್ತದೆ. ರೈತನ ಜೀವನಮಟ್ಟ ಹೆಚ್ಚಾಗಿದೆ ಎಂದು ತಾವು ಹೇಳಿದಿರಿ, ಅದಕ್ಕೆ ತಮಗೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಇವೊತ್ತಿನ ದಿವಸ ಯಾವ ತಾಲ್ಲೂಕಿಗೇ ತಾವು ಹೋಗಿ ನೋಡಿದರೂ ಕೂಡ ರೈತರು ತಮ್ಮ ಜಮೀನನ್ನು ಸೊಸೈಟಿಗಳಿಗಾಗಲೀ ಅಥವಾ ಸರ್ಕಾರಕ್ಕಾಗಲೀ ಈಡುಮಾಡಿದ್ದಾರ. ನಮ್ಮ ತಾಲ್ಲೂಕಿನಲ್ಲಂತೂ 100ಕ್ಕೆ 80 ಜನ 90 ಜನ ರೈತರು ತಮ್ಮ ಜಮೀನುಗಳನ್ನು ಸೊಸೈಟಿಗಳಿಗೆ ಆಧಾರ ಮಾಡಿದ್ದಾರೆ. ನಮ್ಮ ಇಡೀ ಕೋಲಾರ ಜಿಲ್ಲೆಯಲ್ಲಿ ಉತ್ಕೃಷ್ಟವಾದ ಮತ್ತು ಶ್ರೇಷ್ಠವಾದ, ವ್ಯವಸಾಯಕ್ಕೆ ಯೋಗ್ಯವಾದ ಜಮೀನು ಇರುವುದು ಗೌರೀಬಿದನೂರಿನಲ್ಲಿ. ಇವೊತ್ತಿನ ದಿವಸ ಆ ಪ್ರದೇಶದ ಜನಗಳೇ ಕಷ್ಟಪರಿಸ್ಥಿತಿಯಲ್ಲಿರುವಾಗ ಮಿಕ್ಕವರು ಯಾವ ರೀತಿ ಇದ್ದಾರೆ ಎಂಬುದನ್ನು ಊಹೆ ಮಾಡುವುದಕ್ಕೆ ನಾನು ಮಾನ್ಯಮಂತ್ರಿಗಳಿಗೇ ಬಿಡುತ್ತೇನೆ. ಇಂಥಾ ಒಂದು ಕಷ್ಟ ಪರಿಸ್ಥಿತಿಯಲ್ಲಿರತಕ್ಕ ರೈತ ವ್ಯವಸಾಯವನ್ನು ಮಾಡಿ ಅದರಿಂದ ಬರತಕ್ಕ ಉತ್ಪಾದನೆಯಿಂದಲೇ ತನ್ನ ಸಂಸಾರದ ಎಲ್ಲಾ ಖರ್ಚುಗಳನ್ನೂ ನಿರ್ವಹಿಸಬೇಕಾಗಿದೆ. ರೈತರು ಈಗಿರುವಂಥಾ ಸ್ಥಿತಿಯಲ್ಲಿ ತಮ್ಮ ಮಕ್ಕಳನ್ನು ಸರಿಯಾಗಿ ಸಾಕುವುದಕ್ಕಾಗಲೀ ಮತ್ತು ಅವರಿಗೆ ವಿದ್ಯಾಭ್ಯಾಸ ಮಾಡಿಸುವುದಕ್ಕಾಗಲೀ ಸಾಧ್ಯವಿಲ್ಲ. ಹಳ್ಳಿಗಾಡುಗಳಲ್ಲಿ ಡಾಕ್ಟರು ಹೋಗಿ ಜನಗಳನ್ನು ಪರೀಕ್ಷೆ ಮಾಡಿದರೆ ಗೊತ್ತಾಗುತ್ತದೆ, 100ಕ್ಕೆ 20, 30, 40 ಜನಗಳು ಮಾಲ್ ನ್ಯೂಟ್ರಿಷನ್‌ನಿಂದ ಸಫರ್ ಮಾಡುತ್ತಿದ್ದಾರೆ. ಹಳ್ಳಿಗಾಡುಗಳಲ್ಲಿ ರೈತ ಬಹಳ ದುಸ್ಥಿತಿಯಲ್ಲಿದ್ದಾನೆ. ಈಗ ಇರುವಂತಹ ಕಂದಾಯವನ್ನೇ ಕೊಡುವುದಕ್ಕೆ ಅವನಿಗೆ ಶಕ್ತಿಯಿಲ್ಲ. ರೈತರು ಕೊಳ್ಳತಕ್ಕ ಸಾಮಾನುಗಳ ಬೆಲೆಗಳೂ ಕೂಡ ವಿಪರೀತವಾಗಿ ಏರಿಹೋಗಿದೆ. ವ್ಯವಸಾಯಕ್ಕೆ ಬೇಕಾದ ಉಪಕರಣಗಳು, ಗೊಬ್ಬರ, ಹಿಂಡಿ ಇತ್ಯಾದಿ ಸಾಮಾನುಗಳ ಬೆಲೆಗಳು ಒಂದಕ್ಕೆ 10ರಷ್ಟು 15ರಷ್ಟು ಏರಿವೆ. ಸರ್ಕಾರದಲ್ಲಿ ರೈತನಿಗೆ ಸಣ್ಣಪುಟ್ಟ ಕೆಲಸಗಳಲ್ಲಿಯೂ ಕೂಡ ಸರಿಯಾದಂತಹ ನ್ಯಾಯ ದೊರಕುವುದಿಲ್ಲ.

4.00 P.M.

ಪ್ರತಿಯೊಂದು ಕಡೆಯೂ ಅವನನ್ನು ಕುಯ್ಯುತ್ತಲೇ ಇರುತ್ತೀರಿ. ತನ್ನ ಕೆಲಸ ಮಾಡಿಕೊಳ್ಳಬೇಕೆಂದರೆ, ನ್ಯಾಯವಾದ ಬೇಡಿಕೆಗಳಿಗೆ ಸರಕಾರದಿಂದ ಸೌಲಭ್ಯ ಪಡೆಯಬೇಕೆಂದರೆ, ಲಂಚ ಕೊಡದಿದ್ದ ಪಕ್ಷದಲ್ಲಿ ಹಾಗೂ ಅನೀತಿಗೆ ಬೀಳದಿದ್ದ ಪಕ್ಷದಲ್ಲಿ ಕೆಲಸ ಆಗುವುದೇ ಇಲ್ಲ. ಹತ್ತು ರೂಪಾಯಿ ಸಾಲ ತೆಗೆದುಕೊಂಡರೆ, 4 ರೂಪಾಯಿ ಆ ತರಹ ಖರ್ಚಾಗುತ್ತದೆ. ಈರೀತಿ ಇರುವಾಗ, ಕಂದಾಯ ಜಾಸ್ತಿ ಮಾಡಿದರೆ ರೈತನಿಗೆ ಕೊಡುವ ಶಕ್ತಿ ಇಲ್ಲ. ಈ ಕಂದಾಯವನ್ನು ಯಾರೂ ಒಪ್ಪುವುದಕ್ಕಾಗುವುದಿಲ್ಲ. ಪಂಚಾಯಿತಿ ಆಕ್ಟ್ ಇಂಟ್ರಡ್ಯೂಸ್ ಮಾಡಿದ್ದೀರಿ; ಅದರ ಪ್ರಕಾರ, ರೂಪಾಯಿಗೆ 30 ಪೈಸೆ ಸೆಸ್ ಬೀಳುತ್ತದೆ; ಈಗಾಗಲೆ 12 ಪೈಸೆ ವಸೂಲು ಮಾಡುತ್ತಾ ಇದ್ದಾರೆ; ಇದರ ಮೇಲೆ 9 ಪೈಸೆ ಹೆಲ್ತ್ ಸೆಸ್ ಹಾಕುತ್ತೀರಿ; ಎಜುಕೇಷನ್ ಸೆಸ್ 19 ಪೈಸೆ ಇದೆ; ಲೈಬ್ರರಿ ಆಕ್ಟ್ ಪಾಸ್ ಮಾಡಿಕೊಂಡಿದ್ದೀರಿ; ಅದನ್ನ ಜಾರಿಗೆ ತಂದಾಗ 6 ಪೈಸೆ ಸೆಸ್ ಬೀಳುತ್ತದೆ. ಇದೆಲ್ಲವನ್ನೂ ಲೆಕ್ಕಹಾಕಿದರೆ, ಒಬ್ಬ ರೈತನಿಗೆ ಒಂದು ರೂಪಾಯಿಗೆ 80-90 ಪೈಸೆ ಬೀಳುತ್ತದೆ. ರೈತನಿಗೆ ಕೊಡುವುದಕ್ಕಾಗುವುದಿಲ್ಲ. ಇವತ್ತು ಒಂದು ಪ್ರಶ್ನೆಗೆ ಉತ್ತರ ಕೊಡುವಾಗ, ಆಹಾರದ ನೀತಿಯನ್ನು ಕೇಂದ್ರ ಸರಕಾರ ಬದಲಾಯಿಸಬೇಕು, ಅಲ್ಲಿಯವರೆಗೆ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಶ್ರೀ ಕೃಷ್ಣಪ್ಪನವರು ಹೇಳಿದರು. ಶ್ರೀ ಕೃಷ್ಣಪ್ಪನವರು ರೈತರ ಕುಟುಂಬಕ್ಕೆ ಸೇರಿದವರು, ಮತ್ತು ಹಳ್ಳಿಯಲ್ಲಿ ಬೆಳೆದವರು. ಈ ಕಾನೂನು ಅವರಿಗೆ ಸಂಬಂಧಪಟ್ಟದ್ದು. ಅವರ ಬಂಧುಗಳು ಅವರ ತಾಲ್ಲೂಕಿನಲ್ಲಿದ್ದಾರೆ, ಅವರು ಯಾವ ರೀತಿ ಅನುಕೂಲವಾಗಿದ್ದಾರೆಂದು ಯೋಚನೆ ಮಾಡಲಿ. ರೈತರು ತಮ್ಮ ಮಕ್ಕಳ ವಿದ್ಯಾಭ್ಯಾಸವನ್ನು ಮಾಡಿಸುವುದಕ್ಕೆ ಸಾಮರ್ಥ್ಯವಿಲ್ಲದೆ, ಅವರನ್ನು ಹಳ್ಳಿಯೊಳಗೇ ಇಟ್ಟುಕೊಂಡಿದ್ದಾರೆ. ಲಿಟರೆಸಿ ಜಾಸ್ತಿ ಇದೆ ಎಂದು ಹೇಳುತ್ತಾರೆ. ಸಿಟಿಗೆ ಬಂದವರು, ಗವರ್ನ್‌ಮೆಂಟ್ ಆಫೀಸಿನಲ್ಲಿ ಕೆಲಸದಲ್ಲಿರುವವರು, ಅಥವಾ ವ್ಯವಸಾಯವನ್ನು ಬಿಟ್ಟು ಇನ್ನು ಯಾವುದಾದರೂ ಉಪಕಸಬನ್ನು ತೆಗೆದುಕೊಂಡವರು ಅವರ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುತ್ತಿರಬಹುದು. ರೈತ ಅವನ ಮಕ್ಕಳನ್ನು ಪ್ರೈಮರಿ ಸ್ಕೂಲಿಗೆ ಕಳುಹಿಸುತ್ತಿರಬಹುದು; ಅವನ ಮಕ್ಕಳು ಕಾಲೇಜು ಮುಟ್ಟುವ ಹಾಗೇ ಇಲ್ಲ; ಅವನ ಸ್ಥಿತಿ ಚೆನ್ನಾಗಿಲ್ಲ. ಅವನ ಮಕ್ಕಳು ಮುಂದಕ್ಕೆ ಬರುವುದಕ್ಕೆ ಯಾವ ರೀತಿ ಸೌಲಭ್ಯವನ್ನೂ ಕೊಟ್ಟಿಲ್ಲ.

(ಶ್ರೀ ಆರ್. ಎನ್. ಲಕ್ಷ್ಮೀಪತಿ)

ಈ ಲ್ಯಾಂಡ್ ಸೆಟಲ್‌ಮೆಂಟ್ ವರದಿಯನ್ನು ಓದಿದರೆ, ನಮ್ಮ ತಾಲ್ಲೂಕಿನ ಬಗ್ಗೆ ಬಹಳ ವಿಚಿತ್ರವಾಗಿದೆ. ಗೌರಿಬಿದನೂರು ತಾಲ್ಲೂಕಿನಲ್ಲಿ ಒಂದು ಎಕರೆಯಲ್ಲಿ ಮೆಣಸಿನಕಾಯಿನಿಂದ 1,250 ರೂಪಾಯಿ ಲಾಭ ಬರುತ್ತದೆಂದು ಹೇಳುತ್ತಾರೆ. ನಾನೇ 55 ಎಕರೆಯಲ್ಲಿ ಮೆಣಸಿನಕಾಯಿ ಬೆಳೆಯುತ್ತೇನೆ. ನಾನು ಸರಕಾರ ಹೇಳಿದ ಡೋಸೇಜಿನಲ್ಲಿ ಗೊಬ್ಬರ, ಸೂಪರ್ ಪಾಸ್‌ಫೇಟ್, ಉಪ್ಪು ಎಲ್ಲಾ ಹಾಕಿ, ಅವರು ಹೇಳಿದ ಹಾಗೆ ಬೆಳೆಯುತ್ತೇನೆ. ನನಗೆ ಎಕರೆಗೆ ಒಂದು ಸಾವಿರ ರೂಪಾಯಿನಂತೆ ಕೊಡಲಿ, ಬಹಳ ಸಂತೋಷವಾಗಿ ಒಪ್ಪಿಕೊಳ್ಳುತ್ತೇನೆ. ಈ ರೀತಿ ಸರ್ವೆ ಸೆಟಲ್‌ಮೆಂಟು ವರದಿಯನ್ನು ಅಧಿಕಾರಿಗಳು ಬಹಳ ಆಶ್ಚರ್ಯಕರವಾಗಿ ತಯಾರಿಸಿದ್ದಾರೆ. ಎಲ್ಲೋ ಆ ಅಧಿಕಾರಿಗಳಿಗೆ ಜನ ಮೆಣಸಿನಕಾಯಿ, ಬೆಲ್ಲ ಕೊಟ್ಟಿಲ್ಲ, ಅದರಿಂದ ಸಿಟ್ಟಿನ ಮೇಲೆ ವರದಿ ಬರೆದಿರಬೇಕು. ವ್ಯವಸಾಯಗಾರರ ಮೇಲೆ ಈ ಹೆಚ್ಚಿನ ಕಂದಾಯವನ್ನು ಹೊರಿಸುವುದು ಸರಿಯಲ್ಲ. ರಾಜಕೀಯ ಬಂಧುಗಳು, ದೊಡ್ಡ ದೊಡ್ಡ ಅಧಿಕಾರಿಗಳ ಮಕ್ಕಳೂ, ಹೆಚ್ಚು ಅನುಕೂಲ ವಿರುವವರೂ, ಎಲ್ಲಾ ಹಳ್ಳಿಯಿಂದ ಪಟ್ಟಣಕ್ಕೆ ವಲಸೆ ಬರುತ್ತಾ ಇದ್ದಾರೆ; ವ್ಯವಸಾಯ ಬಿಡುತ್ತಾ ಇದ್ದಾರೆ. ಇಂಥಾದ್ದರಲ್ಲಿ ವ್ಯವಸಾಯ ವೃತ್ತಿ ಲಾಭದಾಯಕ ವೃತ್ತಿ ಎಂದು ತಿಳಿದುಕೊಂಡಿದ್ದಾರೆ. ಹಳ್ಳಿಯಲ್ಲಿ ಉನ್ನತಸ್ಥಿತಿಗೆ ಬರುವ ಅವಕಾಶವಿದ್ದರೆ, ಏಕೆ ಅವರು ಹಳ್ಳಿಯಲ್ಲಿ ನೆಲ ಸುತ್ತಿಲ್ಲ? ಹೀಗಾದರೆ, ಯಾವ ವಿದ್ಯಾವಂತನೂ, ಸಂಪ್ರದಾಯಸ್ಥನೂ ಹಳ್ಳಿಯಲ್ಲಿ ವಾಸಮಾಡುವುದಕ್ಕೆ ಆಗುವುದಿಲ್ಲ. ವ್ಯವಸಾಯದಿಂದ ಬರತಕ್ಕ ಉತ್ಪತ್ತಿ ಬಹಳ ಕಡಿಮೆ. ಒಬ್ಬ ಕೂಲಿಗೆ ಒಂದು ದಿನಕ್ಕೆ ಎರಡು ರೂಪಾಯಿ ಕೊಡಬೇಕು. ಹಳ್ಳಿಯಲ್ಲಿ ಎಷ್ಟು ಪರ್ಸೆಂಟ್ ರೈತರು ಜಮೀನಿನಿಂದ ದುಡ್ಡು ಮಾಡಿಕೊಂಡಿದ್ದಾರೆ, ನೋಡಿ. 100ಕ್ಕೆ 80 ಭಾಗದ ಜನ ಬರೀ ಜಮೀನು ಇಟ್ಟುಕೊಂಡಿದ್ದಾರೆ; ಅದರಲ್ಲಿ 40 ಭಾಗ ಜನ 5 ಎಕರೆಗಿಂತ ಕಡಿಮೆ ಜಮೀನು ಇರುವವರಿದ್ದಾರೆ. ಶ್ರೀಮಾನ್ ಗಾಂಜಿ ವೀರಪ್ಪನವರು ಹೇಳಿದ ಹಾಗೆ 5 ಎಕರೆವರೆಗೆ ಖುಷ್ಕಿ ಜಮೀನಿಗೆ ಕಂದಾಯ ವಿನಾಯಿತಿ ಕೊಟ್ಟರೆ ಅಥವಾ ಕಡಿಮೆ ಮಾಡಿದರೆ, ರೈತರು ಬದುಕುತ್ತಾರೆ; ಇಲ್ಲದೆ ಈ ರೀತಿ ಮಾಡಿದ ಪಕ್ಷದಲ್ಲಿ ರೈತ ಉದ್ಧಾರವಾಗುವುದಿಲ್ಲ. ರೈತ ಉದ್ಧಾರವಾಗಿ, ಆಹಾರ ಬೆಳೆಯದಿದ್ದ ಪಕ್ಷದಲ್ಲಿ, ದೇಶ ಉದ್ಧಾರವಾಗುವುದಿಲ್ಲ. ಆಹಾರ ಸಮಸ್ಯೆಯನ್ನು ಕಂಟ್ರೋಲ್ ಮಾಡಿ, ಭಾಷಣಮಾಡಿ, ಕೋಟ್ಯಾಂತರ ರೂಪಾಯಿ ಖರ್ಚುಮಾಡಿ ಬಗೆ ಹರಿಸುತ್ತೇವೆಂದರೆ ಸಾಧ್ಯವಿಲ್ಲ. ರೈತ ಮನಸ್ಸುಮಾಡಿ, ಉಳುಮೆಯಲ್ಲಿ ಆಸಕ್ತಿ ವಹಿಸದಿದ್ದರೆ ಆಹಾರ ಉತ್ಪತ್ತಿ ಆಗುವುದಿಲ್ಲ. ರೈತ ಆಹಾರೋತ್ಪತ್ತಿಗೆ ಏಕೆ ಸಹಕಾರ ಕೊಡಬೇಕು? ಏಕೆಂದರೆ ಸರಕಾರದ ನೀತಿ ಅವನ ಪ್ರಗತಿಗೆ ಅಡಚಣೆಯಾಗಿದೆ. ಅದ್ದರಿಂದ, ಸ್ವಾಭಾವಿಕವಾಗಿ ಅವನಿಗೆ ಸರ್ಕಾರದಮೇಲೆ ಸಿಟ್ಟು ಇರುತ್ತದೆ. ನಾನು ಆಹಾರದ ಬೆಳೆಗಳನ್ನು ಬೆಳೆದು ಬಡವನಾಗಿಯೇ ಇರಬೇಕು. ಇದಕ್ಕೆ ಬದಲು ಕಮರ್ಶಿಯಲ್ ಕ್ರಾಪು ಬೆಳೆದು ಜಾಸ್ತಿ ಸಂಪಾದನೆ ಮಾಡುತ್ತೇನೆ ಎಂದು ರೈತ ಹೇಳುತ್ತಾನೆ. ಅವನು ದುಡ್ಡು ಹೆಚ್ಚಾಗಿ ಬರುವ ಮಾರ್ಗ ಹುಡುಕುತ್ತಾನೆ. ಅವನಿಗೆ ಸರಕಾರದ ಮೇಲೆ ಒಂದು ವೆಂಜೆನ್ಸ್ ಇರುತ್ತದೆ. ಅದ್ದರಿಂದ ಅವನು ನಾನ್-ಕೊಅಪರೇಟ್ ಮಾಡುತ್ತಾನೆ. ಅದ್ದರಿಂದ ಖಂಡಿತವಾಗಿ ರೈತನಿಗೆ ಸಾಧ್ಯವಾದಷ್ಟೂ ಕೂಡ ಜಾಸ್ತಿ ಅನುಕೂಲ ಮಾಡಿಕೊಡಿ. ಇಲ್ಲದೆಹೋದರೆ, ಅವನು ನಿಮಗೆ ಯಾವರೀತಿ ಸಹಕಾರವನ್ನೂ ಕೊಡುವುದಿಲ್ಲ. ಬೇರೆ ದೇಶಗಳಲ್ಲಿ, ಅದರಲ್ಲಿಯೂ ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ, ಜಮೀನಿನಮೇಲೆ ಕಂದಾಯವಿಲ್ಲ. ಯಾವ ಒಂದು ದೇಶವನ್ನು ನೋಡಿದರೂ, ಭೂಮಿಯಮೇಲೆ ಕಂದಾಯ ಹಾಕಿಲ್ಲ, ಕೇಳಿ ನೋಡಿ. ಪಂಚಾಯಿತಿಯವರು ಲೋಕಲ್ ಡೆವಲಪ್‌ಮೆಂಟ್ ಸಂಬಂಧವಾಗಿ ಸೆಸ್ ಹಾಕಿಕೊಂಡು ವಸೂಲು ಮಾಡುತ್ತಾರೆಯೆ ವಿನಾ, ಈ ತರಹ ಕಂದಾಯ ತೆರಿಗೆಯನ್ನು ಹಾಕುವುದಿಲ್ಲ. ಇನ್ನೂ ಅಗ್ರಿಕಲ್ಚರಲ್ ಟ್ಯಾಕ್ಸ್ ಹಾಕುತ್ತಾರೆ. ಆಸ್ಟ್ರೇಲಿಯಾ ದೇಶದಲ್ಲಿ ಅಗ್ರಿಕಲ್ಚರಲ್ ಟ್ಯಾಕ್ಸ್ ಇದೆ. ಇಲ್ಲಿಯೂಕೂಡ ಅಗ್ರಿಕಲ್ಚರಲ್ ಟ್ಯಾಕ್ಸ್ ಹಾಕಿ, ಯಾವ ರೀತಿ ಭೂಕಂದಾಯವೂ ಇಲ್ಲದಂತೆ ಮಾಡಿ, ರೈತರಿಗೆ ಅನುಕೂಲ ಮಾಡಿಕೊಡಬೇಕು. ಆ ಹೊರ ದೇಶಗಳಲ್ಲಿ ಯಾವುದೇ ಒಬ್ಬ ರೈತನಿಗೆ ಸರ್ಕಾರವಾಗಲಿ, ಯಾವುದೇ ಸಂಸ್ಥೆಯಾಗಲಿ ಸಾಲ ಕೊಟ್ಟರೆ, 20 ವರ್ಷಕ್ಕೆ ಕಡಿಮೆ ಇಲ್ಲದೆ ಅವಧಿ ಕೊಟ್ಟು, ಸಾಲವನ್ನು ಸುಲಭ ಕಂತುಗಳಲ್ಲಿ ತೀರಿಸುವುದಕ್ಕೆ ಸೌಲಭ್ಯ ಮಾಡಿಕೊಟ್ಟಿದ್ದಾರೆ. ಈ 20 ವರ್ಷಗಳಲ್ಲಿ, ಯಾವಾಗಲಾದರೂ ಫಸಲು ನಷ್ಟವಾದರೆ, ಅರ್ಜಿಕೊಟ್ಟ ತಕ್ಷಣ ಆ ವರ್ಷ ಬಡ್ಡಿಗೆ ವಿನಾಯಿತಿ ಕೊಟ್ಟು, ಕಂತನ್ನು ಮುಂದಕ್ಕೆ ಹಾಕುತ್ತಾರೆ. ವ್ಯವಸಾಯಗಾರರಿಗೆ ಅಷ್ಟು ಉತ್ತೇಜನ ಕೊಡುತ್ತಾರೆ. ಅದ್ದರಿಂದ ಆ ದೇಶಗಳಲ್ಲಿ ಆಹಾರ ಧಾನ್ಯಗಳನ್ನು ಅಷ್ಟು ಸಮೃದ್ಧಿಯಾಗಿ ಬೆಳೆಯುತ್ತಾರೆ. 30 ವರ್ಷಕ್ಕೊಂದುಸಾರಿ ಕಂದಾಯ ಪುನರ್ವಿಮರ್ಶೆ ಮಾಡಬೇಕೆಂದರೆ, ಅದನ್ನು ಜಾಸ್ತಿ ಮಾಡಬೇಕೆಂದು ಅರ್ಥವಲ್ಲ, ಕಡಿಮೆ ಮಾಡಬಹುದು. ಜಾಸ್ತಿ ಮಾಡುವುದಕ್ಕೆ ಮಾನ್ಯ

ಕೃಷ್ಣಪ್ಪನವರ ಕಾಲದಲ್ಲಿ ಅವಕಾಶ ಕೊಡುತ್ತಿದ್ದಾರಲ್ಲಾ ಎಂದು ನನಗೆ ದುಃಖವಾಗುತ್ತಿದೆ. ಈ ನಿರ್ಣಯವನ್ನು ಮಂಡಿಸುವಾಗ ಈ ವರದಿಯನ್ನು ನಾನು ತಯಾರು ಮಾಡಲಲ್ಲ, ಇದನ್ನು ಹಿಂದೆಯೇ ಮಾಡಿದ್ದು ಯತ್ನವಿಲ್ಲದೆ ಮಂಡಿಸುತ್ತಿದ್ದೇನೆ. ನಾನು ಸಾಂಕೇತಿಕವಾಗಿ ಇಲ್ಲಿ ಕುಳಿತಿದ್ದೇನೆಂದು ಹೇಳಿದರು. ಹಾಗಿದ್ದರೆ ರಾಜೀನಾಮೆ ಕೊಡಲಿ, ಮನೆಯಲ್ಲಿ ಅವರಿಗೆ ಹೆಚ್ಚು ಗೌರವ ಕೊಡುತ್ತಾರೆ. ನಮ್ಮ ಕಡೆ ಬಂದು ಸೇರಬೇಕೊ ಎಂದು ಒಬ್ಬ ಕಾಂಗ್ರೆಸ್ ಸದಸ್ಯರು ಕೇಳುತ್ತಿದ್ದಾರೆ. ಈ ಕಡೆ ಬಂದರೂ ರಾಜಕೀಯಕ್ಕೆ ಸೇರಿಕೊಂಡುಬಿಡುತ್ತಾರೆ ಅವರು, ಅದೂ ಬೇಡ. ನಾನು ಸರಕಾರದವರಿಗೆ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಇರುವ ಕಂದಾಯವನ್ನು ವಜಾಮಾಡಿ, ಇದರಿಂದ ಕೊರತೆ ಬೀಳುವ ಹಣವನ್ನು ಭರ್ತಿ ಮಾಡುವುದಕ್ಕೆ ಬೇರೆ ದಾರಿಗಳಿವೆ. ಸೇಲ್ಸ್‌ಟ್ಯಾಕ್ಸಿನಲ್ಲಿ ಬಹಳ ಲೀಕೇಜ್ ಇದೆ. ಅದೆಲ್ಲವನ್ನೂ ಮುಚ್ಚಿಬಿಡುವುದಾದರೆ ಭೂಗಂದಾಯವನ್ನು ಹಾಕಲೇ ಬೇಕಾಗಿಲ್ಲ. ನೀವು ಕಂದಾಯದಿಂದ ಏನು ನಿರೀಕ್ಷಣೆ ಮಾಡುತ್ತೀರೊ, ಅದರ ಎರಡು-ಮೂರರಷ್ಟು ಬರುತ್ತದೆ. ಇಂಥ ದಾರಿಗಳನ್ನು ಹುಡುಕುವುದು ಬಿಟ್ಟು, ಕಂದಾಯವನ್ನು ಏಕೆ ಜಾಸ್ತಿ ಮಾಡುತ್ತೀರಿ ? ವ್ಯವಸಾಯ ಕಸಬನ್ನು ಅವಲಂಬಿಸುವುದಕ್ಕೆ ಯಾರಿಗೂ ಇಷ್ಟವಿಲ್ಲ ಈಗ. ಎಲ್ಲಿಯಾದರೂ ಒಂದು ಬೀಡಿ ಅಂಗಡಿ ಇಟ್ಟುಕೊಂಡು ಜೀವನ ಮಾಡುವುದು ವ್ಯವಸಾಯಕ್ಕಿಂತ ಮೇಲು ಎಂಬ ಭಾವನೆ ಬಂದಿದೆ; ಇಲ್ಲದಿದ್ದರೆ ಯಾವುದಾದರೂ ಆಫೀಸಿನಲ್ಲಿ ಕೆಲಸಮಾಡುವುದು ಅದಕ್ಕಿಂತ ಬಹಳ ಲೇಸು ಎಂದು ಅವರಿಗೆ ಅನ್ನಿಸಿದೆ. ಈ ಆಫೀಸುಗಳ ಕೆಲಸಗಳಲ್ಲಿ ಸಂಬಳಕ್ಕೆ ಕಾಯಬೇಕಾಗಿಲ್ಲ, ಬೇರೆ ವರಮಾನವಿರುತ್ತದೆ ಎಂದು ಸಾಮಾನ್ಯವಾಗಿ ಎಲ್ಲ ರೈತರಿಗೂ ಗೊತ್ತಿದ್ದು, ಅವರು ವ್ಯವಸಾಯ ಬೇಡ ಅನ್ನುತ್ತಾರೆ. ರೈತರ ಕಷ್ಟ ಹೇಳತೀರದು; ಅವರಿಗೆ ಕೂಲಿಯವರು ಸಿಗುವುದಿಲ್ಲ; ಅವರಿಗೆ ಇನ್ನೂ ಅನೇಕ ತೊಂದರೆಗಳಿವೆ; ಅವುಗಳನ್ನು ಇಲ್ಲಿ ವಿವರಿಸುತ್ತಾ ಕಾಲಹರಣ ಮಾಡಲು ಇಷ್ಟ ಪಡುವುದಿಲ್ಲ. ಆಹಾರ ಸಮಸ್ಯೆ ಬೃಹದಾಕಾರವಾಗಿ ಬೆಳೆಯುತ್ತಿರುವಾಗ, ವ್ಯವಸಾಯಕ್ಕೆ ಎಲ್ಲ ಉತ್ತೇಜನ ಕೊಡಬೇಕು, ಎಲ್ಲ ಸಹಕಾರ ಕೊಡಬೇಕು ; ಅದನ್ನು ಪುಷ್ಟೀಕರಿಸಬೇಕು ಆಗ ದೇಶದ ಕಲ್ಯಾಣವಾಗುತ್ತದೆ. ವ್ಯವಸಾಯಗಾರರಲ್ಲಿ ಸಹಾನುಭೂತಿ ಇರಬೇಕು. ರೈತರನ್ನು ಕಡೆಗಣ್ಣಿನಿಂದ ನೋಡುತ್ತಿರುವಾಗ, ಮಾನ್ಯ ರೆವಿನ್ಯು ಮಂತ್ರಿಗಳಾದ ಕೃಷ್ಣಪ್ಪನವರು ರಾಜೀನಾಮೆ ಕೊಡುವುದಕ್ಕೆ ಸಿದ್ಧವಾಗಿರಬೇಕು.

Sri KADIDAL MANJAPPA (Sringeri).—Mr. Speaker, Sir, while welcoming this measure, I wish to make a few observations. I am glad that the Government, after considering the suggestion made by this House during the discussions on the reports of the Resettlement officers, have proposed to reduce the standard rate from 6¼ to 4 per cent in the case of lands except plantations, and in the case of plantations they have proposed to reduce it to one per cent. I wish to point out a few anomalies appearing in the Reports of the Settlement Officers from the different Zones in Malnad pertaining to the same crop. I do not know how the Government propose to deal with this matter. For instance, Sir, if the standard rate is reduced from 6¼ to 4 per cent, that reduced rate will be applicable to the standard rates proposed by the different Settlement Officers in the different Zones. In the case of Areca nut, it is a crop grown in malnad Taluks of Shimoga District, Chickmagalur, South Kanara aud Hassan. It is interesting to note that in Tarikere Zone the Officer has proposed Rs. 56.70 for Areca; in the Shimoga Zone he has proposed Rs.99-00 and in the Chickmagalur Zone he has proposed Rs, 67.65 per acre. If the revised standerd rate is made applicable to the different zones, there will be a proportionate reduction. But the anomaly will remain. The crop is the same, the climatic condition prevailing in different zones is the same and the price fetched in the market is the same. In puttur Taluk, in South Kanara, it is 120 Rupees. Because there was no Co-ordinated discussion or decision, this anomaly has appeared in these reports. For the folly of Officers, the ryots in Thirthahally Taluk will have to pay a standard rate of Rs. 99 and odd and the ryots in the adjoining Taluks, where the same crop is grown pay only Rs. 66/- and those rates will be

(SRI KADIDAL MANJAPPA)

reduced proportionately when the standard rate is reduced. I wish the Government had thought over this matter to apply some formula to make the standard rate uniformally applicable to the same crop in similar zones.

In the case of Coffee in Tarikere Zone the Officer has proposed 300 % increase. In Chikmagalur it is 100%-

SRI S. SIVAPPA.—In view of these anomalies, is it not necessary that there should be a re-survey ?

SRI KADIDAL MANJAPPA.—I should like the Government to consider this point and to get over this difficulty. In Coorg for Coffee they have proposed 76 rupees. If the standard rate is applied to different zones, I think there will be a certain amount of chaos and unnecessary hardships. This has to be considered by Government. A suggestion has been made from time to time by some members that the levy of land revenue should be abolished altogether and that it should be replaced by Agricultural Incometax. No doubt, it is a scientific way of dealing with the problem.

There cannot be a more scientific method than the levy of agricultural income tax. But in this country 80% of the peasants are ignorant and illiterate. I am not against the proposal to levy agricultural income tax if the conditions are favourable in this State. But in view of the fact that a large majority of our people are illiterate and ignorant, if agricultural incometax is introduced, they will be under the mercy of petty and corrupt officials and harrassment will be greater if agricultural incometax is introduced. In the case of Sales Tax, the merchant pays the money collected from the customer. In the case of Incometax, the assessee pays because he has income over and above the ceiling prescribed. Entertainment tax is collected from the customers. Unfortunately in the case of lands, irrespective of the income he is required to pay taxes. Particularly in the case of dry lands, the plight of the agriculturists is miserable. Even to-day, in the year 1965 the petty farmers and tenants are not in a position to give even one saree to their women-folk every year. Therefore, there is some force in the contention that petty farmers, particularly the owners of dry lands, should be given certain concession in the matter of levy of land revenue. The Government have now reduced the standard rate from 6¼% to 4%. I think they will get some concession.

With regard to Areca and other garden crops—Mulberry has been removed from the category—of garden crop and several other crops will be removed from this category the ruling rate now obtaining may not be permanent. It all depends upon the import policy of the Government of India. Supposing the Government of India proposes to encourage import, then the prices will go down. If the Government goes through the report of the Settlement Officers, they will understand the difficulties of growing Areca, particularly in Malnad where it is subject to the attack of a pest known as *Kole Roga*. Therefore I would sugges

that in the case of Areca 3% would be a reasonable rate. The rate proposed now is 99 Rupees. If it is reduced to 4 per cent it will be 66 Rupees. The assessment now being paid is Rs. 12 or 15. Therefore, I think, the Government may make up their mind to reduce the standard rate in the case of Areca and Coconut.

There is an impression in the minds of some Hon'ble members that the standard rate of 6¼ per cent was fixed by me when I was Revenue Minister. That is a wrong impression. Government had not taken the decision that the standard rate should be fixed at 6¼ per cent When I was the Revenue Minister. I want to make clear this aspect.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ) ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಮೈಸೂರು ಭೂಕಂದಾಯದ ಮಸೂದೆಯನ್ನು ತಿದ್ದುಪಡಿ ಮಾಡುವುದಕ್ಕೆ ಈ ಮಸೂದೆಯನ್ನು ಮಂಡಿಸುತ್ತಾ ಇದು ಕಂದಾಯವನ್ನು ಹೆಚ್ಚು ಮಾಡುವ ಮಸೂದೆಯಲ್ಲ, ಕಡಮೆ ಮಾಡುವ ಮಸೂದೆ, ಆದಕಾರಣ ನಾವೆಲ್ಲ ಇದನ್ನು ಸ್ವಾಗತಿಸಬೇಕೆಂದು ಹೇಳಿದರು. ಇದರ ಬಗ್ಗೆ ಯಾವ ವಿವರಣೆಯನ್ನೂ ಕೂಡ ಒದಗಿಸಲಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ರೆಸಲ್ಯೂಷನ್ನು ಬಂದಾಗ ಅದನ್ನು ಹೇಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಯಾವ ಯಾವ ಕಡೆ ಎಷ್ಟೆಷ್ಟು ಇದೆ, ಎಷ್ಟು ಕಡಿಮೆಯಾಗುತ್ತದೆ ಎನ್ನುವುದೊಂದನ್ನೂ ಹೇಳದೆ ಹೋದರೆ ಇದರಲ್ಲಿ ನಮಗೇನೂ ಅರ್ಥವಾಗುವುದಿಲ್ಲ. ಕೆಲವು ಕಾರಣಗಳಿಗಾಗಿ ಈ ಮಸೂದೆಯನ್ನು ನಾನು ಇಲ್ಲಿ ವಿರೋಧಿಸಬೇಕಾಗಿದೆ.

ಈಚೆಗೆ ರಾಜ್ಯದಲ್ಲಿ ರೆವೆನ್ಯೂ ಕಂದಾಯಕ್ಕೆ ಸಂಬಂಧಪಟ್ಟ ಮಸೂದೆಯ ಕಾನೂನನ್ನು ನಾವು ಅಂಗೀಕಾರ ಮಾಡಿದ್ದೇವೆ. ಅದಕ್ಕೆ ಹೊಸದಾಗಿ ಕಂದಾಯ ಹಾಕತಕ್ಕ ವಿಷಯಕ್ಕೆ ಸಂಬಂಧಪಟ್ಟ ಕೆಲವು ಕ್ಲಾಜುಗಳನ್ನು ತಿದ್ದುಪಡಿ ಮಾಡುವುದಕ್ಕೆ ಇದರಲ್ಲಿ ಹೊರಟಿದ್ದಾರೆ. ಈ ವಿಷಯದಲ್ಲಿ ಈ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳ ಬಗ್ಗೆ ಒಂದು ಮಾತನ್ನು ಇಲ್ಲಿ ಹೇಳಬೇಕಾಗಿದೆ. ಅವರೂ ಕೂಡ ಕಾಂಗ್ರೆಸ್ಸು ಪಕ್ಷದವರೊಡನೆ ಸೇರಿಕೊಂಡು ಅವರ ಜೊತೆಯಲ್ಲೇ ಹೋಗುತ್ತಾ ಅವರ ಅಭಿಪ್ರಾಯಗಳನ್ನೆಲ್ಲಾ ಅವರಿಗೇನೆ ಮಾರಿಕೊಂಡಿದ್ದಾರೆ ಎಂದು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ನಿಮ್ಮ ಸರಕಾರ ಅಧಿಕಾರಕ್ಕೆ ಬಂದರೆ ಅವರು ನಿಮ್ಮ ಮಾತು ಕೇಳುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—ಮೊನ್ನೆ ತಾನೆ ಲ್ಯಾಂಡ್ ರೆವೆನ್ಯೂ ಕಾನೂನನ್ನು ಕಷ್ಟಪಟ್ಟು ಮಾಡಿದ್ದಾರೆ. ಅದರಲ್ಲಿ ತಿದ್ದುಪಡಿ ಮಾಡಬೇಕಾಗಿದೆ. ಪ್ರಿಂಟಿಂಗ್ ಮಿಸ್ಟೇಕ್ಸ್ ಇವೆ, ತಿದ್ದುಪಡಿ ಮಾಡುವುದಕ್ಕೆ ಬಂದಿದ್ದೇವೆ ಎಂದು ಒಂದು ಮಾತು ಹೇಳಿದರು. ನಿಮ್ಮ ಅಧಿಕಾರಿಗಳ ದಕ್ಷತೆ ಎಷ್ಟಿದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಯಾವ ರೀತಿ ಕಾನೂನು ಬರೆಯುತ್ತಾರೆ ಎನ್ನುವುದನ್ನು ಇದು ಪ್ರತಿಬಿಂಬಿಸುತ್ತದೆ. ಇದಕ್ಕೆ ಕೋರ್ಟಿನ ಜಡ್ಜ್‌ಮೆಂಟ್ ನೋಡಿದರೆ ಗೊತ್ತಾಗುತ್ತದೆ ಇರತಕ್ಕಂಥ ಕಾನೂನನ್ನು ಹೊಡೆದು ಹಾಕಿ ಕ್ರಮ ತೆಗೆದುಕೊಂಡ ಬಗ್ಗೆ ಅಬ್ಸರ್ವೇಷನ್ಸ್ ಮಾಡಿದ್ದಾರೆ. ಇದನ್ನು ನೋಡಿದರೆ ವಿಧಾನ ಸಭೆಗೆ ಬರತಕ್ಕಂಥ ಸದಸ್ಯರು, ಕಾನೂನು ಬರೆಯತಕ್ಕಂಥ ಅಧಿಕಾರಿಗಳು ಇವರಿಗೆ ಏನಾದರೂ ಪರಿಜ್ಞಾನ ಇದೆಯೇ ಎಂಬ ಭಾವನೆ ಬರುತ್ತದೆ. ಅಂತೂ ಆಶ್ಚರ್ಯಕರವಾಗಿ ನಡೆಕೊಂಡು ಹೋಗುತ್ತಿದೆ. ಇಲ್ಲಿ ಪುನಃ ಖುಷ್ಕಿ ಅಂದರೆ ಏನು ಎಂದು ತಿದ್ದುಪಡಿ ಮಾಡಿ ಹೇಳಿದ್ದಾರೆ ಸ್ವಾಮಿ, ಇವತ್ತಿನ ದಿವಸ ವಿರೋಧ ಪಕ್ಷದವರು ಇದಕ್ಕಾಗಿ ಉಪವಾಸ ಮಾಡಿದರು, ಸಾರ್ವಜನಿಕರ ಅಭಿಪ್ರಾಯಕ್ಕೆ ಮಣಿದು ಕಂದಾಯ ಕಡಿಮೆ ಮಾಡುವುದಕ್ಕೆ ಹೊರಟಿಲ್ಲ ನಮಗೆ ಅರಿವು ಉಂಟಾಗಿದೆ ನಾವೇ ಮಾಡುತ್ತಾ ಇದ್ದೇವೆ ಎಂದು ಹೇಳಿದ್ದಾರೆ. ಬಹಳ ಸಂತೋಷ. ಅರಿವು ಬೇಗ ಉಂಟಾದರೆ ದೇಶಕ್ಕೆ ಕ್ಷೇಮ. ದೇಶಕ್ಕೆ ಒಳ್ಳೆಯದು ಆದರೆ ಶ್ರೀಮಾನ್ ಗಾಂಜಿ ವೀರಪ್ಪನವರು ಈ ಮಸೂದೆಯನ್ನು ಸಮರ್ಥಿಸುತ್ತಾ ಸರ್ಕಾರದ ಧೋರಣೆಯ ಬಗ್ಗೆ ಮಾತನಾಡಿದರು. ವ್ಯವಸಾಯಗಾರರ ಹರಿಹರ ಕ್ಷೇತ್ರದಿಂದ ಚುನಾಯಿತರಾಗಿ ಬಂದಿದ್ದಾರೆ ಆದರೆ ಅವರು ವ್ಯಾಪಾರಸ್ಥರ ಪ್ರತಿನಿಧಿಗಳಾಗಿದ್ದಾರೆ. ಆದರೆ ಅವರು ವೃತ್ತಿಯಿಂದ ವಕೀಲರು. ಪಟ್ಟಣದಲ್ಲಿ ವಾಸ ಮಾಡುತ್ತಿದ್ದರೂ ಕೂಡ ಹಳ್ಳಿಯವರ ಓಟು ತೆಗೆದುಕೊಂಡು ಇಲ್ಲಿಗೆ ಬಂದಿದ್ದಾರೆ. ನಾನೂ ಅಷ್ಟೇ. ಅರವತ್ತು ವರ್ಷಗಳ ಹಿಂದೆ ಸರ್ವೇ ಸೆಟ್ಲ್‌ಮೆಂಟ್ ಆಗಿತ್ತು. ಈಗ ವಿಜ್ಞಾನದ ರೀತಿಯಲ್ಲಿ ಅಳತೆ ಮಾಡಿ, ತೂಕ ಹಾಕಿ ಅಧಿಕಾರಿಗಳು ರಿಪೋರ್ಟು ತಯಾರು ಮಾಡಿದ್ದಾರೆ. ಅದನ್ನು ಒಪ್ಪಿ

(ಶ್ರೀ ಎಸ್. ಗೋಪಾಲಗೌಡ)

ಕೊಂಡು ಕಂದಾಯ ಪುನರ್ ವ್ಯವಸ್ಥೆ ಮಾಡದೇ ಹೋದರೆ ಅದು ಸರಿಯಾಗಿರುವುದಿಲ್ಲ. ವಿರೋಧ ಪಕ್ಷದವರು ಇದನ್ನು ಸ್ವಾಗತಿಸದೆ ವಿರೋಧ ಮಾಡುವುದು ಅನ್ಯಾಯ ಎಂದು ಅವರು ಹೇಳಿದರು. ಅನೇಕ ವಿಷಯಗಳನ್ನು ನಾವು ಪುನಃ ಪುನಃ ವಿಚಾರ ಮಾಡಬೇಕಾಗುತ್ತದೆ. ಕಾರಣಾಂತರದಿಂದ ಇದುವರೆಗೆ ಸರ್ವೆ ಸೆಟ್ಲಮೆಂಟ್ ಮಾಡುವುದಕ್ಕಾಗಿರಲಿಲ್ಲ. ಶ್ರೀ ಜತ್ತಿಯವರು ಸಹ ಈ ಸಭೆಯಲ್ಲಿ ಒಂದು ಮಾತು ಹೇಳಿದ್ದಾರೆ. ಸಾಕಷ್ಟು ಸಿಬ್ಬಂದಿ ಇಲ್ಲದೇ ಇರುವುದರಿಂದ ಸರಿಯಾದ ರೀತಿಯಲ್ಲಿ ಸರ್ವೆ ಮಾಡುವುದಕ್ಕಾಗುವುದಿಲ್ಲ. ಹಳ್ಳಿಗಳಲ್ಲಿಯ ಪರಿಸ್ಥಿತಿ ಅಧಿಕಾರಿಗಳಿಗೆ ಸರಿಯಾಗಿ ಗೊತ್ತಿರುವುದಿಲ್ಲ ಬಾಗಾಯಿತ ಜಮೀನನ್ನು ತರಿ ಭೂಮಿ ಎಂದೂ, ತರಿ ಇರುವುದನ್ನು ಖುಷ್ಕಿ ಎಂದೂ ಹೇಳಿರುವುದು ರಿಪೋರ್ಟಿನಲ್ಲಿ ಕಂಡು ಬರುತ್ತದೆ. ಮೂರು ನಾಲ್ಕು ತಾಲ್ಲೂಕಿಗೆ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದ್ದೀರಿ. ಒಂದು ಊರಿಗೆ ಹೋಗಿ ವ್ಯಾಪಾರ ಮಾಡುವ ಹಾಗೆ ಒಂದು ವಸ್ತುವಿನ ಬೆಲೆ ಮಾರ್ಕೆಟ್ಟಿನಲ್ಲಿ ಹೇಗೆ ಇದೆ ಎಂದು ತಿಳಿದುಕೊಳ್ಳುವ ಹಾಗೆ ಈ ರಿಪೋರ್ಟಿನಲ್ಲಿ ಬರೆದಿದ್ದಾರೆ. ನಾನು ಅಧಿಕಾರಿಗಳ ಬಗ್ಗೆ ದೂರುವುದಿಲ್ಲ. ಸರ್ವೇ ಮಾಡುವುದು ಅದು ಒಂದು ದೊಡ್ಡ ಕೆಲಸ, ಜವಾಬ್ದಾರಿ ಕೆಲಸ. ಅದರಲ್ಲಿ ನುರಿತ ಕಾರ್ಯಕರ್ತರು ಬೇಕು. ಒಂದು ಹಳ್ಳಿಯನ್ನು ವೈಜ್ಞಾನಿಕ ರೀತಿಯಲ್ಲಿ ಸರ್ವೇ ಮಾಡುವುದಕ್ಕೆ ಕೊನೆಯ ಪಕ್ಷ 20 ಜನ ಅಧಿಕಾರಿಗಳಿಗೆ ಒಂದು ತಿಂಗಳ ವರೆಗೆ ಕೆಲಸ ನಡಿಯುತ್ತದೆ. ಆದುದರಿಂದ ವೈಜ್ಞಾನಿಕ ಎಂದು ಎನ್ನುವ ಮಾತು ನಿಜವಲ್ಲ. ಅಂಥ ವೈಜ್ಞಾನಿಕವಾದಂಥ ರೀತಿ ಉಪಯೋಗಿಸಿಕೊಂಡಿಲ್ಲ. ವೈಜ್ಞಾನಿಕ ರೀತಿಯಲ್ಲಿ ಅನೇಕ ವಿಷಯಗಳು ಅಡಕವಾಗಿರುತ್ತವೆ. ಹಾಗೆ ಪರಿಶೀಲನೆ ಮಾಡಿದ್ದಾದರೆ ಆ ರೀತಿ ಬರೆಯಬಹುದಾಗಿತ್ತು. 30 ವರ್ಷಗಳ ನಂತರ ವಿಷಯ ಬರೆಯುವುದಾದರೆ ಅದು ವೈಜ್ಞಾನಿಕವಾಗುವುದಿಲ್ಲ. ಅದು ಅನ್ವಯಿಸುವುದಿಲ್ಲ. ಇಂದು ಬೆಲೆ ಏನು ಇದೆ? ಬೆಲೆ ಏರಿದೆ ನಿಜ. ಎರಡನೇ ಮಹಾ ಯುದ್ಧದ ನಂತರ 1942-43 ನೇ ಇಸವಿಯಿಂದ ಈಚೆಗೆ ಪ್ರತಿಯೊಂದು ವಸ್ತುವಿನ ಬೆಲೆ ಏರುತ್ತಾ ಹೋಗುತ್ತಿದೆ. ವ್ಯವಸಾಯಕ್ಕೆ ಸಂಬಂಧಪಟ್ಟ ರೈತನು ಬೆಳೆಯುತಕ್ಕ ವಸ್ತುವಿನ ಬೆಲೆ ಒಂದಕ್ಕೆ ನಾಲ್ಕು ಪಟ್ಟು ಐದು ಪಟ್ಟುದರ ಏರಿದೆ. ಆದರೆ ರೈತ ಕೊಂಡುಕೊಳ್ಳತಕ್ಕ ಸಾಮಾನುಗಳಾಗಲಿ ವ್ಯವಸಾಯಕ್ಕೆ ಬೇಕಾಗುವ ಉಪಕರಣಗಳಾಗಲಿ ಒಂದಕ್ಕೆ ಹತ್ತರಷ್ಟು, ಇಪ್ಪತ್ತರಷ್ಟು, ಐವತ್ತರಷ್ಟು ಔಷಧಿ ಮುಂತಾದ ವಸ್ತುಗಳು ನೂರರಷ್ಟು ಬೆಲೆ ಏರಿದೆ. ನಮ್ಮ ರಾಜ್ಯಕ್ಕೆ ಬರಬೇಕಾದ ಸುಮಾರು 60-70 ಕೋಟಿ ರೂಪಾಯಿಗಳಲ್ಲಿ ನೂರಕ್ಕೆ ಎಂಭತ್ತರಷ್ಟು ಜನ ಇರತಕ್ಕ ರೈತರಿಂದ ಸೇಲ್ಸ್ ಟ್ಯಾಕ್ಸ್ ಮೂಲಕ, ಎಕ್ಸೈಜ್‌ಸುಂಕ ಮೂಲಕ ಅಪರೋಕ್ಷವಾಗಿ ತೆರಿಗೆಯ ಮೂಲಕ 40 ಕೋಟಿ ರೂಪಾಯಿಗಳ ವರೆಗೆ ಅವರು ಕಾಂಟ್ರಿಬ್ಯೂಟ್ ಮಾಡುತ್ತಾರೆ. ಇದನ್ನು ಮುಚ್ಚಿಟ್ಟು ರೈತ ಒಳ್ಳೇ ಸ್ಥಿತಿಯಲ್ಲಿದ್ದಾನೆ. ವಿಮಾನದಲ್ಲಿ ಓಡಾಡುತ್ತಾನೆ ಎಂಬ ಅರ್ಥ ಬರುವ ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತಾರೆ. ಹೆಚ್ಚಾದ ಬೆಲೆಗಳಿಂದ ದಳ್ಳಾಳಿಗಳ ಲಾಭ ಮಾತ್ರ ಹೆಚ್ಚಾಗಿದೆ. ಬೇರೆಯವರಿಗೆ ಅನುಕೂಲವಾಗಿದೆ. ರೈತರಿಗೆ ಎಷ್ಟು ಅನುಕೂಲವಾಗಿದೆ ಎನ್ನುವುದನ್ನು ವಿಮರ್ಶೆ ಮಾಡಿ ನೋಡಬೇಕು. ತೋಟಗಾರರ ಬಗ್ಗೆ ವಿಮರ್ಶೆ ಮಾಡಿ. ಒಂದು ಎಕರೆ ತೋಟದಲ್ಲಿ ನೂರು ಜನರನ್ನು ಕೆಲಸಕ್ಕೆ ಹಚ್ಚಬೇಕಾಗುತ್ತದೆ. ಇವತ್ತಿನ ದಿವಸ ಒಂದು ಕ್ವಿಂಟಾಲ್ ಅಕ್ಕಿಗೆ 70-80 ರೂಪಾಯಿ ಕೊಟ್ಟು ತಂದು ಪ್ರತಿಯೊಬ್ಬ ಕೆಲಸಗಾರನಿಗೆ ಒಂದು ಕಿಲೋ ಅಕ್ಕಿ ಎರಡು ರೂಪಾಯಿ ಕೂಲಿ ಕೊಟ್ಟರೆ ಮಾತ್ರ ಅವನು ಕೆಲಸಕ್ಕೆ ಬರುತ್ತಾನೆ. ಈ ರೀತಿ ಪರಿಸ್ಥಿತಿ ಇರುವುದರಿಂದ ತೋಟದ ಬೇಸಾಯ ಹಾಳು ಬಿದ್ದಿದೆ. ಇದನ್ನು ಹೋಗಿ ನೋಡಬಹುದು. ತರಿ ಜಮೀನು ಇರುವುದಿಲ್ಲ, ಭತ್ತ ಬೆಳೆಯುವುದಿಲ್ಲ. ಇಂಥ ಅನೇಕ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ವಿಚಾರ ಮಾಡುತ್ತಾ ಇಲ್ಲ. ಆದರೆ ಒಂದು ಮಾತು ಮಾತ್ರ ಇದೆ. ನಮಗೆ ದುಡ್ಡು ಬೇಕು. ನಾವು ಬಹಳ ಅಪಾಯದಲ್ಲಿದ್ದೇವೆ ತೊಂದರೆಯಲ್ಲಿದ್ದೇವೆ, ಕೊರತೆಯಲ್ಲಿದ್ದೇವೆ ಎಂದು ಹೇಳುತ್ತಾರೆ. ಸರಕಾರಕ್ಕೆ ಹಣ ಬೇಕು. ಆ ಮಾತು ಒಪ್ಪ ಬೇಕಾಗಿದೆ. ಶ್ರೀಮಾನ್ ಶಿವಪ್ಪನವರು ಮೊನ್ನೆ ದಿನ ಉಪವಾಸ ಮಾಡುತ್ತಾ ಇರುವಾಗ್ಗೆ ಅಲ್ಲಿಗೆ ಶ್ರೀ ಜತ್ತಿಯವರು ಬಂದಿದ್ದರು. ಆಗ್ಗೆ ಅಕಸ್ಮಾತ್ತಾಗಿ ಒಬ್ಬರು ಕೇಳಿದ ಪ್ರಶ್ನೆಗೆ ಶ್ರೀ ಜತ್ತಿಯವರು ಹೀಗೆ ಹೇಳಿದರು. ನನಗೆ ಹಣ ಕೊಡಿ. ಭೂಕಂದಾಯದಿಂದಲೇ ದುಡ್ಡು ಬರಬೇಕು ಎಂದು ಆಗ್ರಹವಿಲ್ಲ ಎಂದು ಅವರು ಹೇಳಿದರು. ಖರ್ಚು ಮಾಡುವುದಕ್ಕೆ ಹಣ ಬೇಕು ಎಂದು ಕಾರಣವಿಲ್ಲದೆ ಲ್ಯಾಂಡ್ ರೆವಿನ್ಯೂ ಆಕ್ಟ್ ಮನಸ್ಸಿಗೆ ಬಂದ ಹಾಗೆ ತಿದ್ದುಪಡಿ ಮಾಡುವುದು ಇಂದು ಸಂಜೆ ಐದು ಗಂಟೆಗೆ ಅವಸರದಲ್ಲಿ ಗಿಲಟಿನ್ ಮಾಡಿ ಪಾಸು ಮಾಡಿಕೊಳ್ಳುವುದು ನೋಡಿದರೆ ಕಾಂಗ್ರೆಸ್ ಪಕ್ಷದಲ್ಲಿರುವ ಒಳಗುದಿ ನೆನಗುದಿ ಹೊರಗೆ ಬಂದಿದೆ. ಬಹುತರವಾಗಿ ಈ ಒಳಗುದಿಯಿಂದ ಶ್ರೀಮಾನ್ ಕೃಷ್ಣಪ್ಪನವರು ಪಾರಾಗಿ ಬಂದಿದ್ದಾರೆ ಎಂದು ಕಾಣುತ್ತದೆ.

4-30 P.M.

ಹೀಗೆ ನೀವು ಒಂದು ಮೆಜಾರಿಟಿ ಪಕ್ಷವಾಗಿ ಇರುವುದರಿಂದ ನೀವು ಏನು ಬೇಕಾದರೂ ತೀರ್ಮಾನ ಮಾಡಬಹುದು. ಖುಷ್ಕಿ ಜಮೀನನ್ನು ತರಿಗೆಳೆದು, ತರೀ ಜಮೀನನ್ನು ಭಾಗಾಯಿತಿಗೆಳೆದು, ಭಾಗಾಯಿತು ಜಮೀನನ್ನು ಪ್ಲಾಂಟೇಷನ್ನಿಗೆಳೆದು ಹೀಗೆ ಒಂದನ್ನೊಂದು ಅದಲಬದಲೀ ಮಾಡಿ ಇದನ್ನು ಒಂದು ಹದಕ್ಕೆ ಹೇಗೋ ತಂದಿದ್ದೀರಿ. ಅಂತೂ ಈ ಬಾಬಿನಿಂದ ಸರ್ಕಾರಕ್ಕೆ ಹೆಚ್ಚು ಕಂದಾಯಬರುವಂತೆ ಮಾಡಿಕೊಂಡಿದ್ದೀರಿ. ಆದರೆ ನಮಗೇನೂ ಇದರ ವಿಚಾರವಾಗಿ ಅಷ್ಟು ಆಗ್ರಹವಾಗಲೀ ದುಖಃವಾಗಲೀ ಅಥವಾ ವಿಷಾದಗಳಾಗಲೀ ಯಾವುದೂ ಇಲ್ಲ. ಆದರೆ ಲ್ಯಾಂಡ್ ರೆವಿನ್ಯೂ ಕೋಡನ್ನು ಬರೆದಿರತಕ್ಕದ್ದೂ ಮತ್ತು ಅದನ್ನು ತಿದ್ದುಪಡಿ ಮಾಡತಕ್ಕದ್ದೂ ಬೇರೆ ಸಂದರ್ಭಗಳು. ಆದರೆ ಸರ್ವೆ ಅಂಡ್ ಸೆಟಲ್‌ಮೆಂಟ್ ಕೆಲಸ ನಿಂತು ಹೋಗಿದೆ, ಆದಕ್ಕಾಗಿ ಈಗ ತಿದ್ದುಪಡಿಯನ್ನು ಲ್ಯಾಂಡ್ ರೆವಿನ್ಯೂ ಕೋಡಿಗೆ ತರಲಾಗಿದೆ, ಇದನ್ನು ನೀವುಗಳು ಒಪ್ಪಬೇಕು ಅಂತ ಹೇಳತಕ್ಕದ್ದು ಸರಿಯಲ್ಲ ಎಂದು ಹೇಳುತ್ತೇನೆ. ಆದರೆ ತಮಗೆ ಈ ಒಂದು ತಿದ್ದುಪಡಿಯಿಂದ ಮುಂದೆ ಏನೇನು ಪರಿಣಾಮಗಳಾಗುತ್ತವೆ ಎಂಬುದನ್ನು ತಾವೇ ನೋಡುತ್ತೀರಿ. ಈಗ ಇರತಕ್ಕ ನಮ್ಮ ಭೂಕಂದಾಯದ ಒಂದು ಪದ್ಧತಿಯೇನಿದೆ ಅದು ಬಹಳ ಹಿಂದಿನದು, ಇದು ಆ ಓಬೀರಾಯನ ಕಾಲದಿಂದಲೂ ಹೀಗೆ ನಡೆದುಕೊಂಡು ಬರುತ್ತಿದೆ ಎಂಬ ವಿಷಯವನ್ನು ನಾವು ಇದೇ ಸಭೆಯಲ್ಲಿ ಹತ್ತಾರಾವರ್ತಿ ಹೇಳಿದ್ದೇವೆ. ಈ ವಿಚಾರವನ್ನು ಶ್ರೀ ಕಡಿದಾಳ್ ಮಂಜಪ್ಪನವರೂ ಕೂಡ ಒಪ್ಪಿಕೊಂಡಿದ್ದರು. ಅದನ್ನು ಬದಲಾವಣೆ ಮಾಡುವುದಕ್ಕೆ ಹೊರಟವರು ಆದರ ಮೇಲೆ ಮತ್ತಿಷ್ಟು ಹೊರೆಯನ್ನು ಅಂದರೆ, ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಎಂತ ಬೇರೆ ಹಾಕಿದರು. ಕಂದಾಯವನ್ನು ಬಿಟ್ಟುಬಿಡಬೇಕೆಂಬ ತತ್ವವನ್ನು ಒಪ್ಪಿದ್ದವರು ಈ ದಾರಿಯನ್ನು ಹಿಡಿದರು. ಈಗಲೂ ಈ ಬಾಬಿನಿಂದ ತೆರಿಗೆ ಹಣ ವಸೂರಾಗುತ್ತಿದೆ. ಈ ಒಂದು ಅಗ್ರಿಕಲ್ಚರ್ ಇನ್‌ಕಂಟ್ಯಾಕ್ಸಿನಿಂದಲೇ ಸರ್ಕಾರಕ್ಕೆ ಅವರ ಲೆಕ್ಕದಪ್ರಕಾರ 2 ಕೋಟಿ 50 ಲಕ್ಷ ಎಕರೆಗಳಿಂದ ಸುಮಾರು 4 ಕೋಟಿಗಳಷ್ಟು ಹಣ ಬೊಕ್ಕಸಕ್ಕೆ ಬಂದು ಬೀಳುತ್ತಿದೆ. ಅಷ್ಟಕ್ಕೂ ತೃಪ್ತರಾಗದೆ ಕಂದಾಯದ ಮೇಲೆ ಮತ್ತೆ ಸರ್‌ಛಾರ್ಜ್ ಅಂತ ಹಾಕಿ ಆದರಿಂದಲೂ ಸುಮಾರು ಏಳೂವರೆ ಅಥವಾ 8 ಕೋಟಿ ರೂಪಾಯಿಗಳಷ್ಟು ವರಮಾನವನ್ನು ಸರ್ಕಾರದವರು ಪಡೆಯುತ್ತಿದ್ದಾರೆ. ಹೀಗೆ ಈ ದಿವಸ ಸರ್ಕಾರದವರು ಈ ಭೂಮಿಯಿಂದಲೇ ಒಟ್ಟು 19-20 ಕೋಟಿ ರೂಪಾಯಿಗಳನ್ನು ಪಡೆಯತಕ್ಕಂಥ ಒಂದು ಅವಕಾಶವನ್ನು ಮಾಡಿಕೊಂಡಿದ್ದಾರೆ. ಈ ದಿವಸ ನಾವು ಅಂಗೀಕಾರಮಾಡತಕ್ಕ ತಿದ್ದುಪಡಿಯ ಪರಿಣಾಮ ರೈತರಮೇಲೆ ಇನ್ನು ಮುಂದಿನ 30 ವರ್ಷಗಳ ಕಾಲ ಒಂದೇ ಸಮನಾಗಿದ್ದು ರೈತರು ಸರ್ಕಾರದ ಬೊಕ್ಕಸಕ್ಕೆ ರಾಜ್ಯದಲ್ಲಿರತಕ್ಕ 2 ಕೋಟಿ 80 ಲಕ್ಷ ಎಕರೆ ಭೂಮಿಯ ಬಗ್ಗೆ ಕಂದಾಯದ ರೂಪದಲ್ಲಿ ಪ್ರತಿ ವರ್ಷವೂ 18 ಕೋಟಿ ರೂಪಾಯಿಗಳನ್ನೂ, ಲ್ಯಾಂಡ್ ರೆವಿನ್ಯೂ ಆಧಾರದ ಮೇಲೆ ವಿಧಿಸತಕ್ಕ ಅಂದರೆ, ಪ್ರತಿಯೊಂದು ರೂಪಾಯಿನ ಮೇಲೂ ಕೊಡತಕ್ಕ 90 ಪೈಸೆ ಸೆಸ್ಸಿನ ರೂಪದಲ್ಲೂ ಮತ್ತು ಸರ್‌ಛಾರ್ಜ್ ರೂಪದಲ್ಲಿ 2 ಕೋಟಿ 50 ಲಕ್ಷ ಎಕರೆಗಳಮೇಲೆ 7-8 ಕೋಟಿ ರೂಪಾಯಿಗಳನನ್ನೂ ತುಂಬಬೇಕಾಗಿರುತ್ತದೆ.........

ಶ್ರೀ ಎಂ. ವಿ. ಕೃಷ್ಣಪ್ಪ.—ನೀವು ಯಾವ ಆಧಾರದ ಮೇಲೆ ಅಷ್ಟಾಗುತ್ತದೆಂದು ಹೇಳುತ್ತೀರಿ? ಇದೆಲ್ಲಾ ಸೇರಿದರೂ ಎರಡೂವರೆ ಮೂರು ಕೋಟಿಗಳಿಗಿಂತ ಜಾಸ್ತಿಯಾಗುವುದಿಲ್ಲ. ಅದರೆ ತಾವು ಹೇಳುತ್ತಿರುವ 18-19 ಕೋಟಿ ರೂಪಾಯಿಗಳೆಂಬುದು ಸುಳ್ಳು.

ಶ್ರೀ ಎಸ್. ಗೋಪಾಲಗೌಡ.—ತಾವು ತಮ್ಮಲ್ಲಿರತಕ್ಕ ಕರಾರುವಾಕ್ ಲೆಕ್ಕಗಳನ್ನು ಸಭೆಯ ಮುಂದಿಡಿ, ಅವು ಸರಿಯಾಗಿದ್ದರೆ ಅದನ್ನು ನಾವೂ ಸಹಾ ಒಪ್ಪಿಕೊಳ್ಳುತ್ತೇನೆ. ತಾವು ನನಗೆ ಜೋನಲ್ ವಿವರಗಳನ್ನೆಲ್ಲಾ ಸರಿಯಾಗಿ ಒದಗಿಸಿಕೊಟ್ಟಲ್ಲಿ ನಾನು ಇಲ್ಲಿಯವರೆಗೂ ಹೇಳಿರತಕ್ಕದ್ದು ಒಂದು ಆಧಾರವನ್ನೇ ಅವಲಂಬಿಸಿದೆ ಎಂಬುದನ್ನು ತೋರಿಸಿಕೊಡುತ್ತೇನೆ. ನಾನು ಒಟ್ಟಿನಲ್ಲಿ ಏನೊಂದು ಮಾತನ್ನು ಹೇಳಬೇಕಾಗಿದೆ ಎಂದರೆ : ಬಹಳ ಮಟ್ಟಿಗೆ ನಾವು ಖುಷ್ಕಿ ಜಮೀನುಗಳೆಂದು ಏನು ಕರೆಯುತ್ತಿದ್ದೇವೋ ಆ ಭೂಮಿಗೆ ಹೆಚ್ಚಿನ ರಿಯಾಯಿತಿಗಳನ್ನು ತೋರಿಸಬೇಕಾಗಿತ್ತು. ಈಗ ಅದನ್ನು ಬಿಟ್ಟು ಪ್ಲಾಂಟೇಷನಗಳಿಗೆ ಹೆಚ್ಚಿನ ರಿಯಾಯಿತಿಯನ್ನು ತೋರಿಸಿದ್ದೀವೆ. ಅದಕ್ಕೆ ಕಾರಣ ಅದು ಒಂದು ಹೆಚ್ಚಿನ ಫಾರಿನ್ ಎಕ್ಸ್‌ಛೇಂಜನ್ನು ತರುತ್ತೆ ಎಂದು ಹೇಳಿದ್ದಾರೆ. ಇನ್ನೊ ಒಂದು ವಿಚಾರವೆಂದರೆ, ಆ ಭೂಸುಧಾರಣಾ ಮಸೂದೆಯಲ್ಲಿ ಈ ಪ್ಲಾಂಟೇಷನ್‌ಗಳ ಬಗ್ಗೆ ಇರತಕ್ಕ ಸೀಲಿಂಗ್ ಪರಿಮಿತಿಯನ್ನು 100 ಎಕರೆಗಳಿಂದ ಇದನ್ನು ಹೊರತುಪಡಿಸಿದ್ದಾರೆ. ಮತ್ತು ಈ ಪ್ಲಾಂಟೇಷನ್‌ಗಳ ಮಧ್ಯದಲ್ಲಿರತಕ್ಕ ಗದ್ದೆಯ ಭೂಮಿಯನ್ನು ಅಂದರೆ, ಸುತ್ತಲೂ ಪ್ಲಾಂಟೇಷನ್‌ಗಳಿಂದ ಸುತ್ತುವರಿದಿರತಕ್ಕ ಗದ್ದೆಯ ಜಮೀನನ್ನು, ಅಂದರೆ ಹೀಗೆ ಏಳು ಸುತ್ತಿನ ಕೋಟೆಯ ಮಧ್ಯೆ ಎಲ್ಲಿ ಅಂಥ ಜಮೀನಿದೆಯೋ ನನಗಂತೂ ಗೊತ್ತಿಲ್ಲ, ಅದನ್ನೂ ಅವರಿಗೇ ಕೊಡಬೇಕು ಅಂತ

(ಶ್ರೀ ಎಸ್. ಗೋಪಾಲ ಗೌಡ)

ಹೇಳಿದ್ದಾರೆ. ಇದನ್ನು ನೋಡಿದರೆ ಈ ಸರ್ಕಾರ ಇನ್ನೂ ಆ ವಿಮಾನದಲ್ಲಿ ಓಡಾಡತಕ್ಕ ಪ್ಲಾಂಟರುಗಳಿಗೇ ಅನುಕೂಲ ಮಾಡಿ, ಆ ಪಾತಾಳದಲ್ಲಿ ಬಿದ್ದು ಹುಳುಗಳಂತೆ ಕೆಸರಿನಲ್ಲಿ ಬಿದ್ದು ಒದ್ದಾಡತಕ್ಕ ಜನರ ಬಗ್ಗೆ ಕನಿಕರಪಡದೆ ಅವರನ್ನ ಮೇಲಕ್ಕೆತ್ತುವುದಕ್ಕೆ ಪ್ರಯತ್ನ ಪಡದೆ ಅವರ ಮೇಲೆ ಮತ್ತಷ್ಟು ಮಣ್ಣು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇನ್ನು ರಬ್ಬರ್, ಕೋಕೊ ಇತ್ಯಾದಿ ಪ್ಲಾಂಟೇಷನ್‌ಗಳವರೂ ಕೂಡ ಹೆಚ್ಚಿನ ಆದಾಯವನ್ನು ಪಡೆಯುತ್ತಾರೆ, ಅಂಥವರು ಟ್ಯಾಕ್ಸ್ ಅಷ್ಟೇ ಅಲ್ಲ ಸೂಪರ್ ಟ್ಯಾಕ್ಸ್‌ನ್ನೂ ಸಹಾ ಕೊಡುತ್ತಾರೆ. ಇನ್ನು ಮುಂದೆ ಇಂಥವರ ಅಭಿವೃದ್ಧಿಗಾಗಿ ಪ್ಲಾಂಟೇಷನ್‌ಗಳಿಗೆ ಮುಂದಕ್ಕೆ ಒಂದು ಪರ್ಸೆಂಟ್ ಟ್ಯಾಕ್ಸನ್ನು ಹಾಕಬೇಕೆಂದು ಹೇಳಿರತಕ್ಕದ್ದು ಸರಿಯಾದ್ದಲ್ಲ ಎಂದು ಹೇಳುತ್ತೇನೆ. ಆದರೆ ಶ್ರೀಮಾನ್ ಅಪ್ಪಣ್ಣನವರು ಮಾತನಾಡುತ್ತಾ ಪ್ಲಾಂಟರುಗಳಲ್ಲಿ ದೊಡ್ಡ ದೊಡ್ಡ ಪ್ಲಾಂಟರುಗಳೂ ಇದ್ದಾರೆ ಸಣ್ಣ ಸಣ್ಣ ಪ್ಲಾಂಟರುಗಳೂ ಇದ್ದಾರೆಂದು ಹೇಳಿದರು. ಆದರೆ ಅವರು ಸಣ್ಣ ಪ್ಲಾಂಟರುಗಳಾಗಿದ್ದರೂ ಅವರು ತೆರಿಗೆಯನ್ನಾದರೂ ಕೊಡತಕ್ಕ ಸ್ಥಿತಿಯಲ್ಲಿದ್ದಾರೆಂದು ಹೇಳುತ್ತೇನೆ. ಆದರೆ ಈ ಅನೇಕರು ಅನಿಶ್ಚಿತವಾಗಿರತಕ್ಕ ಮಳೆಮಾರುಗಳನ್ನು ನಂಬಿಕೊಂಡಿರತಕ್ಕವರ ಪಾಡೇನಾಗಬೇಕು ? ಆದುದರಿಂದ ಇಂಥ ಪ್ಲಾಂಟರುಗಳಿಗೆ ರಿಯಾಯಿತಿಯನ್ನು ತೋರಿಸುವುದಕ್ಕೆ ಬದಲಾಗಿ ಸಮಾಜದಲ್ಲಿ ಈ ದಿವಸ ಯಾವ ಒಬ್ಬ ರೈತ ಕೇವಲ ಖುಷ್ಕಿ ಜಮೀನನ್ನೇ ನಂಬಿಕೊಂಡು ಇರುತ್ತಾನೋ ಅಂಥ ಮನುಷ್ಯನಿಗೆ 1200 ರೂಪಾಯಿಗಳ ವರಮಾನ ತರತಕ್ಕ ಇಲ್ಲವೇ ಎರಡು ಬೇಸಿಕ್ ಹೋಲ್ಡಿಂಗ್ ಎಂತ ನಾವೇನು ಹೇಳುತ್ತೇವೆ ಅಷ್ಟು ಜಮೀನಿರತಕ್ಕವರಿಗೆಲ್ಲಾ ಈ ಕಂದಾಯವನ್ನು ಮಾಫೀ ಮಾಡಬೇಕೆಂದು ನಾನು ಹೇಳುತ್ತೇನೆ. ಆದರೆ ಈ ದಿವಸ ಈ ಕಂದಾಯ ಹೇಗೆ ತಲೆ ಎತ್ತಿತು ಎಂಬುದರ ಬುನಾದಿಯನ್ನು ವಿಮರ್ಶೆ ಮಾಡುವುದಕ್ಕೆ ಸರ್ಕಾರ ತಯಾರಾಗಿಲ್ಲದಿದ್ದರೂ, ಯಾವ ರೈತನಿಗೆ ಬಿತ್ತನೆ ಮಾಡಿದ ನಂತರ ಆತನಿಗೆ ಬೆಳೆ ಬಾರದಿದ್ದರೆ ಹೋಗಲಿ ಅವನು ಬಿತ್ತಿದ ಕಾಳೂ ಕೂಡ ಅವನಿಗೆ ಮಳೆ ಬಾರದೆಹೋಗಿ ಬೆಳೆಯಾಗದೆ ಇದ್ದಾಗ ಅಂಥವನಿಗೆ ಕಂದಾಯವನ್ನು ಮಾಫೀ ಮಾಡದೆ ಹೋದರೆ ಆತನ ಸ್ಥಿತಿ ಬಹಳ ಚಿಂತಾಜನಕವಾಗುವುದು. ಆದುದರಿಂದ ಅಂಥ ರೈತರಿಗೆ ಕಂದಾಯದ ಮಾಫಿಯನ್ನು ಮಾಡಲೇಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೆ, ಈಗ ಸಭೆಯ ಮುಂದೆ ಕಂದಾಯ ಸಚಿವರು ತಂದಿರತಕ್ಕ ತಿದ್ದುಪಡಿ ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಹಾಗೆ ನಾನು ಸ್ವಾಗತಿಸುವುದಕ್ಕೆ ಕಾರಣವೇನು ಎಂಬುದನ್ನು ಹೇಳುತ್ತಾ ಕೆಲವು ಸದಸ್ಯರೇನು ಮಾತನಾಡಿದ್ದಾರೆ ಅದರ ಬಗ್ಗೆ ಎರಡು ಮಾತುಗಳನ್ನಾಡುತ್ತೇನೆ.

ಇದುವರೆಗೂ ಮಾತನಾಡಿದ ವಿರೋಧ ಪಕ್ಷದ ಅನೇಕ ಮಾನ್ಯ ಸದಸ್ಯರುಗಳು ಈ ತಿದ್ದುಪಡಿ ಮಸೂದೆಯಿಂದ ದೇಶಕ್ಕೇನೂ ಅನುಕೂಲವಾಗುವುದಿಲ್ಲ ಎಂಬುದಾಗಿ ಹೇಳಿದ್ದಾರೆ. ಇಂಥ ಒಂದು ಪ್ರಯೋಜನವಿಲ್ಲದ ಮಸೂದೆಯನ್ನು ರೆವಿನ್ಯೂ ಸಚಿವರು ಸಭೆಯ ಮುಂದೆ ತರಬಾರದಾಗಿತ್ತು ಎಂದು ಹೇಳಿದರು. ಬಹುಶಃ ರೆವಿನ್ಯೂ ಸೆಟಲ್‌ಮೆಂಟಿನ ವಿಚಾರವನ್ನೇ ಅವರು ಮನಸ್ಸಿನಲ್ಲಿಟ್ಟು ಮಾತನಾಡಿರುವಂತೆ ಕಾಣುತ್ತದೆ. ಹೀಗೆ ಅವರು ಮಾತನಾಡಿರತಕ್ಕದ್ದನ್ನು ನೋಡಿದರೆ ಅವರ ವಾದಕ್ಕೂ ಈ ಬಿಲ್ಲಿಗೂ ಯಾವ ಸಂಬಂಧವೂ ಇದ್ದಂತೆ ಕಾಣುವುದಿಲ್ಲ. ಆದರೆ ಸರ್ಕಾರದವರು ಎಷ್ಟು ರಿಲೀಫನ್ನು ಕೊಡಬಹುದೋ ಅಷ್ಟನ್ನೂ ಕೊಟ್ಟಿದ್ದಾರೆಂದು ನನಗೆನಿಸುತ್ತಿದೆ. ಆದರೆ ನಾವು ಈ ಸರ್ವೆ ಮತ್ತು ಸೆಟಲ್‌ಮೆಂಟ್ ಪದ್ಧತಿಯನ್ನು ಬಹಳ ಪುರಾತನ ಕಾಲದಿಂದಲೂ ನಡೆಸಿಕೊಂಡು ಬರುತ್ತಿದ್ದೇವೆ. ಪ್ರತಿಯೊಂದು ರೂಪಾಯಿನ ಮೇಲೂ ಒಂದಾಣೆಯಂತೆ ಬರತಕ್ಕ ಉತ್ಪತ್ತಿಯಿಂದಲೇ ಬಹುಕಾಲ ನಮ್ಮ ಸರ್ಕಾರವನ್ನು ನಡೆಸಿಕೊಂಡು ಬರಲಾಗುತ್ತಿತ್ತು, ಇದಕ್ಕಿಂತಲೂ ಹೆಚ್ಚಿನ ವರಮಾನ ತರುತ್ತಿದ್ದಂಥ ಬಾಬು ಮತ್ತೊಂದಿರಲಿಲ್ಲ ಎಂಬುದಾಗಿ ನಾವು ಚರಿತ್ರೆಗಳಲ್ಲಿ ಓದಿದ್ದೇವೆ. ಆದರೆ ಇತ್ತೀಚೆಗೆ ರೈತನಾಗಲಿ ಅಥವಾ ನಾಗರಿಕರಾಗಲೀ ನಾನಾ ರೀತಿಯ ತೆರಿಗೆಗಳನ್ನು ಕೊಡುತ್ತಾರೆ. ಅದರಲ್ಲೂ ಅನೇಕ ಸದಸ್ಯರು ಹೇಳಿದ ಹಾಗೆ ರೈತನೂ ಕೂಡ ಆ ತೆರಿಗೆ ಎಲ್ಲವನ್ನೂ ಕೊಡುತ್ತಾನೆ ಜೊತೆಗೆ ಲ್ಯಾಂಡ್ ರೆವಿನ್ಯೂವನ್ನೂ ಕೂಡ ಕೊಡುತ್ತಾನೆ. ಆದ್ದರಿಂದ ಅವನಿಗೆ ರಿಲೀಫ್ ಕೊಡುವುದು ಸಾಧುವಾದದ್ದು ಎಂದು ಹೇಳಿ ಸರ್ಕಾರದವರು ಯೋಚನೆ ಮಾಡಿ ಆರೂಕಾಲು ಪರ್ಸೆಂಟ್ ಇದ್ದುದನ್ನು ನಾಲ್ಕು ಪರ್ಸೆಂಟ್‌ಗೆ ರೆಡ್ಯೂಸ್ ಮಾಡಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದರು. ಅನೇಕ ಸದಸ್ಯರು ಅಂಕಿ ಅಂಶ ಇಲ್ಲ ಏನು ರಿಲೀಫ್ ಕೊಟ್ಟರಿ ಎಂಬುದು ಅರ್ಥವಾಗಿಲ್ಲ ಎಂದು ಹೇಳಿದರು; ಆ ಭಯಕ್ಕೆ ಆಸ್ಪದವಿಲ್ಲ ಎಂದು ಹೇಳುತ್ತೇನೆ. ನೂರು ರೂಪಾಯಿ ಕೊಡುತ್ತಾ ಇದ್ದವನಿಗೆ ಎರಡು ಪರ್ಸೆಂಟು ಕಡಮೆಯಾಗುತ್ತದೆ. ಆರೂಕಾಲು ಪರ್ಸೆಂಟ್ ಕೊಡಬೇಕಾಗಿತ್ತು ಈಗ ನಾಲ್ಕು ಪರ್ಸೆಂಟ್ ಕೊಡುತ್ತಾನೆ. ಆರೂಕಾಲು ಪರ್ಸೆಂಟ

ಕೊಡುವವನಿಗೆ ಎರಡು ರೂಪಾಯಿ ರಿಯಾಯಿತಿ ದೊರೆತಿದೆ ಎಂಬುದನ್ನು ಮೊಟ್ಟಮೊದಲನೆಯದಾಗಿ ಒಪ್ಪಿಕೊಳ್ಳಬೇಕಾದ್ದು ಅಗತ್ಯ. ಅಂದಮೇಲೆ ಅದಕ್ಕೆ ಅಂಕಿ ಅಂಶ ನಮ್ಮ ಮುಂದೆ ಇಡಿ ಎಂದು ಹೇಳಬೇಕಾಗಿಲ್ಲ. ಸರ್ವೆ ಸೆಟ್ಲಮೆಂಟ್ ರಿಪೋರ್ಟಿನಲ್ಲಿ ಎಲ್ಲಾ ಅಂಕಿ ಅಂಶಗಳನ್ನೂ ಇಟ್ಟಿದ್ದಾರೆ, ಅದನ್ನು ಅಪ್ರೂವ್ ಮಾಡ ವುದಕ್ಕೆ ಮುಂಚೆ ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿದ ಹಾಗೆ ಎರಡು ಪರ್ಸೆಂಟ್ ರೆಡ್ಯೂಸ್ ಮಾಡಿದರೆ ಎಷ್ಟು ಕಂದಾಯ ಫೈನಲ್ ಆಗಿ ನಿಂತುಕೊಳ್ಳುತ್ತದೆ ಎಂಬ ಅಂಕಿ ಅಂಶಗಳನ್ನು ಕೂಡ ಈ ಸಭೆಯ ಮುಂದೆ ಇಟ್ಟು ಆಮೇಲೆ ಅದಕ್ಕೆ ಸಭೆಯ ಒಪ್ಪಿಗೆಯನ್ನು ಕೇಳು ತ್ತಾರೆ ಎಂದು ನಾನು ಅಂದುಕೊಂಡಿದ್ದೇನೆ. ಎಂದಮೇಲೆ ಯಾವ ರೀಯಾಯಿತಿಯೂ ದೊರೆತಿಲ್ಲ ಎಂದು ಹೇಳುವುದು ಸರಿಯಾದ ವಾದ ಅಲ್ಲ. ನಿಜವಾಗಿಯೂ ಕೂಡ ಯೋಗ್ಯವಾದ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ ಎಂದು ಹೇಳಬಹುದು. ಬಹುಶಃ ಅನೇಕರ ವಾದ ಜಮೀನಿನಮೇಲೆ ಕಂದಾಯ ಇರಬಾರದು, ಅದರಲ್ಲೂ ಸಣ್ಣ ಹಿಡುವಳಿ ಮೇಲೆ ಕಂದಾಯ ಇರಬಾರದು ಎಂಬ ವಾದ ಸರಿಯಾಗಿದೆ, ಆದರೆ ತತ್ಕಾಲಿಕವಾಗಿ ಅದನ್ನು ತೆಗೆದು ಹಾಕುವುದರಿಂದ ಸರ್ಕಾರಕ್ಕೆ ಬರತಕ್ಕ ವರಮಾನವನ್ನು ಬೇರೆ ಯಾವ ರೀತಿಯಲ್ಲಿ ಸರಿತೂಗಿಸಿಕೊಳ್ಳಬಹುದು ಎಂಬ ಪ್ರಶ್ನೆ ಬರುತ್ತದೆ. ಅದು ಸ್ವಲ್ಪ ಕ್ಲಿಷ್ಟವಾದ ಸಮಸ್ಯೆಯಾಗಿರುವುದರಿಂದ ಈಗ ಸಾಧ್ಯವಾದಷ್ಟು ರಿಲೀಫ್ ಕೊಡೋಣ ಮುಂದೆ ಬಹುಶಃ ರೈತನಿಗೆ ಕೊಡತಕ್ಕ ರಿಲೀಫ್‌ಗಳಲ್ಲಿ ಇದೇ ಮೊಟ್ಟಮೊದಲನೆಯದಾಗಲಿ ಎಂದು ಹೇಳಿ ಈ ರಿಲೀಫ್ ಕೊಟ್ಟಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಸರ್ವೇ ಸೆಟ್ಲಮೆಂಟ್ ಹುಟ್ಟಿದ ಕಾಲದಿಂದ ಅಲ್ಲಿಯವರೆಗೂ ಆರೂಕಾಲು ಪರ್ಸೆಂಟ್ ಕೊಡುತ್ತಾ ಇದ್ದೆವು ಈಗ ನಾಲ್ಕು ಪರ್ಸೆಂಟ್‌ಗೆ ಇಳಿಸುತ್ತಾ ಇದ್ದೇವೆ ಮುಂದೆ ಉತ್ತರೋತ್ತರ ಸಣ್ಣ ಹಿಡುವಳಿ ಮೇಲೆ ಮತ್ತು ವರಮಾನ ಬರದೆ ಇರತಕ್ಕ ಹಿಡುವಳಿ ಮೇಲೆ ಕಂದಾಯ ತೆಗೆದುಹಾಕುವುದಕ್ಕೂ ಕೂಡ ಒಂದು ಹೆಜ್ಜೆ ಮುಂದೆ ಹೋಗಿ ಯೋಚನೆ ಮಾಡಿದರೂ ಮಾಡಬಹುದು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಆ ಒಂದು ದೃಷ್ಟಿಯಿಂದ ಇವತ್ತು ರೈತನಮೇಲೆ ಇರತಕ್ಕ ಹೊರೆಯನ್ನು ಸಾಧ್ಯವಾದಷ್ಟು ಕಡಿಮೆ ಮಾಡಿದ್ದಾರೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಈಗ ರೈತರು ಕೊಡುತ್ತಾ ಇರುವುದರಲ್ಲಿ ತಾವು ರಿಯಾಯಿತಿ ತೋರಿಸಿದ್ದೀರಾ ಅಥವಾ ಪ್ರಪೋಸ್ ಮಾಡಿರುವ ಕಂದಾಯದಲ್ಲಿ ರಿಯಾಯಿತಿ ತೋರಿಸಿದ್ದೀರ ?

ಶ್ರೀ ಎಂ. ಸಿ. ಬಸಪ್ಪ.—ರೈತ ಕೊಡತಕ್ಕ ಕಂದಾಯದಲ್ಲಿ ರಿಲೀಫ್ ಕೊಡಬೇಕೇ ಬಿಡಬೇಕೇ ಎನ್ನುವುದು ಸರ್ಕಾರದ ಮುಂದೆ ಇರತಕ್ಕ ಪ್ರಶ್ನೆ ಅಲ್ಲ. ಸರ್ಕಾರದ ಮುಂದೆ ಎರಡು ಪ್ರಶ್ನೆಗಳು ಇವೆ. ಸರ್ವೆ ಸೆಟ್ಲಮೆಂಟ್‌ಗೆ ಸಂಬಂಧಪಟ್ಟಂತೆ 30 ವರ್ಷಕ್ಕೆ ಒಂದು ಸಾರಿ ಸಾಯಿಲ್ ಕ್ಲಾಸಿಫಿಕೇಷನ್ ಮಾಡಿ ಅದರಿಂದ ಬರತಕ್ಕ ವರಮಾನದ ಮೇಲೆ ರೂಪಾಯಿಗೆ ಒಂದಾಣೆ ಹಾಕಬೇಕೆನ್ನುವುದು ಅದರಲ್ಲಿ ನಮೂದಾಗಿದೆ. ಆ ವರದಿಯನ್ನು ಈ ಸಭೆಯಲ್ಲಿಟ್ಟು ಅದು ಇಲ್ಲಿ ಚರ್ಚೆಯಾಗಿದೆ. ಮತ್ತು ಸರ್ಕಾರದ ಗಮನಕ್ಕೂ ಕೂಡ ಅನೇಕ ವಿಷಯಗಳನು ತಂದು ಎರಡು ಕಡೆಯ ಸದಸ್ಯರೂ ಕೂಡ ಮಾತನಾಡಿದ್ದಾರೆ. ಅದರಲ್ಲಿ ರೈತನಿಗೆ ಯಾವುದಾದರೂ ರಿಲೀಫ್ ಕೊಡುವುದು ಸಾಧುವಾದುದು ಎಂದು ಹೇಳಿದ್ದಾರೆ. ಅದರಲ್ಲಿ ರೈತನಿಗೆ ಯಾವ ರೀತಿಯಲ್ಲಿ ರಿಲೀಫ್ ಕೊಡಬೇಕೆಂಬುದನ್ನು ಯೋಚನೆ ಮಾಡಿ ಆರೂಕಾಲು ಪರ್ಸೆಂಟ್ ಇದ್ದುದನ್ನು ನಾಲ್ಕು ಪರ್ಸೆಂಟ್ ಕೊಟ್ಟರೆ ಸಾಕು ಎಂದು ಹೇಳಿ ಈ ಒಂದು ತಿದ್ದುಪಡಿಯನ್ನು ತಂದಿರುವುದರಿಂದ ಎರಡು ರೂಪಾಯಿ ಇಪ್ಪತ್ತೈದು ಪೈಸೆ ಆತ ಕೊಡಬೇಕಾಗುತ್ತದೆ. ಇಷ್ಟು ಮಟ್ಟಿನ ರಿಲೀಫ್ ಕೊಡೋಣ ಎಂಬ ದೃಷ್ಟಿಯಿಂದ ಈ ಮಸೂದೆಯನ್ನು ಈ ಸಭೆಯಲ್ಲಿ ತಂದಿದ್ದಾರೆ. ಆದ್ದರಿಂದ ಇದು ಈಗಿರತಕ್ಕ ಕಂದಾಯ ಅಥವಾ ಮುಂದೆ ಬರತಕ್ಕ ಕಂದಾಯದ ಮೇಲೆ ಮಾಡಿದ್ದಾರೆಯೇ ಎಂಬ ಪ್ರಶ್ನೆ ಬರುವುದಿಲ್ಲ.

ಶ್ರೀ ಎಸ್. ಶಿವಪ್ಪ.—ಈಗಿರತಕ್ಕ ಕಂದಾಯದ ಮೇಲೆ ಎಷ್ಟು ಕಡಿಮೆ ಯಾಗುತ್ತದೆ ಎಂಬುದನ್ನು ಹೇಳಿ.

ಶ್ರೀ ಎಂ. ಸಿ. ಬಸಪ್ಪ.—ಈಗಿರತಕ್ಕದ್ದನ್ನು ತೆಗೆದು ಹಾಕಬೇಕೆಂದು ವಿರೋಧ ಪಕ್ಷದವರು ಅಭಿಪ್ರಾಯಪಡಬಹುದು ಆದರೆ ಜವಾಬ್ದಾರಿ ಹೊತ್ತಿರತಕ್ಕ ಸರಕಾರದವರು ಎಷ್ಟು ರಿಲೀಫ್ ಕೊಡಬಹುದು ಎಂಬುದನ್ನು ಯೋಚನೆ ಮಾಡಿ ಹೆಚ್ಚಿನ ರಿಲೀಫ್ ಕೊಟ್ಟಿದ್ದಾರೆ ಎಂದು ಹೇಳಿ ನಾನು ಹೇಳುತ್ತೇನೆ. ಸಿಂಪಲ್ ಮ್ಯಾಥಮ್ಯಟಿಕಲ್ ಕ್ಯಾಲ್ಕುಲೇಷನ್ ಪ್ರಕಾರ ಹೇಳಬಹುದೇ ಹೊರತು, ಅಳತೆ ಮಾಡಿ ಈ ಮನೆಯಲ್ಲಿ ಕುಳಿತುಕೊಂಡು ಇಷ್ಟೇ ಆಗುತ್ತದೆ ಎಂದು ನಿಗದಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಶ್ರೀಮಾನ್ ವೆಂಕಟೇಗೌಡರಿಗೆ ಹೇಳುತ್ತೇನೆ. ಮ್ಯಾಥಮ್ಯಾಟಿಕಲ್ ಕ್ಯಾಲ್ಕುಲೇಷನ್ ಪ್ರಕಾರ ನಿಗದಿ ಮಾಡುತ್ತೇವೆ ಅದನ್ನು ಆಧಾರವಾಗಿಟ್ಟುಕೊಂಡು ಅಧಿಕಾರಿಗಳು ಸರ್ವೇ ನಂಬರು ಬರೆಯುತ್ತಾರೆ, ನೋಡುತ್ತಾರೆ, ಅದರ ಮೇಲೆ ಕಂದಾಯ ನಿಗದಿ ಮಾಡುತ್ತಾರೆ ಅದನ್ನು ಬಿಟ್ಟು ಬೇರೆ ಏನನ್ನೂ ಮಾಡುವುದಕ್ಕೆ ಬರುವುದಿಲ್ಲ ಎಂಬುದನ್ನು ಮಾನ್ಯ ಸದಸ್ಯರು ಅರಿತುಕೊಳ್ಳಬೇಕು ಪ್ಲಾಂಟೇಷನ್ ಕ್ರಾಪ್ ವಿಷಯದಲ್ಲಿ ವಿಶೇಷವಾದ ಒಂದು ರಿಯಾಯಿತಿಯನ್ನು ಕೊಟ್ಟಿದ್ದಾರೆ ಎಂಬು

(ಶ್ರೀ ಎಂ. ಸಿ. ಬಸಪ್ಪ)

ದನ್ನು ಒಪ್ಪಿಕೊಳ್ಳಬೇಕು. ಇದರಲ್ಲಿ ಒಂದು ಪರ್ಸೆಂಟ್ ರೆಡ್ಯೂಸ್ ಮಾಡಿದ್ದಾರೆ. ಅದು ಹೆಚ್ಚಾಗುತ್ತದೆಯೇ ಕಡಿಮೆಯಾಗುತ್ತದೆಯೇ ಎಂದು ಮಾನ್ಯ ಸದಸ್ಯರು ಕೇಳಲು ಅಪೇಕ್ಷೆಪಡುತ್ತಾರೆ ಅದರ ನಮ್ಮ ಮುಂದೆ ಇರತಕ್ಕ ಪ್ರಶ್ನೆ ಅದಲ್ಲ. ನಮ್ಮ ಮುಂದೆ ಇರತಕ್ಕ ಪ್ರಶ್ನೆ ಬರತಕ್ಕ ವರಮಾನದಲ್ಲಿ ಸರಕಾರಕ್ಕೆ ಎಷ್ಟು ಕೊಡಬೇಕು ಎನ್ನುವುದು ಪ್ರಶ್ನೆ. ಈ ಸಂದರ್ಭದಲ್ಲಿ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದರಲ್ಲಿ ಲ್ಯಾಂಡ್ ಎಂದರೆ ಏನು ಎಂಬುದನ್ನು ಡಿಫೈನ್ ಮಾಡಿದ್ದಾರೆ. ರೆವಿನ್ಯೂ ಸೆಟ್ಲ್‌ಮೆಂಟ್ ರಿಪೋರ್ಟ್‌ನಲ್ಲಿ ನಮ್ಮ ಜೋನ್‌ಗೆ ಸಂಬಂಧಪಟ್ಟ ಅಧಿಕಾರಿಗಳು ಅದನ್ನು ಮೂರು ಭಾಗವಾಗಿ ವಿಂಗಡಿಸದೇ ನಾಲ್ಕು ಭಾಗಗಳಾಗಿ ವಿಂಗಡಿಸಿದ್ದಾರೆ, ಡ್ರೈ, ವೆಟ್, ಮಲ್ಬರಿ, ಗಾರ್ಡನ್ ಎಂದು ಮಾಡಿದ್ದಾರೆ. ಮಲ್ಬರಿಗೆ ಒಂದು ಪ್ರತ್ಯೇಕ ಕೆಟಗರಿ ಕ್ರಿಯೇಟ್ ಮಾಡಿದ್ದಾರೆ. ಈಗ ಇರತಕ್ಕ ಆಕ್ಟ್‌ನಲ್ಲಾಗಲಿ ಅಥವಾ ತಿದ್ದುಪಡಿ ತಂದಿರತಕ್ಕ ಆಕ್ಟ್‌ನಲ್ಲಾಗಲಿ ಅದಕ್ಕೆ ಸ್ಥಾನವೇ ಇಲ್ಲ. ಇದನ್ನು ಮಂತ್ರಿಗಳು ಹಾಗೂ ಅಧಿಕಾರಿಗಳು ಡ್ರೈ ಲ್ಯಾಂಡ್ ಎಂದರೆ ಏನು ಎಂಬುದನ್ನು ಡಿಫೈನ್ ಮಾಡುವಾಗ 'ಡ್ರೈ ಲ್ಯಾಂಡ್ ಗ್ರೋಯಿಂಗ್ ಮಲ್ಬರಿ ಆಲ್‌ಸೋ' ಎಂದು ಡಿಫೈನ್ ಮಾಡುವುದು ಒಳ್ಳೆಯದು ಎಂದು ಕಾಣುತ್ತದೆ. ಅಧಿಕಾರಿಗಳ ಹತ್ತಿರ ಡ್ಯಾಟಾ ಇರುತ್ತದೆ ಅದನ್ನು ಯಾವ ಕ್ಯಾಟಗರಿಯಲ್ಲಿ ಹಾಕಬೇಕು ಎಂಬುದನ್ನು ಸರಿಯಾಗಿ ಆಲೋಚನೆ ಮಾಡದೇ ಅದನ್ನ ಒಂದು ಕ್ಯಾಟಗರಿಯಾಗಿ ಮಾಡೋಣ ಎಂದು ಮಾಡಿದ್ದಾರೆ, ಈ ಒಂದು ನ್ಯೂನತೆಯನ್ನು ತೆಗೆದುಹಾಕುವುದಕ್ಕೆ All mulberry growing land comes under dry land ಎಂದು ಮಾಡಿದರೆ ಒಳ್ಳೆಯದು. ಇದನ್ನು ಆಲೋಚನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸೂಚನೆ ಮಾಡುತ್ತೇನೆ. ಸಭೆಯ ಮುಂದೆ ತಂದಿರುವ ಈ ಅಮೆಂಡಿಗ್ ಬಿಲ್ಲು ಬಹಳ ಸ್ವಾಗತಾರ್ಹವಾದದ್ದಾಗಿದೆ. ಇದು ರೈತನ ಮೇಲೆ ಇರತಕ್ಕ ಹೊರೆಯನ್ನು ಕಡಿಮೆ ಮಾಡುತ್ತಾ ಇದೆ. ಆದ್ದರಿಂದ ವಿರೋಧ ಪಕ್ಷದವರು ಮಾತ್ರವಲ್ಲದೆ ಎಲ್ಲರೂ ಕೂಡ ಇದನ್ನು ಸರ್ವಾನುಮತದಿಂದ ಒಪ್ಪಿಕೊಂಡು ಇದಕ್ಕೆ ತಮ್ಮ ಬೆಂಬಲ ವನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

†ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಪತಿಗಳೇ, ಈಗ ಸಭೆಯ ಮುಂದೆ ಚರ್ಚೆಗೆ ಮಂಡಿಸಲ್ಪಟ್ಟಿರತಕ್ಕ ಮೈಸೂರು ಲ್ಯಾಂಡ್ ರೆವಿನ್ಯೂ ಅಮೆಂಡ್‌ಮೆಂಟ್ ಬಿಲ್ 1965ನ್ನು ಸಂಪೂರ್ಣವಾಗಿ ವಿರೋಧಿಸತಕ್ಕ ಕಾಲದಲ್ಲಿ ಸರ್ಕಾರದವರಿಗೆ ಒಂದೆರಡು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಲ್ಯಾಂಡ್ ರೆವಿನ್ಯೂ ಅನ್ನು ವಸೂಲು ಮಾಡತಕ್ಕ ಕಾಲದಲ್ಲಿ ಸರ್ಕಾರದ ಒಂದು ಘೋಷಣೆ ಏನಿದೆ ಎಂದರೆ ಆಹಾರ ಪದಾರ್ಥಗಳ ಧಾರಣೆ ಹೆಚ್ಚಾಗಿದೆ, ರೈತನಿಗೆ ಬರತಕ್ಕ ಹೆಚ್ಚಿನ ಉತ್ಪನ್ನದಲ್ಲಿ ಕೇವಲ ಒಂದಕ್ಕೆ ಎರಡರಷ್ಟು ಕಂದಾಯವನ್ನು ಹೆಚ್ಚು ಮಾಡಿದ್ದೇ ಆದರೆ ಅವನಿಗೇನೂ ಅಂತಹ ಮಹಾ ದೊಡ್ಡ ಪೆಟ್ಟು ಆಗುವುದಿಲ್ಲ ಎಂಬ ವಾದವನ್ನು ಮುಂದೂಡಿ ಸರ್ವೆ ಸೆಟ್ಲ್‌ಮೆಂಟ್ ರೂಪದಲ್ಲಿ ಸಂಸ್ಥಾನದ ನಾನಾ ಭಾಗಗಳ ವರದಿಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಈ ಸಭೆಯಲ್ಲಿ ಆಗಲೇ ಬಹಳ ಜನ ಸದಸ್ಯರು ಅದರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಾನು ತಮ್ಮಲ್ಲಿ ಒಂದು ಪ್ರಶ್ನೆಯನ್ನು ಕೇಳಲು ಇಚ್ಛೆಪಡುತ್ತೇನೆ. ಈ ದಿವಸ ಲ್ಯಾಂಡ್ ರೆವಿನ್ಯೂ ಲೆವಿ ಮಾಡತಕ್ಕ ಕಾಲದಲ್ಲಿ ಏನು ತಮ್ಮ ಈ ಒಂದು ಅಮೆಂಡಿಂಗ್ ಬಿಲ್‌ನ್ನು ತಂದಿದ್ದೀರಿ ಆರೂಕಾಲು ಪರ್ಸೆಂಟ್ ಹಿಂದೆ ಇತ್ತು ಅದನ್ನು ನಾಲ್ಕು ಪರ್ಸೆಂಟ್‌ಗೆ ರೆಡ್ಯೂಸ್ ಮಾಡಿದ್ದೇವೆ ಎಂದು ಹೇಳುತ್ತಾ ಇದ್ದೀರಿ, ಇದನ್ನು ಮಾನ್ಯ ಬಸಪ್ಪನವರು ಮ್ಯಾಥಮ್ಯಾಟಿಕಲ್ ಕ್ಯಾಲ್ಕುಲೇಷನ್ ಮೇಲೆ ತೆಗೆದುಕೊಳ್ಳಬೇಕೆಂದು ಹೇಳಿದರು. ಆ ಮ್ಯಾಥಮ್ಯಾಟಿಕಲ್ ಕ್ಯಾಲ್ಕ್ಯುಲೇಷನ್ ನಮಗೆ ಬೇಕಾಗಿಲ್ಲ. ಮೊದಲು ಆರೂಕಾಲು ಪರ್ಸೆಂಟ್ ಇತ್ತು ಅದನ್ನು ನಾಲ್ಕು ಪರ್ಸೆಂಟ್‌ಗೆ ರೆಡ್ಯೂಸ್ ಮಾಡಿದ್ದರಿಂದ ಎರಡು ರೂಪಾಯಿ ಉಳಿತಾಯವಾಗಿದೆ, ಕನ್‌ಸೆಷನ್ ಕೊಟ್ಟಿದ್ದೇವೆ ಎಂದು ಹೇಳಿ ಈ ಸಭೆಯ ಮುಂದೆ ಇಟ್ಟ ವಾದವನ್ನು ಪ್ರಶ್ನೆ ಮಾಡಿ ಅವರಿಗೆ ಒಂದು ಅಂಶವನ್ನು ನಾನು ಕೇಳಲು ಇಚ್ಛೆಪಡುತ್ತೇನೆ. 30 ವರ್ಷದ ಹಿಂದೆ ತಯಾರಾದ ಈ ಸರ್ವೇ ಸೆಟ್ಲ್‌ಮೆಂಟ್ ರಿಪೋರ್ಟ್‌ನ ಪ್ರಕಾರ ಆಗ ಅವರು ಕಂದಾಯವನ್ನು ನಿಗದಿ ಮಾಡಿದರು. ಆ ದಿನ ಇದ್ದಂತಹ ಧಾರಣೆವಾಸಿ ಏನಿತ್ತು? ಇವತ್ತು ಇರತಕ್ಕ ಧಾರಣೆವಾಸಿ ಏನಿದೆ ಎಂಬುದನ್ನು ವಿಮರ್ಶೆ ಮಾಡಿ ನೋಡಬೇಕು. ಹಿಂದೆ ಒಂದು ಪಲ್ಲಾ ಬತ್ತಕ್ಕೆ 8–10 ರೂಪಾಯಿ ಇದ್ದುದು ಈ ದಿವಸ 35 ರಿಂದ 40 ರೂಪಾಯಿಗಳಿಗೇರಿದೆ. ಸರಕಾರವೇ ಈಗ ನಿಗದಿ ಮಾಡಿರುವ ಬೆಲೆ ಇದು. ಈ ದಿವಸವಿರುವುದರದ ಪ್ರಕಾರ ಲೆಕ್ಕಹಾಕಿದರೆ ಸರಾಸರಿ ಒಂದು ಎಕರೆಯಲ್ಲಿ 400 ರೂಪಾಯಿಗಳ ಉತ್ಪತ್ತಿ ಇದ್ದರೆ ಶೇಕಡ 4 ರಂತೆ 16 ರೂಪಾಯಿ ಕಂದಾಯ ಹಾಕಬೇಕಾಗುತ್ತದೆ. ಈಗ ಒಂದು ರೂಪಾಯಿ ಕಂದಾಯವಿರುವುದಕ್ಕೆ ಮುಂದೆ ಮೂರು ರೂಪಾಯಿ ಹೆಚ್ಚಾಗಿ ಕೊಡಬೇಕಾಗುತ್ತದೆ ಇದನ್ನು ಗಮನಿಸಿ ರೈತರಿಗೆ ಯಾವ ರೀತಿ ರಿಯಾಯಿತಿ ಯನ್ನು ಕೊಟ್ಟಿದ್ದೀರೆಂಬುದನ್ನು ಯೋಚನೆ ಮಾಡಬೇಕು. ಈಗ ಗ್ರಾಸ್ ಇನ್‌ಕಂ ಮೇಲೆ ಕಂದಾಯ

ಹಾಕುತ್ತಿದ್ದೀರಿ. ರೈತರ ವ್ಯವಸಾಯದ ಖರ್ಚೇನು ಎಂದು ನೋಡಿ ಅವರಿಗೆ ಉಳಿಯುವ ನಿವ್ವಳ ಆದಾಯದ ಮೇಲೆ ಕಂದಾಯ ನಿಗದಿ ಮಾಡುವುದಾದರೆ ನಾವು ಅದಕ್ಕೆ ಸಮ್ಮತಿ ಕೊಡುತ್ತೇವೆ. ಇದನ್ನೇಕೆ ಹೇಳುವುದೆಂದರೆ, ಈಗ ಉತ್ಪತ್ತಿ ಮಾಡಲು ಖರ್ಚು ಹೆಚ್ಚಿದೆ. ರೈತನು ಕೊಳ್ಳುವ ವ್ಯವಸಾಯದ ಉಪಕರಣಗಳ ಬೆಲೆ ಎಷ್ಟು ಏರಿದೆ. ವ್ಯವಸಾಯದ ಕೂಲಿಗಾಗಿ ಎಷ್ಟು ಖರ್ಚಾಗುತ್ತದೆ ಎಂದು ನೋಡಿ ಉಳಿಯುವ ನಿವ್ವಳ ಆದಾಯದ ಮೇಲೆ ಕಂದಾಯ ನಿಗದಿ ಮಾಡುವುದು ಸರ್ವಸಮ್ಮತವಾದುದು ಎಂದು ತಿಳಿಸುತ್ತೇನೆ. ಬಾಯಿದ್ದವನು ಬರದಲ್ಲಿ ಗೆದ್ದ ಎಂದು ಒಂದು ಗಾದೆ ಇದೆ, ಶ್ರೀಯುತರ ಗಳಾದ ಬಸಪ್ಪನವರು, ಅಪ್ಪಣ್ಣನವರು ಮುಂತಾದವರ ಕಾಫಿ ತೋಟಗಳಿಗೆ, ಟೀ ತೋಟಗಳಿಗೆ ರಿಯಾಯಿತಿಬೇಕು, ಮಲ್ಬರಿ ತೋಟಕ್ಕೆ ರಿಯಾಯಿತಿಬೇಕು, ಅದಕ್ಕಾಗಿ ಪಕ್ಷದಲ್ಲಿ ವಾದಿಸಿ ತಿದ್ದುಪಡಿ ತರಲು ಅವರು ಪ್ರಯತ್ನ ಮಾಡಿದ್ದಾರೆ. ಖುಷ್ಕಿ ಜಮೀನಿರುವ ರೈತರ ಪರಿಸ್ಥಿತಿ ಹೇಗಿವೆ, ರೂರಲ್ ಕ್ರೆಡಿಟ್ ಹೇಗಿದೆ ಎಂದು ಸರ್ವೆಮಾಡಿ, ರೈತರ ಆರ್ಥಿಕ ಪರಿಸ್ಥಿತಿ ಹೇಗಿದೆಯೆಂದು ನೋಡಿ ಆ ಮೇಲೆ ಯಾವ ಮಟ್ಟದಲ್ಲಿ ಕಂದಾಯ ಹೆಚ್ಚಿಸಬೇಕೆಂದು ಯೋಚಿಸಿ ಸರ್ವೆ ಸೆಟ್ಲ್‌ಮೆಂಟ್ ವರದಿಯನ್ನು ಸಭೆಯ ಮುಂದೆ ತಂದರೆ ಸ್ವಾಗತ ಮಾಡಬಹುದು. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಮಾತನಾಡುವಾಗ ರೈತರಿಗೆ ತಮ್ಮ ಹೆಂಡತಿಗೆ ವರ್ಷಕ್ಕೊಂದು ಸಲ ಬಟ್ಟೆ ತೆಗೆದುಕೊಡುವುದಕ್ಕೆ ಎಷ್ಟೋ ಕಷ್ಟವಿದೆ ಎಂದು ಹೇಳಿದರು. ಈ ದಿವಸ ತಾವು ಹಳ್ಳಿಗಾಡಿ ವರ ಕಷ್ಟವನ್ನರಿತಿದ್ದರೆ ಈ ತಿದ್ದುಪಡಿ ಮಸೂದೆಯಲ್ಲಿ ಗ್ರಾಸ್ ಇನ್‌ಕಂ ಎಂದಿರುವುದನ್ನು ಬದಲಾಯಿಸಿ ನೆಟ್ ಇನ್‌ಕಂ ಎಂದು ಮಾಡಿ ಜನರಿಗೆ ಅನುಕೂಲವಾಗುವಂತೆ ತರಬೇಕು. ಇನ್ನೊಂದು ವಿಷಯವನ್ನು ಹೇಳಿ ನನ್ನ ಮಾತನ್ನು ಪೂರೈಸುತ್ತೇನೆ. ಈ ದಿವಸ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಇದೆ. ಅದು ಇರುವಾಗ ಯಾವ ಆಧಾರದ ಮೇಲೆ ರೈತರಿಗೆ ಎರಡು ತೆರಿಗೆ ಹಾಕುತ್ತೀರಿ ! ಇದರಿಂದ ಭೂಮಿ ಇರುವವರಿಗೆ ಎಷ್ಟು ಹೊರೆಯಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಏಕೆ ಹೀಗೆ ಎರಡು ವಿಧವಾದ ತೆರಿಗೆ ಹಾಕುತ್ತಿದ್ದಾರೆಂಬು ಅರ್ಥವಾಗುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್ (ಕಾರ್ಮಿಕ, ವಸತಿ ಮತ್ತು ಸಾರಿಗೆ ಶಾಖೆಯ ಮಂತ್ರಿಗಳು).—ಹಾಗಾದರೆ ಎಲ್ಲವನ್ನೂ ಬಿಟ್ಟು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕುವುದನ್ನು ಒಪ್ಪುತ್ತೀರಾ ?

(ಒಪ್ಪುತ್ತೇವೆಂದು ವಿರೋಧ ಪಕ್ಷದ ಅನೇಕರು ಹೇಳಿದರು)

ಶ್ರೀ ಎಚ್. ಡಿ. ದೇವೇಗೌಡ.—ವೈಯಕ್ತಿಕವಾಗಿ ಹೇಳುವುದಾದರೆ ಸರಕಾರದ ವತಿಯಿಂದ ಬಂದ ಉತ್ತರಕ್ಕೆ ನನ್ನ ಸ್ವಾಗತ ಸಂಪೂರ್ಣವಾಗಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ನಾಳೆ ಅದಕ್ಕೆ ಲೆಕ್ಕಪತ್ರ ಇಡಬೇಕೆಂದು ಗಲಾಟೆ ಮಾಡುತ್ತೀರಿ.

ಶ್ರೀ ಎಚ್. ಡಿ. ದೇವೇಗೌಡ.—ಜತ್ತಿ ಸಮಿತಿ ವರದಿಯ ಪ್ರಕಾರ ನಮ್ಮ ದೇಶದಲ್ಲಿ ಶೇಕಡ 85 ರಷ್ಟು ಸಣ್ಣ ಹಿಡುವಳಿಗಳಿವೆ. ಐದು ಎಕರೆಗೆ ಒಳಪಟ್ಟಿರುವವರು 3,200ರ ಮೇಲಿಲ್ಲ. ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸಿನಿಂದ ಶೇಕಡ 85 ಜನರಿಗೆ ರಿಯಾಯಿತಿ ಇದೆ. ಇನ್ನು ಶೇಕಡ 15 ಜನ ಹೆಚ್ಚು ಜಮೀನಿರುವವರಿಗೆ ತೆರಿಗೆ ಹಾಕುವುದಕ್ಕೆ ವಿರೋಧಿಸುವುದಿಲ್ಲ. ಈ ಮಸೂದೆಯನ್ನು ವಾಪಸು ತೆಗೆದುಕೊಂಡು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕಬಹುದು. ಈಗಾಗಲೆ ಯಾವ ದೇಶದಲ್ಲಿ ಕಂದಾಯ ವಜಾ ಮಾಡಿದ್ದಾರೆಂದು ಶ್ರೀ ಜಿ. ವಿ. ಗೌಡರು ಹೇಳಿದರು. ಬರ್ಮಾದಲ್ಲಿ ಕಂದಾಯ ವಜಾ ಮಾಡಿದ್ದಾರೆಂದು ಪತ್ರಿಕೆಯಲ್ಲಿ ಓದಿದ್ದೇನೆ. ಇಂಥ ಸನ್ನಿವೇಶದಲ್ಲಿ ಇನ್ನೊಂದು ದೇಶದೊಡನೆ ಹೋಲಿಕೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳುವ ವಾದ ಸರಿಯಲ್ಲ. ಮಂತ್ರಿಗಳಿಗೆ ರೈತರ ಮೇಲೆ ಕರುಣೆ ಇದೆ, ಸುಮಾರು 8-10 ದಿವಸಗಳಿಂದ ಈ ವಿಷಯ ಚರ್ಚೆಮಾಡುವಾಗ ಅವರು ಹೇಳಿದ್ದಾರೆ. ಆದರೂ ಕೂಡ ರೈತರಿಗೆ ಸಾಕಾದಷ್ಟು ಅನುಕೂಲವಾಗಿಲ್ಲ. ಆದುದರಿಂದ ಗ್ರಾಸ್ ಇನ್‌ಕಂ ಎಂದಿರುವುದನ್ನು ತೆಗೆದು ನೆಟ್ ಇನ್‌ಕಂ ಎಂದು ತಿದ್ದುಪಡಿ ಮಾಡಬೇಕೆಂದು ಸೂಚಿಸಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ) —ಸ್ವಾಮಿ, ಮಾನ್ಯ ಸದಸ್ಯರಾದ ಗಾಂಜಿ ವೀರಪ್ಪನವರು ಮತ್ತು ಸಿ. ಆರ್. ಬಸಪ್ಪನವರು ಸಣ್ಣ ಹಿಡುವಳಿದಾರರಿಗೆ ಕಂದಾಯದ ರಿಯಾಯಿತಿ ಇರಬೇಕು, ಜಾಸ್ತಿ ಮಾಡಬಾರದು ಎಂಬುದಾಗಿ ಹೇಳಿದರು. ಆದರೆ ಈಗ ಶೇಕಡ 4ರಷ್ಟು ವಸೂಲು ಮಾಡಬೇಕೆಂದು ತಿದ್ದುಪಡಿಯನ್ನು ತಂದಿದ್ದಾರೆ. ಸಣ್ಣ ಹಿಡುವಳಿದಾರರಿಗೆ ಈಗ ತಂದಿರುವ ತಿದ್ದುಪಡಿಯಲ್ಲಿ ಯಾವ ರಿಯಾಯಿತಿಯೂ ಇಲ್ಲ. ಲ್ಯಾಂಡ್ ರೆವೆನ್ಯೂ ಆಕ್ಟಿನಲ್ಲಿ ಶೇಕಡ ಆರೂಕಾಲು ಇದ್ದುದನ್ನು ಸೇಕಡ 4 ಕ್ಕೆ ಇಳಿಸಲು ಅವಕಾಶವಿರುವುದಲ್ಲದೆ ಸಣ್ಣ ಹಿಡುವಳಿದಾರರಿಗೆ ವಿನಾಯಿತಿ ಕೊಡುವುದಕ್ಕೂ ಅವಕಾಶವಿದೆ. ಕಾಂಗ್ರೆಸ್ ಪಕ್ಷದವರು ಸಮಾಜವಾದಿ ಧೋರಣೆಯನ್ನು ಭಾಷಣಗಳಲ್ಲಿ ಮಾತ್ರ ಇಟ್ಟುಕೊಂಡಿದ್ದಾರೆ. ಅವರು ಸೂಚಿಸುತ್ತಿರುವುದು ಬರೀ ಲಿಪ್ ಸಿಂಪತಿ, ಬೂಟಾಟಿಕೆಯ ರೂಪದಲ್ಲಿ ಅವರು ವರ್ತಿಸುತ್ತಿದ್ದಾರೆಯೇ ವಿನಾ ಬಡಜನರ ಬಗ್ಗೆ ಅವರಿಗೆ ನಿಜ

(ಶ್ರೀ ಪಿ. ವೆಂಕಟಗಿರಿಯಪ್ಪ)

ವಾಗಿಯೂ ಕನಿಕರವಿಲ್ಲ. ವಿರೋಧಪಕ್ಷದ ಎಲ್ಲ ಸದಸ್ಯರು ಮತ್ತು ಕಾಂಗ್ರೆಸ್ಸಿನ ಕೆಲವರು ಸಣ್ಣ ಹಿಡುವಳಿದಾರರಿಗೆ ರಿಯಾಯಿತಿ ಕೊಡಬೇಕು ಎಂದು ಎಷ್ಟೋ ಒತ್ತಾಯ ಮಾಡಿದರೂ ಕೂಡ ಸಮಾಜ ವಾದಿಗಳು ಸ್ವಲ್ಪವೂ ಯೋಚನೆಮಾಡದೆ ತತ್ವಶಃ ಅದನ್ನು ಒಪ್ಪಿದರೂ ಮಾಡುವುದಕ್ಕೆ ಕಷ್ಟವಿದೆ ಎಂದು ಹೇಳುತ್ತಾರೆ. ನಾನು ಗಾಂಜಿ ವೀರಪ್ಪನವರಿಗೆ ಮತ್ತು ಬಸಪ್ಪನವರಿಗೆ ಹೇಳುವುದಿಷ್ಟೆ: ಈ ಬೂಟಾಟಿಕೆ ಬೇಡ, ವಿನಾಯಿತಿ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ನಿಜವಾಗಿಯೂ ಕೂಡ ಸಣ್ಣ ಹಿಡುವಳಿದಾರರಿಗೆ ಕಡಮೆಮಾಡುವುದು ನ್ಯಾಯವೆಂಬುದನ್ನು ಒಪ್ಪಿದ್ದರೆ, ಆ ತತ್ವದಲ್ಲಿ ನಂಬಿಕೆ ಇದ್ದರೆ ಹಾಗೆ ಮಾಡಲು ಆಸಕ್ತಿ ವಹಿಸಬಹುದಾಗಿತ್ತು. ಪಕ್ಷದ ಮೀಟಿಂಗಿನಲ್ಲಿ ಪಂಚಾಯಿತಿ ಮಾಡಿದರೆಂದು ಹೇಳಿದರು. ಅಲ್ಲೇಕೆ ಇದನ್ನು ಯೋಚನೆಮಾಡಲಿಲ್ಲ? ಸಣ್ಣ ಹಿಡುವಳಿ ದಾರರಿಗೆ ಕಡಮೆಮಾಡಬೇಕೆಂದು ಪಕ್ಷದ ಸಭೆಯಲ್ಲಿ ತೀರ್ಮಾನ ಮಾಡಬಹುದಾಗಿತ್ತು.

ಮಾನ್ಯ ರೆವೆನ್ಯೂ ಮಂತ್ರಿಗಳು, ತಿದ್ದುಪಡಿ ಮಸೂದೆಯಿಂದ ಕಂದಾಯವನ್ನು ಕಡಮೆ ಮಾಡುವುದಕ್ಕೆ ಅವಕಾಶವಾಗುತ್ತದೆಂದು ತಿಳಿಸುತ್ತಿದ್ದರು. ಕೆಲವು ಪತ್ರಿಕೆಗಳಲ್ಲಿ ಕೂಡ ಕಂದಾಯ ವನ್ನು ಕಡಮೆ ಮಾಡುವುದಕ್ಕೆ ಪರಿಶೀಲಿಸುತ್ತಿದ್ದಾರೆ ಎಂದು ಬಂದಿದೆ. ಪತ್ರಿಕೆಗಳಲ್ಲಿ ಬಂದುದನ್ನು ನೋಡಿ ಮೊದಲು ಇದ್ದುದಕ್ಕಿಂತ ಕಡಮೆ ಮಾಡುತ್ತಾರೆ ಎಂದು ನನಗನ್ನಿಸಿತು. ಇವರ ಉದ್ದೇಶ ವೇನೆಂದರೆ ಜಾಸ್ತಿ ಮಾಡುತ್ತೇವೆಂದು ಏನು ಹೇಳಿದ್ದರೋ ಅದರಲ್ಲಿ ಸ್ವಲ್ಪ ಕಡಮೆ ಮಾಡುತ್ತೇವೆ ಎಂದು. ಕಂದಾಯವನ್ನು ಕಡಮೆ ಮಾಡುವ ಉದ್ದೇಶ ಇವರಿಗೆ ಇರುವ ಹಾಗೆ ಕಾಣುವುದಿಲ್ಲ. ಕೆಲವು ಸ್ನೇಹಿತರು ಹೇಳಿದ ಹಾಗೆ ಕಾಫಿ ಪ್ಲಾಂಟರುಗಳಿಗೆ, ಕಾಫಿ ಬೆಳೆಯುವ ಜಮೀನುಗಳಿಗೆ ಮತ್ತು ಇತರ ಪ್ಲಾಂಟೇಷನ್‌ಗಳಿಗೆ, ಒಟ್ಟು ವರಮಾನದ ಶೇಕಡ ಒಂದರಷ್ಟು ಕಂದಾಯ ಹಾಕಿದ್ದಾರೆ. ಇದರಿಂದ ಪ್ಲಾಂಟೇಷನ್ ಮಾಲೀಕರಿಗೆ ಸರ್ಕಾರದಲ್ಲಿ ಹೆಚ್ಚು ಪ್ರಭಾವ ಇದೆ ಎನ್ನುವುದು ಸ್ಪಷ್ಟ ವಾಗುತ್ತದೆ.

5-00 P.M.

ಶ್ರೀ ಎಂ. ವಿ. ಕೃಷ್ಣಪ್ಪ.—ಕೇರಳದ ಕಾಫಿ ತೋಟಗಳಲ್ಲಿ ನಾವು ಹಾಕಿರುವುದರ ಐದನೆಯ ಒಂದು ಭಾಗವನ್ನು ಕೂಡ ಹಾಕಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಕೇರಳದಲ್ಲಿರುವವರೂ ನಿಮ್ಮ ಅಣ್ಣತಮ್ಮಂದಿರು ತಾನೇ ಈಗ ಅಲ್ಲಿ ಯಾವ ಸರ್ಕಾರವೂ ಇಲ್ಲ. ರಾಷ್ಟ್ರಾಧ್ಯಕ್ಷರ ಆಡಳಿತ ಇದೆ.

ಕಾಫಿ ತೋಟದಲ್ಲಿ ಬರುವ ಆದಾಯವೇನು, ಅಲ್ಲಿ ಮಳೆ ಬೀಳುವುದು ಏನು? ವರ್ಷಕ್ಕೆ 20—22 ಅಂಗುಲ ಮಳೆ ಬಿದ್ದು ರಾಗಿ, ಹುರುಳಿ ಬೆಳೆಯುವ ಜಮೀನುಗಳಿಗೆ ಒಟ್ಟು ಉತ್ಪತ್ತಿಯ ಮೇಲೆ ಸೇಕಡ ನಾಲ್ಕರಷ್ಟು ಕಂದಾಯವನ್ನು ಕೊಡಬೇಕು. ಇದರಲ್ಲಿ ಏನು ನ್ಯಾಯವಿದೆ? ಇಷ್ಟು ಚರ್ಚೆ ಮಾಡಿ ರೈತರಿಗೆ ದೊರೆತ ಪರಿಹಾರ ಇಷ್ಟು ಮಾತ್ರವೇ? ನನಗೆ ಕಾಣುವುದು ಏನು ಎಂದರೆ ಕಾಂಗ್ರೆಸ್ ಪಕ್ಷವಲ್ಲಿ ನ್ಯಾಯ, ನೀತಿಗೆ ಏನೇನೂ ಅವಕಾಶವಿಲ್ಲ? ಯಾರು ಗಲಾಟೆ ಮಾಡು ತ್ತಾರೆಯೋ, ಯಾರಿಗೆ ಸರ್ಕಾರದ ಮೇಲೆ ಹೆಚ್ಚು ಪ್ರಭಾವವಿದೆಯೋ ಅವರು ಹೇಳಿದ್ದಕ್ಕೆ ಹೊಂದಿ ಕೊಂಡು ಕೆಲವು ವರ್ಷ 27 ಜನ ಒಟ್ಟಿಗೆ ಮಂತ್ರಿಗಳಾಗಿ ಕಾಲ ಹಾಕಿಕೊಂಡು ಹೋಗೋಣ ಎನ್ನುವ ಉದ್ದೇಶ ಇದ್ದ ಹಾಗೆ ಕಾಣುತ್ತದೆ. ಸರ್ವೆ ಸೆಟಲ್‌ಮೆಂಟ್ ಬಹಳ ವೈಜ್ಞಾನಿಕವಾಗಿದೆ ಎಂದು ಹೇಳಿದರು. ಒಂದು ಕಡೆ ಸೇಕಡ ನಾಲ್ಕರಷ್ಟು, ಇನ್ನೊಂದು ಕಡೆ ಸೇಕಡ ಒಂದರಷ್ಟು ಕಂದಾಯ ಎಂದು ಮಾಡಿರುವುದು ವೈಜ್ಞಾನಿಕವಾಗಿದೆಯೇ? ಇದರಲ್ಲಿ ಯಾವ ವಿಧವಾದ ನ್ಯಾಯವೂ ಇಲ್ಲ, ತೀರ ಅನ್ಯಾಯವಾಗಿದೆ. ಮುಖ್ಯವಾಗಿ ಸಣ್ಣ ಹಿಡುವಳಿದಾರರಿಗೆ ರಿಯಾಯಿತಿಯನ್ನು ಕೊಟ್ಟಿಲ್ಲ. ಸಮಾಜವಾದಿ ಸರ್ಕಾರ ಕಟ್ಟುವ ನೀತಿಯೆಂದು ಏನು ಹೇಳುತ್ತಾರೆಯೋ ಅದಕ್ಕೆ ವಿರುದ್ಧವಾಗಿದೆ, ಸಾಮಾನ್ಯ ಜನರ ವಿರುದ್ಧವಾಗಿದೆ ಎಂದು ಹೇಳಬಯಸುತ್ತೇನೆ ಸ್ವಾಮಿ.

(The Hon'ble Revenue Minister was called upon to reply and several members rose).

Sri V. S. PATIL (Belgaum I).—My objection is that during these 2 or 3 hours, the Hon'ble members who spoke referred to the Report, the quantum of assessment, etc., and none of them referred to the provisions of this Bill. I fail to understand how the Chair allowed these members to go aside from the provisions of this Bill.

Mr. DEPUTY SPEAKER.—They come in incidentally.

Sri V. S. PATIL.—How can they come in incidentally ? You have allowed all these members to refer to the Report which is completely irrelevant so far as the provisions of this Bill are concerned.

Mr. DEPUTY SPEAKER.—The Hon'ble member was also in the House then and he did not object to it then.

Sri V. S. PATIL.—How can I object ? It is the duty of the Chair to pull up members when they go astray.

Mr. DEPUTY SPEAKER.—The Bill has to be passed by 5-30. P.M.

Sri V. S. PATIL.—If the Bill is to be passed by 5-30 P.M., I have no objection. I should however protest and as a protest I walk out.

ಶ್ರೀ ಎಸ್. ಶಿವಪ್ಪ.—ಈ ಮಸೂದೆ ಬಹಳ ಪ್ರಾಮುಖ್ಯವಾದುದು. ಇದರ ಮೇಲೆ ಮಾತನಾಡುವುದಕ್ಕೆ ಸದಸ್ಯರಿಗೆ ಸಾಕಷ್ಟು ಅವಕಾಶವನ್ನು ಕೊಡಬೇಕಾಗಿದೆ. ಯಾವ ಸದಸ್ಯರೇ ಆಗಲಿ ಇದರ ಮೇಲೆ ತಮ್ಮ ಅಭಿಪ್ರಾಯವನ್ನು ಕೊಡುವ ಹಕ್ಕನ್ನು ಹೊಂದಿರುತ್ತಾರೆ. ಸರ್ಕಾರದವರು ಇದರ ಚರ್ಚೆಗೆ ಕಾಲವನ್ನು ಕೊಡದೆ ಇದ್ದಾರೆ. ಅದನ್ನು ಪ್ರತಿಭಟನೆ ಮಾಡಿ ಮಂತ್ರಿಗಳು ಉತ್ತರ ಕೊಡತಕ್ಕ ಕಾಲದಲ್ಲಿ ಸಭೆಯಲ್ಲಿ ಹಾಜರಿಲ್ಲದೆ ನಾವು ಸಭಾತ್ಯಾಗ ಮಾಡುತ್ತೇವೆ.

(ಅನೇಕ ವಿರೋಧಪಕ್ಷದ ಸದಸ್ಯರು ಸಭೆಯಿಂದ ಹೊರಗೆ ಹೋದರು).

† ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ವಿ. ಎಸ್. ಪಾಟೀಲರು ಹೇಳಿದ ಹಾಗೆ ಮಸೂದೆಗೆ ಸಂಬಂಧಪಟ್ಟ ಹಾಗೆ ಯಾವ ಸದಸ್ಯರೂ ಮಾತನಾಡಲಿಲ್ಲ. ಅದು ಅವರ ತಪ್ಪೇ ವಿನಾ ಸರ್ಕಾರದವರ ತಪ್ಪಲ್ಲ. ಮಾನ್ಯ ಸದಸ್ಯರು ಯಾರೂ ಮಸೂದೆಯ ವಿಷಯ ಸರಿಯಾಗಿ ಹೇಳಲಿಲ್ಲ. ಇದರಲ್ಲಿರುವುದು ಎರಡೇ ವಿಷಯ. ಮೊದಲನೆಯದು ಸೇಕಡ ಆರೂಕಾಲು ಎಂದು ಇದ್ದುದನ್ನು ಎಲ್ಲ ಜಮೀನುಗಳಿಗೂ ಸೇಕಡ ನಾಲ್ಕಕ್ಕೆ ಇಳಿಸುವುದು ಮತ್ತು ಪ್ಲಾಂಟೇಷನ್‌ಗಳ ಸಂಬಂಧದಲ್ಲಿ ಸೇಕಡ ಒಂದಕ್ಕೆ ಇಳಿಸುವುದು ಮತ್ತು ಇದೇ ಕಂದಾಯದ ವರ್ಷದಿಂದ ಜಾರಿಗೆ ತರುವುದು ಮತ್ತು ಕೆಲವು ಅಚ್ಚು ದೋಷಗಳನ್ನು ಸರಿಪಡಿಸುವುದು. ಮಾನ್ಯ ಸದಸ್ಯರು ಮಾತನಾಡುವಾಗ ಇದನ್ನೆಲ್ಲ ಬಿಟ್ಟು ಬೇರೆ ವಿಷಯಗಳನ್ನು ಹೇಳಿದರು. ನಾನೂ ಕೂಡ ಇತರ ವಿಷಯಗಳನ್ನು ನಿರ್ಣಯದ ಮೇಲೆ ಮಾತನಾಡುವಾಗ ಹೇಳುತ್ತೇನೆ. ಕಂದಾಯದ ವಿಷಯ ಮತ್ತು ರೀಸೆಟಲ್‌ಮೆಂಟ್ ವಿಷಯ ಇದನ್ನೆಲ್ಲ ನಿರ್ಣಯದ ಮೇಲೆ ಮಾತನಾಡುವಾಗ ಹೇಳಬಹುದು. ನಾನು ಆ ವಿಷಯಗಳಿಗೆ ಹೋಗುವುದಿಲ್ಲ. ಶ್ರೀ ಎಸ್. ಗೋಪಾಲಗೌಡರು ಮಾತನಾಡುತ್ತ 18 ಕೋಟಿ, 20 ಕೋಟಿ, 30 ಕೋಟಿ ರೂಪಾಯಿ ಕಂದಾಯದಿಂದ ಬರುತ್ತದೆ ಎಂದು ಹೇಳಿದರು. ಇದು ಸತ್ಯಕ್ಕೆ ದೂರವಾದ ಮಾತು ಎಲ್ಲ ಬಾಬುಗಳಿಂದಲೂ ಸಿಕ್ಕುತ್ತಿರುವ ಕಂದಾಯ 3 ಕೋಟಿ 75 ಲಕ್ಷ ರೂಪಾಯಿ. ಇದರ ಮೇಲೆ ಸೆಸ್ ಸೇರಿದರೆ ನಾಲ್ಕು ಕೋಟಿ ಚಿಲ್ಲರೆ ಆಗುತ್ತದೆ. ಡ್ರೈ ಅಸೆಸ್‌ಮೆಂಟಿನಲ್ಲಿ ಈಗ ಸೇಕಡ ನಾಲ್ಕಕ್ಕೆ ಇಳಿಸಿದ್ದರಿಂದ 87 ಲಕ್ಷ ರೂಪಾಯಿ ಕಡಮೆಯಾಗುತ್ತದೆ. ಮೈಸೂರು ಸಂಸ್ಥಾನದಲ್ಲಿರುವ 280 ಲಕ್ಷ ಎಕರೆಯಲ್ಲಿ 260 ಲಕ್ಷ ಎಕರೆ ಖುಷ್ಕಿ ಜಮೀನಿದೆ. ಸಾಮಾನ್ಯವಾಗಿ ಬಡವರ ಕೈಯಲ್ಲಿರುವುದೆಲ್ಲ ಖುಷ್ಕಿ ಜಮೀನು. ಇದಕ್ಕೆ ವಿಧಿಸಿರುವುದೆಲ್ಲ ಸೇರಿದರೂ ಸೇಕಡ 40 ರಷ್ಟು ಜಾಸ್ತಿಯಾಗುವುದಿಲ್ಲ. ಇದರಿಂದ 2 ಕೋಟಿ 40 ಲಕ್ಷ ರೂಪಾಯಿ ಖುಷ್ಕಿ ಜಮೀನಿನ ಕಂದಾಯ ಇದ್ದುದು 3 ಕೋಟಿ 27 ಲಕ್ಷ ರೂಪಾಯಿ ಆಗುತ್ತದೆ, ಎಂದರೆ 87 ಲಕ್ಷ ರೂಪಾಯಿ ಮಾತ್ರ ಏರುತ್ತದೆ. ಅದನ್ನು ಲೆಕ್ಕ ಹಾಕಿದರೆ ಸೇಕಡ 40 ಕೂಡ ಆಗುವುದಿಲ್ಲ. ಕಂದಾಯ ಕೊಡುವವರು ಒಂದು ರೂಪಾಯಿ ಕೊಡುವ ಕಡೆ ಒಂದು ರೂಪಾಯಿ 40 ಪೈಸೆ ಕೊಡಬೇಕಾಗುತ್ತದೆ. ಈಗಾಗಲೇ ಅನೇಕ ಕಡೆ ಸರ್ಚಾರ್ಜ್ ಸೇರಿ ಒಂದು ರೂಪಾಯಿ 75 ಪೈಸೆ ಕೊಡುತ್ತಿದ್ದಾರೆ. ಇನ್ನು ಮುಂದೆ ಕೊಡಬೇಕಾಗುವುದು ಇದಕ್ಕಿಂತ ಕಡಮೆಯಾಗುತ್ತದೆ. ಅದೂ ಅಲ್ಲದೆ ಒಟ್ಟು ಉತ್ಪತ್ತಿಯ ಸೇಕಡ ನಾಲ್ಕರಷ್ಟು ಎಂದು ಹಾಕುವುದರಿಂದ ಅನೇಕ ಕಡೆ ಕಡಮೆ ಕೊಡಬೇಕಾಗುತ್ತದೆ. ಬಿದರೆ ಜಿಲ್ಲೆಯಲ್ಲಿ ಸೇಕಡ ಐದರಷ್ಟು ಕಡಮೆ ಆಗುತ್ತದೆ, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಡ್ರೈ ಅಸೆಸ್‌ಮೆಂಟ್‌ನಲ್ಲಿ ಸೇಕಡ 20ರಷ್ಟು ಕಡಮೆಯಾಗುತ್ತದೆ. ಸರ್ಚಾರ್ಜ್ ಅಲ್ಲದೆ ಪೂರ್ವದಿಂದಲೂ ಕೊಡುತ್ತಿದ್ದ ಅಸೆಸ್‌ಮೆಂಟಿನಲ್ಲಿ ಸೇಕಡ 20ರಷ್ಟು ಕಡಮೆಯಾಗುತ್ತದೆ. ಬೇರೆ ಜಿಲ್ಲೆಗಳಲ್ಲಿ ಸೇಕಡ 20ರಿಂದ 60ರ ವರೆಗೂ ಕಡಮೆಯಾಗುತ್ತದೆ.

(ಶ್ರೀ ಎಂ. ವಿ. ಕೃಷ್ಣಪ್ಪ)

ಒಟ್ಟು ಸೇರಿಸಿದರೆ ಖುಷ್ಕಿ ಜಮೀನಿಗೆ 2 ಕೋಟಿ 40 ಲಕ್ಷ ರೂಪಾಯಿಗಳು ಕೊಡಬೇಕಾಗಿತ್ತು. ಈಗ 3 ಕೋಟಿ 27 ಲಕ್ಷ ಇದರಿಂದ ಬರಬೇಕಾಗುತ್ತದೆ. ಶೇಕಡ 40ರಷ್ಟು ಜಾಸ್ತಿಯಾಗಿರುತ್ತದೆ. ಅನೇಕರು ಕಂದಾಯವನ್ನೇ ಕೊಟ್ಟಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಹಾಗಾದರೆ ಹಳ್ಳಿಯವರನ್ನು ತಲೆ ಹೊಡೆದು ಅವರಿಗೆ ಜಾಸ್ತಿ ಕಂದಾಯ ಹಾಕುವುದು ಸರಿಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಲೆ ಹೊಡೆದೇನೂ ಮಾಡುವುದಕ್ಕಾಗುವುದಿಲ್ಲ. ಧಾರವಾಡ, ಬೆಳಗಾಂಗಳಲ್ಲಿ ಈ ಬಗ್ಗೆ ಕೆಲವಾರು ಕಂಡೀಷನ್ನುಗಳಿವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದಕ್ಕೋಸ್ಕರ ಶೇಕಡ 4ರಷ್ಟು ತಂದಿದ್ದೀರಾ ? ಅದನ್ನು ಕೊಡುತ್ತಾ ಇರುವುದರಲ್ಲಿ ಅವರಿಗೆ ತೊಂದರೆ ಇಲ್ಲವೇ ? ಇವರ ತಲೆ ಹೊಡೆದು ಅವರಿಗೆ ಒಳ್ಳೆಯದು ಮಾಡುವುದು ಸರಿಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ನಾವು ಸೈಂಟಿಫಿಕ್ಕಾಗಿ ಹೋಗುತ್ತಿದ್ದೇವೆ. ಅವರಿಗೆ ಕಡಿಮೆ ಯಾಗುತ್ತದೆ. ಅವರು ಮೊದಲನಿಂದಲೂ ಜಾಸ್ತಿಯಾಗಿ ಕೊಡುತ್ತಿದ್ದರು. ಒಟ್ಟಿನಲ್ಲಿ ಈಗ ಡ್ರೈಲ್ಯಾಂಡ್ ಅಸೆಸ್‌ಮೆಂಟಿನಲ್ಲಿ ಮೈಸೂರಿನಲ್ಲಿ 3 ಕೋಟಿ 40 ಲಕ್ಷ ರೂಪಾಯಿಗಳು ಬರುತ್ತಿತ್ತು ಈಗ ಕಂದಾಯ ಏರಿಸುತ್ತಿರುವುದರಿಂದ 3 ಕೋಟಿ 27 ಲಕ್ಷ ರೂಪಾಯಿಗಳು ಆಗುತ್ತದೆ. ಅಂದಮೇಲೆ 87 ಲಕ್ಷ ರೂಪಾಯಿಗಳು ಜಾಸ್ತಿಯಾಗುತ್ತದೆ. It is less than 40 per cent on the whole. In some cases, it comes to zero per cent. In some cases, 70-80 per cent, but in majority of the cases less than 40 per cent. ಹೀಗೆ ಶೇಕಡ 40ರಷ್ಟು ಜಾಸ್ತಿಯಾಗುತ್ತದೆ. This is the major land revenue in Mysore State. 2 ಕೋಟಿ 60 ಲಕ್ಷ ಎಕರೆಯಷ್ಟು ಡ್ರೈಲ್ಯಾಂಡ್ ಇವೆ. ಡ್ರೈಲ್ಯಾಂಡಿಗೆ 11 ರೂಪಾಯಿ ಕೊಡುತ್ತಿದ್ದುದು ಈಗ 40 ಪೈಸೆ ಜಾಸ್ತಿ ಕೊಡಬೇಕು. ಅಧಿಕಾರದಲ್ಲಿರುವವರು ಯಾವಾಗಲೂ ಕಂದಾಯ ತೆಗೆದು ಹಾಕುತ್ತೇವೆಂದು ಅಧಿಕಾರಕ್ಕೆ ಬರುವುದಕ್ಕಿಂತ ಮುಂಚೆ ಹೇಳುವ ಪದ್ಧತಿ. ಆದರೆ ಅಧಿಕಾರಕ್ಕೆ ಬಂದಾಗ ಅದನ್ನು ಒಬ್ಬರೂ ತೆಗೆಯುವುದಿಲ್ಲ. ಏಕೆಂದರೆ ಅಭಿವೃದ್ಧಿ ಕೆಲಸ ಮಾಡಬೇಕು, ಕೆರೆಗಳನ್ನು ಕಟ್ಟಬೇಕು, ರಸ್ತೆ ಮಾಡಬೇಕು, ಜನಗಳಿಗೆ ಎಲ್ಲ ಸೌಕರ್ಯಗಳನ್ನೂ ಕೊಡಬೇಕು. ಕಂದಾಯವಿಲ್ಲದೆ ಯಾವ ಸರ್ಕಾರವೂ ಆಡಳಿತ ಮಾಡುವುದಕ್ಕಾಗುವುದಿಲ್ಲ. ರೈತನ ಹಿತದೃಷ್ಟಿಯಿಂದ ಎಲ್ಲರೂ ಸೇರಿ ಹೊಂದಾಣಿಕೆ ಮಾಡಿಕೊಂಡು ದೇಶದ ಉತ್ಪತ್ತಿಯನ್ನು ಜಾಸ್ತಿ ಮಾಡಿಕೊಳ್ಳಬೇಕು. ಈಗ ಕಂದಾಯ ಜಮೀನುಗಳ ಮೇಲೆ ಹಾಕಿ 50 ವರ್ಷಗಳಾದುವು. 30 ವರ್ಷಗಳಿಗೊಮ್ಮೆ ಕಂದಾಯ ಬದಲಾವಣೆ ಯಾಗಬೇಕು. ಅದು ಪೂರ್ವದಿಂದ ಪದ್ಧತಿ ಇದೆ. ಅನೇಕ ಕಡೆ ರಿಸೆಟಲ್‌ಮೆಂಟ್ ಆಗಿ 50 ವರ್ಷ ಗಳಾಗಿವೆ. ಕಂದಾಯ ನಿಷ್ಕರ್ಷೆಯ ಮೇಲೆ ರೈತರು ತಾವು ಎಷ್ಟು ಕೊಡಬೇಕು ಎಂಬುದಾಗಿ ಹೇಳುವ ಕಾಲ ಬಂದಿದೆ. ಪೂರ್ವದಲ್ಲಿ ರೈತರ ಮೇಲೆ ಮಾತ್ರ ಕಂದಾಯ ಹಾಕುವಂಥ ಪದ್ಧತಿ ಬರೀ ಮೈಸೂರಿನಲ್ಲಿ ಮಾತ್ರವಿರಲಿಲ್ಲ. ಎಲ್ಲಾ ಕಡೆಯೂ ಇತ್ತು. ಅಲ್ಲಿಯೂ ಕಂದಾಯವನ್ನು ವಿರೋಧ ಮಾಡುತ್ತಿದ್ದರು. ರೈತರು ಹೇಗೋ ತಮ್ಮ ಹೊಲದಲ್ಲಿ ಕೆಲಸ ಮಾಡಿಕೊಂಡು ಬರುವಂತಹ ನಿಷ್ಠೆ ಇತ್ತು. ನಮ್ಮ ಕಂದಾಯ ಸಾಮಾನ್ಯವಾಗಿ ನಮ್ಮಲ್ಲಿಯೇ ಇರುವುದಿಲ್ಲ ; ಅದನ್ನು ಪಂಚಾಯಿತಿಗಳಿಗೆ ಕೊಡುತ್ತೇವೆ. ಇದರಿಂದ ಬರತಕ್ಕ ಕಂದಾಯವನ್ನೆಲ್ಲಾ ಪೂರ್ತಿಯಾಗಿ ಪಂಚಾಯಿತಿಯವರ ಕೈಗೇ ಕೊಡುತ್ತೇವೆ. ಪಂಚಾಯಿತಿಗಳಲ್ಲಿ ರೈತರಿಗೆ ವಿಶ್ವಾಸ ಇರುವಂತಹವರನ್ನು ಆರಿಸಿಟ್ಟುಕೊಂಡು ತಮ್ಮ ಗ್ರಾಮದ ಅಭಿವೃದ್ಧಿ ಮಾಡಬೇಕು. ಆ ಬಗ್ಗೆ ಚೆನ್ನಾಗಿ ವಿಚಾರ ಮಾಡಬೇಕು. ಪಂಚಾಯಿತಿ ಎಂದರೆ, ನಮ್ಮ ಸಮಾಜದಲ್ಲಿ ಲೋಯೆಸ್ಟ್ ಯೂನಿಟ್ ಪಂಚಾಯಿತಿ ಚೇರ್‌ಮನ್ ಎಲೆಕ್ಟ್ ಆಗಿ ಬರುತ್ತಾರೆ. ಅವರಲ್ಲಿ ಏನಾದರೂ ರೈತರಿಗೆ ನಂಬಿಕೆ ಇಲ್ಲವೆಂದು ಹೇಳಿದರೆ ಅವರ ಕೈಲಿ ಹಣ ಕೊಡುವುದಕ್ಕಾಗುತ್ತದೆಯೇ ? ಅವರು ಎಲ್ಲಾ ಸೌಕರ್ಯಗಳನ್ನೂ ಮಾಡಿಕೊಡುತ್ತೇನೆಂದು ಹೇಳಿದರೆ ಹಣ ಇಲ್ಲದೆ ಅದು ಹೇಗಾಗುತ್ತದೆ. ಪಂಚಾಯಿತಿಗಳಿಗೆ, ಜಿಲ್ಲಾ ಪರಿಷತ್ತುಗಳಿಗೆ ಪೂರ್ತಿ ಹಣವನ್ನು ಕೊಡಬೇಕೆಂಬುದಾಗಿ ಈ ಆಕ್ಟಿನಲ್ಲಿ ತೀರ್ಮಾನವಾಗಿದೆ. ಕಂದಾಯದಿಂದ ಬರತಕ್ಕ ವರಮಾನ 6-7-10 ಕೋಟಿಯಾಗಲೇ ಆ ರೀತಿ ಬರುವ ಉತ್ಪತ್ತಿಯನ್ನು ಲೋಕಲ್ ಸೆಲ್ಫ್‌ಗೌರ್ನಮೆಂಟಿಗೆ ಬಹಳವಾಗಿ ಕೊಡುತ್ತೇವೆ. ತಾಲ್ಲೂಕು ಬೋರ್ಡಿಗೆ ಸ್ವಲ್ಪ ಕೊಡುತ್ತೇವೆ. ಉಳಿದುದನ್ನು ಸ್ವಲ್ಪ ಜಿಲ್ಲಾ ಪರಿಸ್ಥಿತಿಗೂ ಕೊಡುತ್ತೇವೆ. ಕಂದಾಯದ ಹಣವೆಲ್ಲಾ ಜಿಲ್ಲಾಲೆವಲ್ಲಿನಿಂದ ಬೆಂಗಳೂರು ಲೆವಲ್ಲಿಗೆ ಬರುವುದಿಲ್ಲ. ಹಳ್ಳಿಗಳ ಜನ ರಸ್ತೆ, ಸ್ಕೂಲು, ಬಾವಿ ಕಟ್ಟಿಸುವುದಕ್ಕೆ ಹಣ ಬೇಕು ಎಂದು ಕೇಳುತ್ತಾರೆ. ಗ್ರಾಮದಲ್ಲಿ ಬಡವರೂ ಇರುತ್ತಾರೆ. ಆದರೂ ಗ್ರಾಮಗಳಲ್ಲಿ ದೇವರ ಕೆಲಸ, ಊರಹಬ್ಬ, ಊರಿನ ಕಾರ್ಯ ಇತರ ಹಬ್ಬ, ಹುಣ್ಣಿಮೆಗಳು ಹೀಗೆ ಅನೇಕ ಕೆಲಸ ಕಾರ್ಯಗಳು ನಡೆಯು

ಬೇಕಾದಾಗ ಅದಕ್ಕಾಗಿ ಗ್ರಾಮಗಳಲ್ಲಿ ಜನರಿಂದ ಚಂದಾ ಎತ್ತಿ ಆ ಕಾರ್ಯಗಳನ್ನು ಮಾಡುತ್ತಾರೆ. ಹಾಗೆಯೇ ಸರ್ಕಾರ ಅವರಿಗಾಗಿ ಮಾಡತಕ್ಕ ಅಭಿವೃದ್ಧಿ ಕಾರ್ಯಗಳಿಗೆ ಹಣ ಬೇಕಾಗುತ್ತದೆ. ಹೀಗಿರುವಾಗ ಕಂದಾಯವಿಲ್ಲದೆ ರಾಜ್ಯವನ್ನು ಆಳುತ್ತೇನೆಂದರೆ ಹೇಗೆ? ಯಕ್ಷಿಣಿ ಮಾಡಿ ದುಡ್ಡು ತರಲು ಸಾಧ್ಯವೆ?

ಶ್ರೀ ಎಸ್. ಶಿವಪ್ಪ.—ಕಂದಾಯ ಈಗ ವಸೂಲು ಮಾಡುವುದಕ್ಕೆ ಎಷ್ಟು ಖರ್ಚು ಮಾಡುತ್ತೀರಿ?

ಶ್ರೀ ಎಂ. ವಿ. ಕೃಷ್ಣಪ್ಪ.—ವಸೂಲು ಮಾಡುವುದಕ್ಕೆ ಏನೂ ಖರ್ಚಿಲ್ಲ. ರೆವಿನ್ಯೂ ಇಲಾಖೆ ಇರುವುದು ಅದೇ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಭೂಮಿಗೆ ಸಂಬಂಧಪಟ್ಟ ರಿಕಾರ್ಡುಗಳನ್ನು ಇಡುವುದು, ರೈತರಿಗೆ ಬೇಕಾದ ಅನುಕೂಲಗಳನ್ನು ಕಲ್ಪಿಸುವುದು, ಸಾಲಸೋಲಗಳನ್ನು ಕೊಡುವುದು, ಕಂದಾಯ ವಸೂಲು ಮಾಡುವುದು, ಹೀಗೆ ರೈತರಿಗೆ ಸಂಬಂಧಪಟ್ಟ ಕೆಲಸ ಕಾರ್ಯಗಳಲ್ಲಿಯೇ ನಿರತವಾಗಿರುತ್ತದೆ. ಆದ್ದರಿಂದ ರೆವಿನ್ಯೂ ಇಲಾಖೆಗೆ ಖರ್ಚು ಮಾಡುವುದು ಕಂದಾಯ ವಸೂಲಿಗಾಗಿ ಎಂಬುದಾಗಿ ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ರೈತರು ಒಗ್ಗಟ್ಟಾಗಿ ನಿಂತು ದೇಶದ ಹಿತದೃಷ್ಟಿಯಿಂದ ಕಂದಾಯ ರೂಪದಲ್ಲಿ ಬೇಕಾದಷ್ಟು ಹಣವನ್ನು ಕೊಡಬೇಕು ಎಂದು ಹೇಳುವಾಗ, ಅದೇ ದೃಷ್ಟಿಯಿಂದ ಪಟ್ಟಣದಲ್ಲಿರುವವರು, ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿಸಿ ಬೇಕಾದಷ್ಟು ಹಣವನ್ನು ಮಾಡಿಟ್ಟು ಕೊಂಡಿರುವವರೂ ಮಾಡಬಾರದೆ? ಅಂತಹವರ ಮೇಲೆ ಏಕೆ ಈ ಸರ್ಕಾರದ ದೃಷ್ಟಿ ಬಿದ್ದಿಲ್ಲ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ದೇಶದಲ್ಲಿ ಅಂತಹವರೂ ಸಹ ಬಹಳ ದಿನ ಉಳಿಯುವುದಿಲ್ಲ.

ಶ್ರೀ ಎಸ್. ಶಿವಪ್ಪ.—ಅವರ ಮೇಲೆ ಇವರ ಕೃಪಾದೃಷ್ಟಿ ಬಿದ್ದಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಜನರ ಆಸ್ತಿಪಾಸ್ತಿಯನ್ನು ನೋಡಿ ಹೇಳುವುದಾದರೆ it is just the question of postponing their doomsday ultimately. ನಾನು ಪ್ರಪಂಚವನ್ನೆಲ್ಲಾ ತಿರುಗಿ ತಿಳಿದುಕೊಂಡು ಬಂದು ಇಲ್ಲಿ ಹೇಳುತ್ತಿದ್ದೇನೆ. ಎಲ್ಲಾ ದೇಶಗಳನ್ನೂ ನೋಡಿಕೊಂಡು ಬಂದಿರುವುದರಿಂದ ಹೇಳುತ್ತಿದ್ದೇನೆ. ಈ ಪಟ್ಟಭದ್ರಹಿತಗಳು ಭದ್ರವಾಗಿ ಇರುತ್ತದೆಯೆಂಬುದಾಗಿ ಯಾರಾದರೂ ಮಾನ್ಯ ಸದಸ್ಯರು ಮನಸ್ಸಿನಲ್ಲಿಟ್ಟುಕೊಂಡದ್ದರೆ ಅದು ಸತ್ಯಕ್ಕೆ ದೂರವಾದ ಮಾತಾಗುತ್ತದೆ. ಬಹಳ ದಿನಗಳು ಇರುವುದಿಲ್ಲ 10-15 ವರ್ಷಗಳವರೆಗೂ ಮೋಸ ಮಾಡಿದರೂ ಕೂಡ ಅದು ಒಂದಲ್ಲ, ಒಂದು ದಿನ ಹೋಗಲೇಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದು ತಮಗೂ ಅನ್ವಯಿಸುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ನಮಗಿಂತಲೂ ಹೆಚ್ಚಾಗಿ ಅವರು ರೈತರ ಪ್ರತಿನಿಧಿಗಳು ಎಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು. ನಾವೂ ಕೂಡ ರೈತರಲ್ಲಿ ಓಡಾಡುತ್ತಿದ್ದೇವೆ. ಇವರು ನಮ್ಮ ಮೇಲೆ ಎಷ್ಟು ಅಪಪ್ರಚಾರ ಮಾಡಿದರೂ ಚುನಾವಣೆ ಕಾಲದಲ್ಲಿ ನಾವು ಜನಗಳಿಗೆ ವಿಷಯಗಳನ್ನು ತಿಳಿಸಿದ ನಂತರ ನಮ್ಮ ಮೇಲೆ ವಿಶ್ವಾಸ ಬೆಳೆದುಬಿಡುತ್ತವೆ. ನಾವು ಹೇಳುವುದು ನಿಜ ಎಂದು ಜನ ಒಪ್ಪಿಕೊಳ್ಳುತ್ತಾರೆ. ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಹೇಳಿದರು. ನಿಜ ಅವನ್ನೂ ಸಹ ಒಪ್ಪಿಕೊಳ್ಳುತ್ತೇನೆ. ಒಟ್ಟಿನಲ್ಲಿ ಇಷ್ಟೇ ಮದ್ರಾಸ್ ಮತ್ತು ಆಂಧ್ರದಲ್ಲಿ ರೈತ ಏನು ಕಂದಾಯ ಕೊಡುತ್ತಿದ್ದಾನೆ ಎಂಬ ಬಗ್ಗೆ ವಿರೋಧಪಕ್ಷದವರು ಈಗಾಗಲೇ ಮಾತನಾಡಿದರು. ಅನಂತಪುರದಿಂದ ಹಿಂದೂಪುರಕ್ಕೆ 40 ಮೈಲಿಗಳಿವೆ. ಒಂದು ಎಕರೆ ಖುಷ್ಕಿಗೆ ಎಷ್ಟು ಕಂದಾಯ ಕೊಡುತ್ತಾರೆ, ತಮಿಳುನಾಡಿನಲ್ಲಿ ಗದ್ದೆಗೆ ಎಷ್ಟು ಕಂದಾಯ ಕೊಡುತ್ತಾರೆಂಬುದನ್ನು ನೋಡಿ. ಆದರೆ ಕಂದಾಯ ವಿಧಿಸುವುದೇ ಬೇಡವೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಇದರ ಅರ್ಥವೇನು? ಈಗ ನಾವು ಹಾಕಿರುವ ಡ್ರೈಲ್ಯಾಂಡ್ ರೇಟ್ಸ್ ಆಂಧ್ರಕ್ಕೂ ತಮಿಳುನಾಡಿಗೂ ಕಡಿಮೆ ಬೇಕಾದರೆ ನಾನು ಚಾಲೆಂಜ್ ಮಾಡುತ್ತೇನೆ. ಅಂಕಿ ಅಂಶಗಳೂ ಇವೆ. ಹೊಸೂರು 25 ಮೈಲಿ ದೂರದಲ್ಲಿದೆ. ಸೇಲಂ ಜಿಲ್ಲೆಯವರಿಗಿಂತಲೂ ನಾವು ಹೆಚ್ಚಿಗೆ ಕಂದಾಯ ಹಾಕುತ್ತಿಲ್ಲ.

Sri S. SIVAPPA.—What is the irrigation potential?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಕಡೆ ಇರುವುದಕ್ಕೂ ಈ ಕಡೆ ಇರುವುದಕ್ಕೂ ಏನೂ ವ್ಯತ್ಯಾಸವಿಲ್ಲ. ಅಲ್ಲಿ ನಮಗಿಂತಲೂ ಶ್ರೇಷ್ಠವಾದ ಭೂಮಿ ಉಳ್ಳವರು, ಅವರು ಡೆಲ್ಟಾದಲ್ಲಿರುವವರು.

ಈಗ ನಾವು ವಿಧಿಸಿರತಕ್ಕ ಕಂದಾಯ ಅಷ್ಟೇನೂ ಹೆಚ್ಚಾಗಿಲ್ಲ. ಸುಮ್ಮನೆ ರೈತರಿಗೆ ಸರ್ಕಾರದವರು ಕಂದಾಯವನ್ನು ಜಾಸ್ತಿ ಮಾಡಿದ್ದಾರೆ ಎಂದು ವಿರೋಧ ಪಕ್ಷದವರು ಪ್ರಚಾರ ಮಾಡತಕ್ಕದ್ದು ಸರಿಯಲ್ಲ. ಈಗ ನಾವು ಖುಷ್ಕಿಜಮೀನಿಗೆ ಹೆಚ್ಚಿಸಿರತಕ್ಕ ರೇಟ್ಸ್ ಏನಿದೆ ಅದು ನಮ್ಮ ಅಕ್ಕ ಪಕ್ಕದ ಸಂಸ್ಥಾನಗಳಿಗಿಂತ ಹೆಚ್ಚಾಗುತ್ತಿಲ್ಲ. ತಮಿಳುನಾಡು ಮತ್ತು ಆಂಧ್ರ ಪ್ರದೇಶದ ಕಂದಾಯದ ದರಕ್ಕಿಂತಲೂ ನಮ್ಮದು ಕಡಿಮೆಯಾಗಿದೆ. ಪ್ಲಾಂಟೇಷನ್‌ಗಳವರಿಗೆ ಸರ್ಕಾರದವರು ವಶವಾಗಿ ಬಿಟ್ಟಿದ್ದಾರೆ ಎಂದು ಹೇಳತಕ್ಕದ್ದು ಸರಿಯಲ್ಲ. ಕಾಫಿ ಬೆಳೆಯುತಕ್ಕವರಿಗೆ ಎಕರೆಗೆ $1\frac{1}{2}$ ರೂಪಾಯಿ

(ಶ್ರೀ ಎಂ. ವಿ. ಕೃಷ್ಣಪ್ಪ)

2 ರೂಪಾಯಿಗಳ ಕಂದಾಯ ಇದ್ದದ್ದು ಈಗ 12 ರೂಪಾಯಿಗಳಾಗುತ್ತಿದೆ. ಈಗ ಅವರಿಗೆ 4½ಯ ಷ್ಟು 6 ರಷ್ಟು ಕಂದಾಯವನ್ನು ನಾವು ಹಾಕುತಿದ್ದೇವೆ. ಕಾಫಿ ಬೆಳೆಗೆ ನಾವು ಇನ್ನೂ ಅನುಕೂಲ ಮಾಡಿ ಕೊಡಬೇಕು. ಅದು ಇನ್ನೂ ಹೆಚ್ಚು ಅಭಿವೃದ್ಧಿಯಾಗಬೇಕು. ಏತಕ್ಕೆಂದರೆ ಅದರಿಂದ ನಮ್ಮ ದೇಶಕ್ಕೆ ಕೀರ್ತಿ ಬರುತ್ತಿದೆ. ಅದರಿಂದ ನಮ್ಮ ದೇಶಕ್ಕೆ ಬೇಕಾದಷ್ಟು ಫಾರಿನ್ ಎಕ್ಸ್‌ಜೇಂಜ್ ಬರುತ್ತದೆ. ಈಗ ಕಾಫಿಪ್ಲಾನ್‌ಟೇಷನ್‌ನವರಿಗೆ ಹಾಕುವ ಒಂದು ಪರ್ಸೆಂಟ್ ಕಂದಾಯ ಕಡಿಮೆ ಯೇನಲ್ಲ. ಈಗ ಅವರು ಕೊಡುತ್ತಿರುವ ಕಂದಾಯದ ಶೇಕಡಾ 600 ರಷ್ಟು ಜಾಸ್ತಿ ಯಾಗುತ್ತಿದೆ. ಡ್ರೈರೇಟ್ಸ್ 20-30 ಪರ್ಸೆಂಟ್ ಕಂದಾಯ ಜಾಸ್ತಿಯಾಗುತ್ತದೆ. Where is 30 per cent and where is 600 per cent? ಮುಳಬಾಗಿಲು ಮತ್ತು ಕೋಲಾರದಲ್ಲಿ 20 ಪರ್ಸೆಂಟ್ ಕಂದಾಯ ಜಾಸ್ತಿಯಾಗುತ್ತದೆ. ಒಂದುರೂಪಾಯಿ 20 ನಯಪೈಸಾ ಕಂದಾಯ ಜಾಸ್ತಿ ಯಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಶಿವಪ್ಪ.—ಮುಳಬಾಗಿಲಿಗೆ ನೀವು ಹೋಗಿ ಅಲ್ಲಿ ನೀವು ಭಾಷಣಮಾಡಿ ಆಗ ನಿಮಗೆ ಗೊತ್ತಾಗುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಈ ರೀತಿ ಸುಮ್ಮನೆ ನೀವು ವಿರೋಧಪಕ್ಷದವರು ಚಾಲೆಂಜ್ ಮಾಡುತ್ತಾ ನೀವು ಅಲ್ಲೇ ಇದ್ದೀರಿ, ನಾವು ಇಲ್ಲಿ ಇದ್ದೇವೆ. ಇದು ಪೂರ್ವದಿಂದ ನಡೆದು ಬಂದದ್ದು. ಇದು ಹೊಸದೇನೂ ಅಲ್ಲ. ಈಗ ನಮ್ಮ ರಾಜ್ಯದಲ್ಲಿ ರೈನ್‌ಫೆಡ್‌ವೆಟ್ ಏರಿಯಾ ಒಂದು ಮಿಲಿಯಾನ್ ಎಕರ್ಸ್ ಇದೆ. ಈಗ ಮಲೆನಾಡಿನಲ್ಲಿ ಬತ್ತವನ್ನು ಬೆಳೆಯುತ್ತಾರೆ. ಅದು ಬಹಳ ಕಷ್ಟಕರವಾದ ಬೇಸಾಯ ಮಲೆನಾಡಿನಲ್ಲಿ ಗದ್ದೆಗಳಿಗೆ ಮೃಗಗಳು ಬಂದು ಬೆಳೆಯನ್ನು ನಾಶಮಾಡುತ್ತವೆ ಎಂದು ಗದ್ದೆಯ ಹತ್ತಿರ ರೈತರು ಕೋವಿಯನ್ನು ಹಿಡಿದುಕೊಂಡು ಕಾಳಿತುಕೊಂಡಿರುತ್ತಾರೆ. ಆ ರೀತಿ ಅಲ್ಲಿ ಕಷ್ಟಪಟ್ಟು ಅವರು ಬತ್ತವನ್ನು ಬೆಳೆಯುತ್ತಾರೆ. ಸೌತ್ ಕೆನರ, ನಾರ್ತ್ ಕೆನರಾದಲ್ಲಿ ಸುಮಾರು 10ಲಕ್ಷ ಎಕರೆಗಳಲ್ಲಿ ಬತ್ತವನ್ನು ಬೆಳೆಯುತ್ತಿದ್ದಾರೆ. ಖಾನಾಪುರ, ಕೂರ್ಗ್ ಸೌತ್ ಕೆನರಾ ನಾರ್ತ್ ಕೆನರಾ ಈ ಪ್ರದೇಶಗಳಲ್ಲಿ ಸುಮಾರು 20 ಪರ್ಸೆಂಟ್ ಕಂದಾಯ ಜಾಸ್ತಿ ಆಗುತ್ತದೆ. ಈಗ ರೈನ್ ಫೆಡ್‌ವೆಟ್ ಏರಿಯದಿಂದ 33 ಲಕ್ಷ ರೂಪಾಯಿಗಳ ಕಂದಾಯ ಬರುತ್ತದೆ. ಈಗ ಕಂದಾಯದ ದರಗಳನ್ನು ಜಾಸ್ತಿ ಮಾಡುವುದರಿಂದ 39 ಲಕ್ಷರೂಪಾಯಿಗಳಾಗುತ್ತದೆ. ಎಂದರೆ ಒಟ್ಟಿನಲ್ಲಿ 6 ಲಕ್ಷರೂಪಾಯಿಗಳು ಮಾತ್ರ ಜಾಸ್ತಿ ಆಗುತ್ತದೆ. ಅದು 15 ಅಥವಾ 16 ಪರ್ಸೆಂಟ್ ವರ್ಕ್‌ಅಪ್ ಆಗುತ್ತದೆ. ಒಂದು ಎಕರೆಗೆ 1ರೂ 15 ನಯಾಪೈಸಾ ಅಥವಾ ಒಂದು 16 ನಯಾಪೈಸಾ ಬರುತ್ತದೆ. ಇದು ಬಹಳ ಹೆಚ್ಚೇನೂ ಅಲ್ಲ.

ಆಮೇಲೆ ರೈನ್ ಫೆಡ್‌ಗಾರ್ಡನ್‌ನಲ್ಲಿ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೇಳಿದಂತೆ ನಾರ್ತ್ ಕೆನರದಲ್ಲಿರತಕ್ಕ ಅಡಿಕೆ ತೋಟ ಸೌತ್ ಕೆನರಾದಲ್ಲಿರತಕ್ಕ ತೆಂಗಿನತೋಟ ಮತ್ತು ಮಲೆ ನಾಡಿನಲ್ಲಿರತಕ್ಕ ತೋಟಗಳೂ ಬರುತ್ತವೆ. ಇದರ ಏರಿಯಾ ಸುಮಾರು 1,15,000 ಎಕರೆಗಳಿದೆ. ಈಗ ಅವರು 7ಲಕ್ಷ ರೂಪಾಯಿಗಳ ಕಂದಾಯವನ್ನು ಕೊಡುತಿದ್ದಾರೆ. ಈಗ ಅದಕ್ಕೆ ಕಂದಾಯ ವನ್ನು ಜಾಸ್ತಿ ಮಾಡುವುದರಿಂದ ಒಂದು ಎಕರೆಗೆ ಆವರೇಜ್ 6 ರೂಪಾಯಿ ಅಥವ 7 ರೂಪಾಯಿಗಳು ಬರುತ್ತದೆ. ಎಂದರೆ ಒಟ್ಟಿನಲ್ಲಿ ಮೊದಲು 7 ಲಕ್ಷ ರೂಪಾಯಿಗಳ ಕಂದಾಯವನ್ನು ಕೊಡುತ್ತಿದ್ದರು. ಇನ್‌ಕ್ರಿಸ್ಡ್‌ರೇಟ್ ಪ್ರಕಾರ 15 ಲಕ್ಷರೂಪಾಯಿಗಳ ಕಂದಾಯವನ್ನು ಕೊಡುತ್ತಾರೆ. ಈ ವಿಚಾರದಲ್ಲಿ ಯಾರೂ ವಾದ ಮಾಡುವುದಿಲ್ಲ. ಇದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ.

ಇನ್ನೂ ಇಂಟಿಗ್ರೇಟೆಡ್‌ವೆಟ್ ಏರಿಯಾಕ್ಕೂ ಮತ್ತು ಡ್ರೈ ಏರಿಯಾಕ್ಕೂ ಯಾವ ರೀತಿ ರೇಟು ಜಾಸ್ತಿಯಾಗುತ್ತದೆಯೋ ಅದೇರೀತಿ ವೆಟ್ ಏರಿಯಾಕ್ಕೂ ಕಂದಾಯಜಾಸ್ತಿ ಆಗುತ್ತದೆ. ವೆಟ್ ಏರಿಯಾಕ್ಕೆ ವಾಟರ್ ರೇಟ್ ಜೇರೆ ಮಿಕ್ಸ್ ಆಗುತದೆ. ಇದರಿಂದ ಈಗ 14 ಲಕ್ಷ ರೂಪಾಯಿಗಳು ಬರುತ್ತಿದೆ. ಆ ಜಮೀನುಗಳಿಗೆ ಕಂದಾಯನ್ನು ಜಾಸ್ತಿ ಮಾಡುವುದರಿಂದ 20 ಲಕ್ಷ ರೂಪಾಯಿಗಳು ಬರುತ್ತದೆ. ಎಂದರೆ ಒಟ್ಟಿನಲ್ಲಿ 6 ಲಕ್ಷ ರೂಪಾಯಿಗಳು ಜಾಸ್ತಿ ಯಾಗುತ್ತದೆ.

ಈಗ ಒಟ್ಟು ಲ್ಯಾಂಡ್‌ರೆವಿನ್ಯೂನಿಂದ ಸರ್ಕಾರಕ್ಕೆ 3,05,00,000ರೂಪಾಯಿಗಳು ಬರು ತ್ತಿದೆ. ಕಂದಾಯದ ದರವನ್ನು ಜಾಸ್ತಿ ಮಾಡಿರುವುದರಿಂದ 4,4400,00 ರೂಪಾಯಿಗಳು ಆಗು ತ್ತದೆ. ಎಂದರೆ ಒಟ್ಟಿನಲ್ಲಿ 1,40,00,000 ರೂಪಾಯಿಗಳು ಮಾತ್ರ ಜಾಸ್ತಿಯಾಗುತ್ತದೆ. "It works out to less than 50 per cent increase" ವಾಟರ ರೇಟ್, ಇಂಟಿಗ್ರೇಟೆಡ್ ವಾಟರ್‌ರೇಟ್ ಡ್ರೈಅಸೆಸ್‌ಮೆಂಟ್ ಮತ್ತು ಗಾರ್ಡನ್ ಅಸೇಸ್‌ಮೆಂಟ್ ಎಲ್ಲಾಸೇರಿದರೂ ಕೂಡ ಅದರಿಂದ 5 ಕೋಟಿ ರೂಪಾಯಿಗಳು ಮಾತ್ರ ಬರುತ್ತದೆ. ರೈತ ಎಲ್ಲಾ ರೀತಿಯಿಂದಲೂ ಕೊಡುವ ಕಂದಾಯದಮೊತ್ತ 10 ಕೋಟಿ ರೂಪಾಯಿಗಳಿಗೆ ಮೀರದರೀತಿಯಲ್ಲಿ ಮಾಡುತ್ತೇವೆಂದು

ಮುಖ್ಯ ಮಂತ್ರಿಗಳೇ ಭರವಸೆಯನ್ನು ಕೊಟ್ಟಿದ್ದಾರೆ. ಈಗ ವಾಟರ್‌ರೇಟ್ ಡ್ರೈ ಅಸೆಸ್‌ಮೆಂಟ್, ಗಾರ್ಡನ್ ಅಸೆಸ್‌ಮೆಂಟ್ ಎಲ್ಲಾ ಸೇರಿದರೂ ಕೂಡ 5 ಕೋಟಿ ರೂಪಾಯಿಗಳು ಮಾತ್ರ ಆಗುತ್ತದೆ. ಇದನ್ನು ಎರಡರಷ್ಟು ಮಾಡುವುದಕ್ಕೆ ಅನೇಕಸಲ ನೀವೆಲ್ಲರೂ ಒಪ್ಪಿದಿ(ರಿ. ನಾವು ಮೊದಲು ಏನು ಕಂದಾಯವನ್ನು ಜಾಸ್ತಿ ಮಾಡಬೇಕೆಂದು ಉದ್ದೇಶವನ್ನು ಇಟ್ಟುಕೊಂಡಿದ್ದೇವೋ ಅದಕ್ಕಿಂತಲೂ ಈಗ ಕಡಿಮೆ ಮಾಡಿದ್ದೇವೆ. ಅವರೆ ವಿರೊಧ ಪಕ್ಷದವರು ಉಪವಾಸ ಮಾಡಿದಕ್ಕೋಸ್ಕರ ಈಗ ನಾವು ಕಂದಾಯದ ರೇಟನ್ನು ಕಡಿಮೆ ಮಾಡಿದ್ದೇವೆಂದು ತಾವು ತಿಳಿದು ಕೊಳ್ಳಬಾರದು. ಮೊದಲು ಹಾಕಿದ್ದು ಸ್ವಲ್ಪ ಜಾಸ್ತಿ ಎಂದು ನಮಗೆ ಕಂಡುಬಂದದ್ದರಿಂದ ಮೊದಲು ಹಾಕಿದ $6\frac{1}{4}$ ಪರ್ಸೆಂಟಿಗೆ ಬದಲು ಶೇಕಡಾ 4ಕ್ಕೆ ಇಳಿಸೋಣ ಎಂದು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಈ ದೃಷ್ಟಿಯಿಂದ ಈ ತಿದ್ದುಪಡಿಮಸೂದೆಯನ್ನು ನಾವು ಇಲ್ಲಿ ತಂದಿದ್ದೇವೆ. ಇದಕ್ಕೆ ಈ ಮಾನ್ಯ ಸಭೆಯವರು ಒಪ್ಪಿಗೆಯನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. DEPUTY SPEAKER.—The question is ;

"That the Mysore Land Revenue (Amendment) Bill, 1965, be taken into consideration."

The motion was adopted.

CLAUSE 2.

Mr. DEPUTY SPEAKER.—There are two amendments, but as they have come late, I am rejecting the amendments.

The question is :

"That clause 2 stand part of the Bill."

The motion was adopted.

Clause 2 was added to the Bill.

CLAUSES 3 to 9.

Mr. DEPUTY SPEAKER.—The question is :

"That clauses 3 to 9, both inclusive, stand part of the Bill."

The motion was adopted.

Clauses 3 to 9, both inclusive, were added to the Bill.

CLAUSE 1, TITLE AND PREAMBLE

Mr. DEPUTY SPEAKER.—The question is :

"That clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass

Sri M. V. KRISHNAPPA.—Sir, I move:

"That the Land Revenue (Amendment) Bill, 1965, be passed."

Mr. DEPUTY SPEAKER—The question is :

"That the Mysore Land Revenue (Amendment) Bill, 1965, be passed."

The motion was adopted.

MYSORE LAND REFORMS (AMENDMENT) BILL, 1965

(Debate continued)

5-30 P.M.

†ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಸ್ವಾಮಿ, ನಾನು ನಿನ್ನೆ ಮಾತನಾಡುವಾಗ, ಭೂಮಸೂದೆಯ ಮೂಲ ಮಸೂದೆಯನ್ನು ಸ್ವಾಗತಿಸಿದ್ದರೂ, ಈ ತಿದ್ದುಪಡಿ ಮಸೂದೆಯಲ್ಲಿ ಅಡಕವಾಗಿರುವ ಕೆಲವು ತಿದ್ದುಪಡಿಗಳನ್ನು ಬಹಳ ತೀವ್ರವಾಗಿ ವಿರೋಧಿಸುತ್ತೇನೆ. ಏತಕ್ಕೆಂದರೆ, ಈ ತಿದ್ದುಪಡಿಯಿಂದ ಇನ್ನೂ ಕೆಲವು ಚಾಲಗೇಣಿ ರೈತರನ್ನು ನೆಲ ಬಿಟ್ಟು ಓಡಿಸುವ ಪರಿಸ್ಥಿತಿ ಇದೆ. ಈಗಾಗಲೇ ಈ ಮಸೂದೆಯನ್ನು ಜಾರಿಗೆ ತರುವವರಾದ ತಾವು ದೀರ್ಘ ಕಾಲವನ್ನು ಇದರಲ್ಲಿ ಕಳೆದಿದ್ದೀರಿ. ಸಾಧಾರಣವಾಗಿ ಈ 17 ವರ್ಷಗಳಿಂದ ಯಾರ್ಯಾರು ಭೂಮಾಲಿಕರಿದ್ದಾರೋ ಅವರ ಹಿತರಕ್ಷಣೆಯನ್ನು ಕಾಪಾಡುತ್ತಿದ್ದೀರಿ. ಯಾರು ನಿಜವಾದ ನೇಗಿಲಯೋಗಿಯೊ ಅವನು ನೆಲ ಬಿಟ್ಟು ಹೋಗುವಂತೆ ತಾವು ಮಾಡಿದ್ದೀರಿ. ಈಗಾಗಲೇ ಸಾಧಾರಣವಾಗಿ ಶೇಕಡ 50ಕ್ಕೂ ಮೀರಿ ಚಾಲುಗೇಣಿ ರೈತರು ತಮ್ಮ ಹೊಲವನ್ನು ಬಿಟ್ಟು ಹೋಗಿ, ಭಿಕ್ಷೆ ಬೇಡುತ್ತಿದ್ದಾರೆ; ತಿರುಕರ ಹಾಗೆ ತಿರುಪೆಗೆ ಹಚ್ಚಿದ್ದಾರೆ. ಇದರಲ್ಲಿಯೂ ಕೂಡ ಇನ್ನೂ ಒಂದು ಸಮನ್ವಯ ಕಾನೂನನ್ನು ತರದೆ, ಇನ್ನೂ ಕೆಲವು ಒಕ್ಕಲುಗಳು ತಮ್ಮ ಸಾಗುನೆಲವನ್ನು ಬಿಟ್ಟು ಹೋಗುವಂತೆ ತಾವು ಬಿಲ್ಲಿನಲ್ಲಿ ಕೆಲವು ತಿದ್ದುಪಡಿಗಳನ್ನು ಅಡಕ ಮಾಡಿದ್ದೀರಿ. ಈ ಮಠಗಳ ವಿಷಯದಲ್ಲಿ ಈಗಾಗಲೇ ಸರಕಾರದ ವತಿಯಿಂದ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಅದು ನನಗೆ ಅರ್ಥವಾಗುವುದಿಲ್ಲ. ಕೆಲವು ದೇವಸ್ಥಾನಗಳನ್ನು ಬಿಟ್ಟು, ಬಾಕಿ ಮಠಗಳಿಗೆ ಮಸೂದೆಯ ಮಿತಿ ಬರುತ್ತದೆ ಎಂದು ಹೇಳುವ ಸಂದರ್ಭವನ್ನು ಇಲ್ಲಿ ಒದಗಿಸಿ ಕೊಟ್ಟಿದ್ದಾರೆ. ಈ 20 ದೇವಸ್ಥಾನಗಳ ಬಗ್ಗೆ ಒಂದು ಸಂಶಯವಾಗುತ್ತಿದೆ. For the words "from Government" the words "from the Government or lands belonging to or held on lease from religious or charitable institutions managed by or under the control of the State Government shall be substituted." ಎಂದು ಹೇಳಿದ್ದಾರೆ. ರಿಲಿಜಿಯಸ್ ಇನ್‌ಸ್ಟಿಟ್ಯೂಶನ್ನುಗಳು ಎಂದರೆ ನನಗೆ ಅರ್ಥವಾಗುವುದಿಲ್ಲ. ನಮ್ಮ ಜಿಲ್ಲೆಯ ಮಟ್ಟಿಗೆ ಮತ್ತು ಮೈಸೂರು ರಾಜ್ಯದ ಮಟ್ಟಿಗೆ ಹೇಳುವುದಾದರೆ, ಕೆಲವು ಧಾರ್ಮಿಕ ಸಂಸ್ಥೆಗಳು ತಮ್ಮ ಭೂಮಿಯನ್ನು ಹೊಂದಿವೆ; ಮಾತ್ರವಲ್ಲದೆ, ಕೆಲವು ಧಾರ್ಮಿಕ ಸಂಸ್ಥೆಗಳು ಮತ್ತು ಮಠಗಳು ರಾಜಕೀಯದ ಒಂದು ದೊಡ್ಡ ಬೀಡು ಆಗಿವೆ. ಇಲ್ಲಿ ಇರುವಷ್ಟು ರಾಜಕೀಯ, ರಾಜಕೀಯ ಪಕ್ಷಗಳು ಇನ್ನೆಲ್ಲಿಯೂ ಇರುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಮಠಗಳಿಗೆ ಸಂಬಂಧಪಟ್ಟಂತೆ, ಸಾಧಾರಣವಾಗಿ 100-150 ಒಕ್ಕಲುಗಳು ಮಠದ ನೆಲವನ್ನು ಸಾಗು ಮಾಡುತ್ತಿದ್ದಾರೆ. ಒಂದು ವೇಳೆ ಈ ಮಠಗಳಿಗೆ ಈ ರಿಯಾಯಿತಿ ಕೊಟ್ಟಲ್ಲಿ, ನಾನು ಸರಕಾರಕ್ಕೆ ಹೇಳುತ್ತೇನೆ. ತಾವು ಏನು ಮೂಲ ಉದ್ದೇಶವನ್ನು ಇಟ್ಟುಕೊಂಡಿದ್ದೀರೊ, ಒಕ್ಕಲುಗಳ ಹಿತವನ್ನು ರಕ್ಷಿಸುವ, ಉಳುವವನಿಗೆ ಹೊಲವನ್ನು ದೊರಕಿಸುವ ಧ್ಯೇಯವನ್ನು ಏನು ಇಟ್ಟುಕೊಂಡಿದ್ದೀರೊ, ಆ ಧ್ಯೇಯ ಇದರಲ್ಲಿ ಸಂಪೂರ್ಣವಾಗಿ ಹಾಳಾಗಿ ಹೋಗುತ್ತದೆ.

ತಾವು ಕೆಲವು ಪರಿಮಿತಿಯನ್ನು ವಿನಾಯಿತಿ ಗೊಳಿಸಿದ್ದೀರಿ.

As regards plantations, the limit of one hundred acres for development of plantation fixed in clause (ii) of the explanation to section 104 will be deleted, and the limitation on the interspersed land specified by clause (iii) of the same explanation will also be deleted.